ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 12 ಸೋಮವಾರ 2023

₹4

ಸಂಪುಟ: 44 | ಸಂಚಿಕೆ: 57 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ವಾಸವಿರುವವರಿಗೆ ಇಡಬ್ಲ್ಯೂಎಸ್ ಮನೆ ಮಂಜೂರಾತಿ ಮಾಡುವಂತೆ ಸಿಎಂಗೆ ಮನವಿ



ಮೈಸೂರು, ಜೂ.11(ಎಂಕೆ)– ಮೈಸೂರಿನ ರಾಮಕೃಷ್ಣನಗರದ ಹೆಚ್–ಬ್ಲಾಕ್‌ನಲ್ಲಿರುವ ಮುಡಾದ ಇಡಬ್ಲ್ಯೂಎಸ್ ಮನೆಗಳಲ್ಲಿ ವಾಸವಾಗಿರುವವರಿಗೆ ಮನೆಗಳನ್ನು ಮಂಜೂರು ಮಾಡಿಕೊಡುವಂತೆ ಅಲ್ಲಿನ ನಿವಾಸಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಸಮುದಾಯದ 26 ಬಡ ಕುಟುಂಬಗಳು ಕಳೆದ 25 ವರ್ಷಗಳಿಂದ ಇಡಬ್ಲ್ಯೂಎಸ್ ಮನೆಗಳಲ್ಲಿ ವಾಸವಿದ್ದು, ಕುಡಿಯುವ ನೀರು, ಶೌಚಾಲಯ ಸೇರಿದಂತೆ ಯಾವುದೇ ಮೂಲ ಸೌಕರ್ಯಗಳಿಲ್ಲ ಹಾಗೂ ಮಂಜೂರಾತಿ ಸಂಬಂಧ ಹಲವಾರು ಬಾರಿ ಮನವಿ ನೀಡಿದ್ದ ಹಿನ್ನೆಲೆಯಲ್ಲಿ ಮುಡಾದಲ್ಲಿ ಹರಾಜು ಪ್ರಕ್ರಿಯೆ ನಡೆಸಿ ವಾಸವಿರುವವರ ಹೆಸರಿಗೆ ಮಂಜೂರಾತಿ ಮಾಡುತ್ತೇವೆಂದು ಹಣವನ್ನು ಕಟ್ಟಿಸಿಕೊಳ್ಳಲಾಗಿದೆ. ಆದರೆ ಇದುವರೆಗೂ ಮಂಜೂರಾತಿ ಮಾಡಿಕೊಟ್ಟಿಲ್ಲ. ಆದ್ದರಿಂದ ಕೂಡಲೇ ವಾಸವಿರುವವರ ಹೆಸರಿಗೆ ಇಡಬ್ಲ್ಯೂಎಸ್ ಮನೆಗಳನ್ನು ಮಂಜೂರಾತಿ ಮಾಡಿಕೊಡುವುದರ ಜೊತೆಗೆ ಮೂಲ ಸೌಕರ್ಯ ಒದಗಿಸುವಂತೆ ಮನವಿ ಮಾಡಿದರು. ಮನವಿ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಡಿಸಿ ಜೊತೆಗೆ ಮಾತನಾಡಿ, ಅನುಕೂಲ ಮಾಡಿಕೊಡುವುದಾಗಿ ತಿಳಿಸಿದರು.

ಆರೋಗ್ಯ, ಪೋಷಣೆ ಸಮೀಕ್ಷೆ ಆರಂಭ

ಬೆಂಗಳೂರು, ಜೂ.11– ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಎಚ್‌ಎಫ್‌ಡಬ್ಲ್ಯುಡಿ) ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಜ್ಯದಲ್ಲಿ ಆರೋಗ್ಯ ಮತ್ತು ಪೌಷ್ಟಿಕತೆಯ ಸಮೀಕ್ಷೆಯನ್ನು ಪ್ರಾರಂಭಿಸಿದೆ.

ಇದು ಉತ್ತಮ ನೀತಿಗಳನ್ನು ರೂಪಿಸಲು ಮತ್ತು ಅನುಷ್ಠಾನವನ್ನು ಸುಗಮಗೊಳಿಸಲು ಇಲಾಖೆಗಳಿಗೆ ಸಹಾಯ ಮಾಡುತ್ತದೆ ಎಂದು ಸರ್ಕಾರ ಹೇಳಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಮೊಬೈಲ್ ಆ್ಯಪ್ ಮೂಲಕ ಸಮೀಕ್ಷೆಯನ್ನು ನಡೆಸಲಾಗುವುದು. ಇದನ್ನು ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಅಧಿಕಾರಿಗಳ ಸಮನ್ವಯದಲ್ಲಿ ವಿವರಗಳನ್ನು ಭರ್ತಿ ಮಾಡಲು ನೀಡಲಾಗುತ್ತದೆ. ದೇಶದಲ್ಲಿ ಇದೇ ಮೊದಲ ಬಾರಿಗೆ ಇಂತಹ ಸಮೀಕ್ಷೆ ನಡೆಯಲಿದೆ ಎಂದು ಹೇಳಲಾಗಿದೆ.


ಈಗಾಗಲೇ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನಲ್ಲಿ ನಡೆದ ಪ್ರಾಯೋಗಿಕ ಸಮೀಕ್ಷೆ ಯಶಸ್ವಿಯಾಗಿದೆ ಎಂದು ಹೇಳಲಾಗಿದ್ದು, ಸಮೀಕ್ಷೆಯಲ್ಲಿನ ವಿವರಗಳು ಅಪೌಷ್ಟಿಕತೆ, ಗರ್ಭಿಣಿ ಮಹಿಳೆಯರಲ್ಲಿ ರಕ್ತಹೀನತೆ, ಹೆಚ್ಚಿನ ಅಪಾಯದ ಗರ್ಭಧಾರಣೆ, ಕುಟುಂಬ ಯೋಜನೆ ವಿಧಾನಗಳನ್ನು ಒಳಗೊಂಡಿರುತ್ತದೆ. ಮಾನಸಿಕ ಆರೋಗ್ಯ ಮತ್ತು ಕುಟುಂಬಗಳಲ್ಲಿನ ಅನುವಂಶಿಕ ಕಾಯಿಲೆಗಳನ್ನು ಸಹ ಪರಿಶೀಲಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಸಮೀಕ್ಷೆಯು ದುರ್ಬಲ ಜಿಲ್ಲೆಗಳನ್ನು ಗುರುತಿಸಲು ಮತ್ತು ಅವುಗಳಿಗೆ ಬಜೆಟ್ ಹಂಚಿಕೆಗಳನ್ನು ಮಾಡುವ ಗುರಿ ಹೊಂದಿದೆ. ಈ ಪ್ರಕ್ರಿಯೆಯು ಜೂ.30ರಂದು ಮುಕ್ತಾಯಗೊಳ್ಳಲಿದೆ. ನಂತರ ಇಲಾಖೆಗಳು ಕರ್ನಾಟಕದ ಆರೋಗ್ಯ ಸ್ಥಿತಿಯನ್ನು ಗುರುತಿಸಲು ಮತ್ತು ಸಮಸ್ಯೆಗಳನ್ನು ಪರಿಹರಿಸಲು ವಿವಿಧ ಯೋಜನೆಗಳನ್ನು ಸೂಚಿಸಲು ಸಾಧ್ಯವಾಗುತ್ತದೆ ಎಂದು ಹೇಳಲಾಗಿದೆ.

ಮೆಕ್ಯಾನಿಕ್ ನಾಪತ್ತೆ

ಮೈಸೂರು, ಜೂ.11–ಮೆಕ್ಯಾನಿಕ್ ಕೆಲಸ ಮಾಡಿಕೊಂಡಿದ್ದ ವ್ಯಕ್ತಿಯೊಬ್ಬರು ನಾಪತ್ತೆಯಾಗಿರುವ ಘಟನೆ ಮಂಡಿ ಪೊಲೀಸ್ ಠಾಣೆಯಲ್ಲಿ ತಡವಾಗಿ ಬೆಳಕಿಗೆ ಬಂದಿದೆ. ಇಲ್ಲಿನ ನಿವಾಸಿ ನೌಶಾದ್(30) ನಾಪತ್ತೆಯಾದವರು. ನಗರದ ಮಿಷನ್ ಆಸ್ಪತ್ರೆ ಬಳಿ ಮೆಕ್ಯಾನಿಕ್ ಕೆಲಸ ಮಾಡಿಕೊಂಡಿದ್ದು, ಮೇ 28ರಂದು ಮಧ್ಯಾಹ್ನ 12 ಗಂಟೆಗೆ ಕೆಲಸ ಮೇಲೆ ಕುಶಾಲನಗರಕ್ಕೆ ಹೋಗಿ ಬರುತ್ತೇನೆ ಎಂದು ಹೇಳಿ ಹೋದವರು ವಾಪಸ್ ಬಂದಿಲ್ಲ. ಸ್ನೇಹಿತರು, ಸಂಬಂಧಿಕರನ್ನು ವಿಚಾರಿಸಿದರೂ ಯಾವುದೇ ಮಾಹಿತಿ ತಿಳಿದು ಬಂದಿಲ್ಲ ಎಂದು ನೌಶಾದ್ ಪತ್ನಿ ಸುಬಾನ ಬಾನು ಮಂಡಿ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ದೂ.ಸಂ.0821–2418339, 2418313, 2418513 ಹಾಗೂ ಮೊ.ನಂ.9845862184 ಸಂಪರ್ಕಿಸುವಂತೆ ಕೋರಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

12.6.2023 ಸೋಮವಾರ, ಮಳೆ ನಕ್ಷತ್ರ:
ಮೃಗಶಿರ, 08.06.2023 ರಿಂದ 21.06.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ,
ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ನವಮಿ, ನಕ್ಷತ್ರ: ಪೂಭಾ, ರಾಹುಕಾಲ: ಬೆಳಿಗ್ಗೆ 7.30ರಿಂದ 9ರವರೆಗೆ

- **ಮೈಸೂರು ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್:** ಬೃಹತ್ ಉದ್ಯೋಗ ಮೇಳ, ಸ್ಥಳ: ಕಾಲೇಜಿನ ಆವರಣ, ಚಿಕ್ಕಹಳ್ಳಿ, ಬೆಳಗ್ಗೆ 9.30ರಿಂದ (ಮಾಹಿತಿಗೆ ಸಂಪರ್ಕಿಸಿ: ಮೊ.9731434074, 9742472777).
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಚರ್ಮ ರೋಗಿಗಳಿಗೆ ಚಿಕಿತ್ಸಾ ಶಿಬಿರ, 'ಆಯುರ್ವೇದ ಪಂಚಕರ್ಮ', ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ, ಆಲನಹಳ್ಳಿ, ಬೆಳಗ್ಗೆಯಿಂದ.
- **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮೈಸೂರು :** ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಚಿತ್ರ 'ನನ್ ಹೆಸ್ರು ಕಿಶೋರ ಏಳ್ ಪಾಸ್ ಎಂಟು...' ಪ್ರದರ್ಶನ, ಚಾಲನೆ: ಕೆ.ಆರ್.ಕ್ಷೇತ್ರದ ಶಾಸಕ ಶ್ರೀವತ್ಸ ಅವರಿಂದ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ, ಸಂಜೆ 6 ಗಂಟೆಗೆ.
- **ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ:** 9ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಯೋಗ ಆರೋಗ್ಯ ಶಿಬಿರ, ಉದ್ಘಾಟನೆ: ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ಅಧ್ಯಕ್ಷತೆ: ಪ್ರಾಚಾರ್ಯರಾದ ಡಾ.ಗಜಾನನ ಹೆಗ್ಡೆ, ಸ್ಥಳ: ಆಸ್ಪತ್ರೆ ಆವರಣ, ಕೆಆರ್‌ಎಸ್ ರಸ್ತೆ, ಬೆಳಗ್ಗೆ 7 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾ ಪರಂಪರೆ: ಬಾನುಲಿ ಸರಣಿ, ಪ್ರಸ್ತುತಿ– ಡಾ.ಎ.ಎಸ್.ಚಂದ್ರಶೇಖರ್, 6.35 ಹಾಗೂ ಸಂಜೆ 5ಕ್ಕೆ: "ಮಹಾ ಮೋಜಣಿ" ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ–ಡಾ.ಗಜಾನನ ಶರ್ಮ, 6.40 ಪದಸಂಸ್ಕೃತಿ: ಪ್ರಸ್ತುತಿ– ಪರಮೇಶ್ವರ ವಿ. ಭಟ್, 7.15 ಭಾವಗೀತೆಗಳು: ಭದ್ರಿ ಪ್ರಸಾದ್, ಕೆ.ಎಸ್. ಸುರೇಖಾ, 9.00 ನೆನಪಿನಂಗಳ: ಧ್ವನಿ ಭಂಡಾರದಿಂದ ಆಯ್ದ ಕಾರ್ಯಕ್ರಮ ಹಿರಿಯ ಭಾಷಾ ತಜ್ಞರು ಹಾಗೂ ಬರಹಗಾರರಾದ ಕಿಕ್ಕೇರಿ ನಾರಾಯಣ ಅವರೊಂದಿಗೆ ಜಿ.ಕೆ. ರವೀಂದ್ರ ಕುಮಾರ್ ಅವರು ನಡೆಸಿದ್ದ ಸಂವಾದ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, 10.00 ಲಯ ಸಂಭ್ರಮ, ಮೃದಂಗದ ಪ್ರಾಚೀನತೆ ಮತ್ತು ಇತಿಹಾಸ, ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರ ನಾಮ: ಮಾನಸ ನಯನ, 12.45 ನಮ್ಮ ಆರೋಗ್ಯ: ಯೋಗದತ್ತ ಜಗತ್ತು ಕುರಿತು ಕೃಪಾ ಪಡ್ಕೆ ಅವರೊಂದಿಗೆ ಮಾತುಕತೆ, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆ– ಅರ್ಚನಾ ಕುಲಕರ್ಣಿ, 3.00 ಡಿ. ಪಶುಪತಿ–ಹಾಡುಗಾರಿಕೆ. **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ, ಭಾಗವಹಿಸುವ ವೈದ್ಯರು –ಡಾ.ಅಸ್ನಾ ಉರುಜ್, ವಿಷಯ– ಆಹಾರ ಪದ್ಧತಿ ಮತ್ತು ಆರೋಗ್ಯ, ಪ್ರಸ್ತುತಿ –ಕೆ.ಬಿ.ಮೀನಾ, 4.30 ಝೇಂಕಾರ, 4.45 ಹಿಂದಿ ಪಾಠ, ಪ್ರಸ್ತುತಿ–ಎಸ್. ಈಶ್ವರ್ ಭಟ್, 6.55 ಕೃಷಿರಂಗ: ಕಿಸಾನ್‌ವಾಣಿ– ಭತ್ತದ ಉತ್ಪಾದನಾ ತಾಂತ್ರಿಕತೆ ಗಳನ್ನು ಕುರಿತ ನೇರ ಫೋನ್ ಇನ್ ಕಾರ್ಯಕ್ರಮ, ಭಾಗವಹಿಸುವವರು ಡಾ.ಸಿ.ರಾಮಚಂದ್ರ ಮತ್ತು ಡಾ.ಆರ್.ಎನ್.ಪುಷ್ಪ, ಪ್ರಸ್ತುತಿ–ಎನ್.ಕೇಶವ ಮೂರ್ತಿ. **ರಾತ್ರಿ:** 9.30 ಹಳ್ಳಿ ಹಾಡು: ಲಕ್ಷ್ಮೀ ಸಾಗಾದ ಕೆಂಚಮ್ಮ ಹಾಗೂ ಸಂಗಡಿಗರೊಂದಿಗೆ ಸಂದರ್ಶನ, ಪ್ರಸ್ತುತಿ– ಅಬ್ದುಲ್ ರಶೀದ್, 10ಕ್ಕೆ ನಾಟಕ, 10.30 ಸವಿನೆನಪು.

ಅಂಬೇಡ್ಕರ್, ಬಸವಣ್ಣರ ಆಶಯದಂತೆ ಸಿದ್ದರಾಮಯ್ಯ ಸರ್ಕಾರದಲ್ಲಿ ಮಹಿಳೆಯರ ಸಬಲೀಕರಣಕ್ಕೆ ಆದ್ಯತೆ

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಮತ





ಮೈಸೂರು, ಜೂ.11(ಎಂಟಿವೈ)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯ, ಬಸವಣ್ಣನವರ ಸಮಾನತೆಯ ಸಂದೇಶದಂತೆ ಮಹಿಳಾ ಸಬಲೀಕರಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಆದ್ಯತೆ ನೀಡುವುದರೊಂದಿಗೆ ನುಡಿದಂತೆ ನಡೆದು ಗ್ಯಾರಂಟಿ ಕಾರ್ಯಕ್ರಮ ಜಾರಿಗೊಳಿಸುವ ಐತಿಹಾಸಿಕವಾದ ತೀರ್ಮಾನ ಕೈಗೊಂಡಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಭಾನುವಾರ ಮಧ್ಯಾಹ್ನ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಮಹತ್ವಾಕಾಂಕ್ಷೆ ಶಕ್ತಿ ಯೋಜನೆಗೆ ಚಾಲನೆ ನೀಡಿ, ಮಹಿಳಾ ಪ್ರಯಾಣಿಕರಿಗೆ ಗುಲಾಬಿ ಹೂವು–ಸಿಹಿ ಹಾಗೂ ಟಿಕೆಟ್ ಕೊಟ್ಟು ವಿಧ್ಯುಕ್ತವಾಗಿ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, ಮಹಿಳೆಯರು ಪುರುಷರಂತೆ ಶ್ರಮವಹಿಸಿ ದುಡಿದರೂ ಸಾಮಾಜಿಕ ನ್ಯಾಯ ದೊರೆಯುತ್ತಿಲ್ಲ ಎನ್ನುವ ಕೂಗು ಕೇಳಿ ಬರುತ್ತಿದೆ. ಮಹಿಳೆಯರು ಈ ಹಿಂದಿನಿಂದಲೂ ಸಮಾನತೆ, ಶಿಕ್ಷಣ, ಆರ್ಥಿಕ ಸ್ವಾವಲಂಬನೆ, ರಾಜಕೀಯ ಅಧಿಕಾರ ಕೊಡಿ ಎನ್ನುವ ಹೋರಾಟ ಮಾಡುತ್ತಲೇ ಇದ್ದಾರೆ. ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಮಹಿಳೆಯರು ತಮ್ಮ ಹಕ್ಕುಗಳನ್ನು ಪ್ರತಿಪಾದಿಸುತ್ತಲೇ ಇದ್ದಾರೆ ಎಂದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ನಮ್ಮ ಸರ್ಕಾರ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿ, ಆಡಳಿತ ನಡೆಸಲು ಬದ್ಧವಾಗಿದೆ ಎಂದರು.

ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ಬಿಡುಗಡೆ ಮಾಡಿದ್ದ ಪ್ರಣಾಳಿಕೆಯಲ್ಲಿ 5 ಗ್ಯಾರಂಟಿ ಯೋಜನೆಯನ್ನು ಅನುಷ್ಠಾನಗೊಳಿಸಲು ಭರವಸೆ ನೀಡಲಾಗಿತ್ತು. ಸರ್ಕಾರ ಅಧಿಕಾರಕ್ಕೆ ಬಂದ 20 ದಿನದಲ್ಲಿಯೇ ಐದು ಪ್ರಮುಖ ಗ್ಯಾರಂಟಿ ಯೋಜನೆಗಳ ಪೈಕಿ ಇಂದು ಮೊದಲ ಕಾರ್ಯಕ್ರಮವಾದ ಶಕ್ತಿಯೋಜನೆಯನ್ನು ಅನುಷ್ಠಾನಗೊಳಿಸಿ ಸರ್ಕಾರಕ್ಕೆ ಜನರ ಬಗ್ಗೆ ಇರುವ ಬದ್ಧತೆ ಪ್ರದರ್ಶಿಸಿದೆ. ಪ್ರತಿಪಕ್ಷಗಳ ನಾಯಕರು ಖಜಾನೆ ಖಾಲಿ ಮಾಡುವಂತಹ ಈ ಯೋಜನೆಗಳನ್ನು ಜಾರಿಗೆ ತರಲು ಸಾಧ್ಯವಿಲ್ಲವೆಂದು ಟೀಕೆ–ಟಿಪ್ಪಣಿ ಮಾಡುವ ಮೂಲಕ ಗೊಂದಲ ಸೃಷ್ಟಿಗೆ ಮುಂದಾಗಿದ್ದರು. ಪ್ರತಿಪಕ್ಷಗಳ ಟೀಕೆ–ಟಿಪ್ಪಣಿಗಳಿಗೆ ತಕ್ಕ ಉತ್ತರ ಕೊಟ್ಟಿದ್ದೇವೆ. ಮುಖ್ಯಮಂತ್ರಿಗಳು ಕೊಟ್ಟ ಮಾತನ್ನು ಉಳಿಸಿಕೊಂಡಿದ್ದಾರೆ ಎಂದು ತಿಳಿಸಿದರು.

ಶಕ್ತಿ ಯೋಜನೆಗೆ ವರ್ಷಕ್ಕೆ 4050 ಕೋಟಿ ರೂ. ಬೇಕಾಗುತ್ತದೆ. ಮಹಿಳೆಯರು ಬಸ್ ದರವನ್ನು ಪಾವತಿಸುವುದು ನಿಲ್ಲಲಿದೆ. ಉಚಿತವಾಗಿ ಬಸ್‌ನಲ್ಲಿ ಪ್ರಯಾಣಿಸಬಹುದೆಂದು ಬೇರೆ ಬೇರೆ ಕಡೆಗಳಿಗೆ ಹೋಗಬಾರದು. ಕಾರ್ಖಾನೆಗಳು, ಗಾರ್ಮೆಂಟ್ಸ್ ಮೊದಲಾದ ಕಡೆಗಳಲ್ಲಿ ಕೆಲಸ ಮಾಡುವ ಮಹಿಳೆಯರು ಉಚಿತವಾಗಿ ತೆರಳಬಹುದು. ದೇಶದಲ್ಲೇ ಯಾವುದೇ ಸರ್ಕಾರ ಇಂತಹ ಜನಪರ ಕಾರ್ಯಕ್ರಮವನ್ನು ತಂದಿಲ್ಲ ಎಂದರು. ಉಳಿದ ಯೋಜನೆಗಳಾದ ಗೃಹ ಲಕ್ಷ್ಮೀ, ಅನ್ನ ಭಾಗ್ಯ, ಯುವ ನಿಧಿ, ಗೃಹ ಜ್ಯೋತಿ ಯೋಜನೆಗಳಿಗೆ ಚಾಲನೆ ನೀಡುತ್ತೇವೆ ಎಂದರು.

ಮುಂದಿನ ದಿನಗಳಲ್ಲಿ ಅನ್ನ ಭಾಗ್ಯ ಯೋಜನೆಗೆ ಮೈಸೂರಿನಿಂದಲೇ ಚಾಲನೆ ನೀಡಲಾಗುತ್ತದೆ. ಅದೇ ರೀತಿ ಗೃಹಶಕ್ತಿ ಯೋಜನೆಯಡಿ ಪ್ರತಿ ಮನೆಯ ಒಡತಿಗೆ ಎರಡು ಸಾವಿರ ರೂ. ಪ್ರೋತ್ಸಾಹ ಧನ ನೀಡಿ ನೆರವಾಗಲಿದೆ. ನಿರುದ್ಯೋಗಿ ಪದವೀಧರರಿಗೂ ಸರ್ಕಾರ ಪ್ರತಿ ತಿಂಗಳು ಗೌರವಧನ ಕೊಡುವ ಕಾರಣ ಕೆಲಸ ಹುಡುಕಲು ಮತ್ತು ಬೇರೆ ಏನಾದರೂ ವೃತ್ತಿ ಅವಲಂಬನೆ ಮಾಡುವ ತನಕ ಸಹಾಯವಾಗಲಿದೆ. ನಾಗರಿಕ ಸಮಾಜಕ್ಕೆ ಶುದ್ಧ ಕುಡಿಯುವ ನೀರು, ಸಾರಿಗೆ ವಸತಿ ಹೀನರಿಗೆ ವಸತಿ, ಮಹಿಳಾ ಸಬಲೀಕರಣ, ಸಾಮಾಜಿಕ ನ್ಯಾಯದ ಕ್ರಮಗಳನ್ನು ಕೊಡುವ ಮೂಲಕ ಗೌರವವನ್ನು ತಂದು ಕೊಡುವ ಕೆಲಸ ಮಾಡುವುದು ನಮ್ಮ ಸರ್ಕಾರದ ಆದ್ಯ ಹೊಣೆಯಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಅವರ ಆಶಯದಂತೆ ನಮ್ಮ ಸರ್ಕಾರ ಹೆಜ್ಜೆ ಇಡಲಿದೆ. ಮುಂದೆಯೂ ನಮ್ಮ ಸರ್ಕಾರ ಜನಪರವಾಗಿ ಕೆಲಸ ಮಾಡುತ್ತದೆ ಎಂದು ಸ್ಪಷ್ಟಪಡಿಸಿದರು.

ತ್ರಿಶೂಲ ತೆಗೆದುಕೊಂಡು ತಿವಿಬೇಡಿ

ಮಹಿಳೆಯರನ್ನು ನಾವು ಆದಿಶಕ್ತಿಗೆ ಹೋಲಿಸುತ್ತೇವೆ. ಆದರೆ, ಶಕ್ತಿಯೋಜನೆಯ ಸೌಲಭ್ಯ ಪಡೆದುಕೊಂಡು, ಸಾರಿಗೆ ಬಸ್‌ಗಳಲ್ಲಿ ಪುರುಷ ಪ್ರಯಾಣಿಕರಿಗೆ ತ್ರಿಶೂಲ ತೆಗೆದುಕೊಂಡು ತಿವಿಬೇಡಿ... ಪುರುಷರು ಬಸ್‌ಗಳಲ್ಲಿ ಸೀಟ್ ಖಾಲಿಯಿದೆ ಎಂದು ಕುಳಿತುಕೊಳ್ಳುವಂತಿಲ್ಲ. ಮಹಿಳಾ ಪ್ರಯಾಣಿಕರು ಬಂದರೆ ಜಾಗ ಕೊಡ ಬೇಕು. ಬಸ್‌ನಲ್ಲಿ ಶೇ.50ರಷ್ಟು ಸೀಟುಗಳು ಮಹಿಳೆಯರಿಗೆ ಮೀಸಲಿಡಲಾಗುತ್ತದೆ.

–ಡಾ. ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ

ವಿದ್ಯಾರ್ಥಿಗಳು ಬಸ್ ಹತ್ಕೊಂಡು ಎಲ್ಲೆಲ್ಲೋ ಹೋಗಬೇಡಿ: ಶಕ್ತಿ ಯೋಜನೆ ಬಡ ಕುಟುಂಬದ ಮಹಿಳೆಯರು ಹಾಗೂ ಕೂಲಿ ಮಾಡುವ ಮಹಿಳಾ ಕಾರ್ಮಿಕರೂ ಮಾತ್ರವಲ್ಲದೆ, ಎಲ್ಲಾ ವರ್ಗದ ಮಹಿಳೆಯರಿಗೂ ನೆರವಾಗಲಿದೆ ಎನ್ನುತ್ತಿದ್ದ ವೇಳೆ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿನಿಯರತ್ತ ದೃಷ್ಟಿ ಹಾಯಿಸಿದರು. ಬಳಿಕ ನೋಡ್ರಮ್ಮ ಉಚಿತ ಬಸ್ ವ್ಯವಸ್ಥೆ ಇದೆ ಎಂದ ಮಾತ್ರಕ್ಕೆ ಶಾಲಾ– ಕಾಲೇಜಿಗೆ ಗೈರು ಹಾಜರಾಗಿ ಎಲ್ಲೆಲ್ಲೋ ಹೋಗ ಬೇಡಿ. ಮೊದಲು ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಹೆಣ್ಣು ಮಕ್ಕಳು ಕಲಿಯಬೇಕು. ನೀವು ಕಲಿತರೆ ಉತ್ತಮ ಉದ್ಯೋಗ ಗಿಟ್ಟಿಸಿಕೊಳ್ಳಬಹುದು. ಹಾಗಾಗಿ ಎಲ್ಲೆಲ್ಲೋ ಬಸ್ ಹತ್ತಿ ಹೋಗಬೇಡಿ ಎಂದು ಹಾಸ್ಯ ಚಟಾಕಿ ಹಾರಿಸಿದರು. ಇದಕ್ಕೆ ಅಲ್ಲಿದ್ದ ವಿದ್ಯಾರ್ಥಿನಿಯರು ಜೋರಾಗಿ ಕೂಗುವ ಮೂಲಕ ಸಮ್ಮತಿ ಸೂಚಿಸಿದರು.

ಸಿಹಿ ವಿತರಣೆ: ನಗರ ಬಸ್ ನಿಲ್ದಾಣದಲ್ಲಿ ಶಾಸಕ ಕೆ.ಹರೀಶ್‌ಗೌಡ ನೇತೃತ್ವ ದಲ್ಲಿ ಮಹಿಳಾ ಪ್ರಯಾಣಿಕರಿಗೆ ಸಿಹಿ ವಿತರಿಸಲಾಯಿತು. ಈ ಕಾರ್ಯಕ್ರಮಕ್ಕೂ ಸಚಿವ ಡಾ.ಮಹದೇವಪ್ಪ ಪಾಲ್ಗೊಂಡು ಶುಭ ಕೋರಿದರು. ಈ ವೇಳೆ ಪಾಲಿಕೆ ಸದಸ್ಯ ಜೆ.ಗೋಪಿ, ಮಾಜಿ ಉಪ ಮೇಯರ್ ಪುಷ್ಪವಲ್ಲಿ, ಮುಖಂಡರಾದ ಹೆಚ್.ಎ. ವೆಂಕಟೇಶ್, ಕೆಎಸ್.ಶಿವರಾಮ್, ಅಶೋಕ್, ಎಸ್.ಎನ್. ರಾಜೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಅಭಿವೃದ್ಧಿಗೆ ನಾಲ್ವಡಿ ಅವರ ಕೊಡುಗೆ ಅಪಾರ: ಪ್ರೊ.ನಾಗಣ್ಣ

ಮೈಸೂರು, ಜೂ.11(ಎಸ್‌ಪಿಎನ್)– ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ರೂಪಿಸಿದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸಲ್ಲುತ್ತದೆ ಎಂದು ಹಿರಿಯ ಸಾಹಿತಿ ಪ್ರೊ.ಸಿ.ನಾಗಣ್ಣ ಅಭಿಪ್ರಾಯಪಟ್ಟರು.

ಮೈಸೂರು ಗೋಕುಲಂ 3ನೇ ಹಂತದ ಶ್ರೀಕೃಷ್ಣ ದೇವಸ್ಥಾನದ ಆವರಣದ ಆಳ್ವಾರ್ ಕಲಾಭವನದಲ್ಲಿ ಶ್ರೀ ಕೃಷ್ಣಗಾನ ಸಭಾ ವತಿಯಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ಆಯೋಜಿಸಿದ್ದ ಸಂಗೀತ ಕಾರ್ಯಕ್ರಮದಲ್ಲಿ ಮಾತನಾಡಿದರು.





> ಗ್ರಾಮಗಳ ನೈರ್ಮಲೀಕರಣ, ನೀರಿನ ಸೌಕರ್ಯ ಸೇರಿದಂತೆ ಇತರೆ ಅಭಿವೃದ್ಧಿ ವಿಚಾರದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ ಅಪಾರ. ಹೊಸ ರೈಲ್ವೆ ಮಾರ್ಗ ನಿರ್ಮಾಣ ಮಾಡಿದ್ದಾರೆ. ನೀರಾವರಿ ವಿಚಾರದಲ್ಲಿ 1907ರಲ್ಲಿ ವಾಣಿವಿಲಾಸ ಸಾಗರ (ಮಾರಿ ಕಣಿವೆ), ಕೆಆರ್‌ಎಸ್ ಅಣೆಕಟ್ಟು ನಿರ್ಮಾಣಕ್ಕೆ ಒತ್ತು ನೀಡಿದ್ದರು. **–ಪ್ರೊ.ನಾಗಣ್ಣ**

ಮೈಸೂರು ಸಂಸ್ಥಾನದ ರಾಜರಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅಧಿಕಾರ ವಹಿಸಿಕೊಂಡಾಗ ಕೇವಲ 10 ವರ್ಷ. ರಾಜ ಸಂತತಿಯ 24ನೇ ರಾಜರಾಗಿ 1902ರ ಜೂ.4ರಿಂದ 1940ರ ಆ.3ರವರೆಗೆ ಆಳ್ವಿಕೆ ನಡೆಸಿ, ಜನರ ವಿಶ್ವಾಸಗಳಿಸಿದ್ದರಲ್ಲದೆ, ಭಾಷಾ ವಿಚಾರದಲ್ಲಿ ಹೆಮ್ಮೆಯ ಕಾರ್ಯ ಮಾಡಿದ್ದಾರೆ. 1905ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಾರಂಭಿಸಿದ್ದ ಕೀರ್ತಿ ಇವರಿಗೆ ಸಲ್ಲುತ್ತದೆ. ಒಟ್ಟಿನಲ್ಲಿ ನಾಲ್ವಡಿ ಅವರನ್ನು ಮೈಸೂರು ಸಂಸ್ಥಾನದ 'ಅಭಿವೃದ್ಧಿ ಹರಿಕಾರ' ಎಂದು ತಿಳಿಸಿದ್ದಾರೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತಾವಧಿಯಲ್ಲಿ ಹಮ್ಮಿಕೊಂಡಿದ್ದ ಅಭಿವೃದ್ಧಿ ಕಾರ್ಯಗಳು ಇಂದಿಗೂ ಪ್ರಸ್ತುತ. ಇವರ ಕಾರ್ಯವನ್ನು ಸ್ವತಃ ಮಹಾತ್ಮ ಗಾಂಧೀಜಿ ಅವರೇ ಮೆಚ್ಚಿ 'ರಾಜರ್ಷಿ' ಬಿರುದು ನೀಡಿದ್ದ ಪ್ರಸಂಗವನ್ನು ಎಳೆಎಳೆಯಾಗಿ ಬಿಡಿಸಿದರಲ್ಲದೆ, ನಾಲ್ವಡಿ ಕೃಷ್ಣರಾಜ ಒಡೆಯರ ಅವರ ಆಡಳಿತಾವಧಿಯಲ್ಲಿ ಸ್ಥಳೀಯ ಸಂಸ್ಥೆಗಳನ್ನು ರಚಿಸಿ, ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿ ಕೊಟ್ಟ ಪ್ರಸಂಗವನ್ನು ವಿವರಿಸಿದರು.

ಇದರ ಪರಿಣಾಮ ಸಂಸ್ಥಾನದ ಸಣ್ಣ ಸಣ್ಣ ಪಟ್ಟಣಗಳಲ್ಲಿಯೂ ಸಹ ಸ್ಥಳೀಯ ಸಂಸ್ಥೆಗಳು ರಚನೆಯಾದವು. ಹಳ್ಳಿಗಳಲ್ಲಿ ಪ್ರಥಮ ಬಾರಿಗೆ ಗ್ರಾಮೀಣ ಪ್ರದೇಶದ ಜನರು ಆಡಳಿತದಲ್ಲಿ ಜನರ ನೇರ ಭಾಗವಹಿಸುವಿಕೆಗೆ ಉತ್ತೇಜನ ನೀಡಲಾಯಿತು ಎಂದರು.

ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿದ್ದ ದೌರ್ಜನ್ಯಗಳನ್ನು ತಡೆಗಟ್ಟಲು 1909ರಲ್ಲಿ ದೇವದಾಸಿ ಪದ್ಧತಿ ನಿಷೇಧ, 1910ರಲ್ಲಿ ಬಸವಿ ಪದ್ಧತಿ ರದ್ಧತಿ, 1910ರಲ್ಲಿ ಗೆಜ್ಜೆಪೂಜೆ ಪದ್ಧತಿ ನಿಷೇಧ, 1936ರ ಜು.14ರಂದು ವೇಶ್ಯಾವೃತ್ತಿ ತಡೆಗಟ್ಟುವ ಕಾಯ್ದೆ ಜಾರಿ, ವಿಧವೆಯವರಿಗೆ ಮರು ವಿವಾಹ, ಮಹಿಳೆಯರಿಗೆ ಕಡ್ಡಾಯ ಶಿಕ್ಷಣ ಮತ್ತು ಮತದಾನದ ಹಕ್ಕು ಜಾರಿಗೊಳಿಸಿದ ಕೀರ್ತಿ ನಾಲ್ವಡಿ ಅವರಿಗೆ ಸಲ್ಲುತ್ತದೆ. ಎಂದರು.

ಶ್ರೀ ಕೃಷ್ಣಗಾನ ಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸ್ ಸೇರಿದಂತೆ ಇತರರಿದ್ದರು. ವಿದ್ವಾನ್ ಮಾನಸ ನಯನ ಗಾಯನ ನಡೆಸಿಕೊಟ್ಟರು. ವಿದ್ವಾನ್ ಕೇಶವಮೋಹನ್ ಕುಮಾರ್ (ಪಿಟೀಲು), ವಿದ್ವಾನ್ ಹೆಚ್.ಎಲ್.ಶಿವಶಂಕರ ಸ್ವಾಮಿ (ಮೃದಂಗ), ವಿದ್ವಾನ್ ಎಸ್.ಮಂಜುನಾಥ್ (ಘಟಂ) ಸಾಥ್ ನೀಡಿದರು.

ಬಸ್ ಚಾರ್ಜ್ ಉಳಿತು... ಸ್ವಂತ ವಾಹನದಲ್ಲಿ ಪ್ರಯಾಣ ಮಾಡಿದಷ್ಟು ಖುಷಿ... ಬಸ್ ಚಾರ್ಜ್ ದುಡ್ಡಲ್ಲಿ ಮಕ್ಕಳಿಗೆ ತಿಂಡಿ–ತಿನಿಸು...

ಉಚಿತವಾಗಿ ಬಸ್‌ನಲ್ಲಿ ಪ್ರಯಾಣಿಸಿದ ಮಹಿಳೆಯರ ಸಂಭ್ರಮದ ಮಾತು

ಮೈಸೂರು, ಜೂ.11(ಎಂಕೆ)– ಬಸ್ ಚಾರ್ಜ್ ಉಳಿಯಿತು... ಒಂದಷ್ಟು ಹಣ ಉಳಿಸಬಹುದು... ನಮ್ಮ ಸ್ವಂತ ವಾಹನದಲ್ಲೇ ಪ್ರಯಾಣ ಮಾಡಿದಷ್ಟು ಖುಷಿಯಾಗಿದೆ... ಮೊದಲೇ ಜಾರಿಯಾಗಿದ್ದರೇ ಚೆನ್ನಾಗಿರುತ್ತಿತ್ತು...!

ರಾಜ್ಯ ಸರ್ಕಾರದ ಶಕ್ತಿ ಯೋಜನೆಯಡಿ ಮೊದಲ ದಿನ ಕೆಎಸ್‌ಆರ್‌ಸಿಟಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡಿದ ಮಹಿಳೆಯರ ಸಂಭ್ರಮದ ನುಡಿಗಳಿವು... ಬೇರೆ ಬೇರೆ ನಗರಗಳಿಂದ ಮೈಸೂರಿಗೆ ಬಂದಿಳಿದ ಮಹಿಳೆಯರು 'ಮೈಸೂರು ಮಿತ್ರ'ನೊಂದಿಗೆ ತಮ್ಮ ಮೊದಲ ಉಚಿತ ಪ್ರಯಾಣದ ಅನುಭವ ಹಂಚಿಕೊಂಡರು.

ಎಲ್ಲಿಯಾದರೂ ಹೋಗಬೇಕು ಎಂದುಕೊಂಡರೆ ಬಸ್ ಚಾರ್ಜ್ ಹೊಂದಿಸುವುದೇ ಬಹಳ ಕಷ್ಟವಾಗುತ್ತಿತ್ತು. ಆದರೀಗ ಆ ಕಷ್ಟ ದೂರವಾಗಿದೆ. ಕೆಲಸ, ಮದುವೆ, ಗೃಹಪ್ರವೇಶ, ನಾಮಕರಣ ಸೇರಿದಂತೆ ದುಡಿಮೆ ಹಾಗೂ ಸಂಭ್ರಮಾಚರಣೆಗೆ ಖುಷಿಯಿಂದ ಭಾಗವಹಿಸಬಹುದು ಎಂದು ಹುಣಸೂರಿನಿಂದ ಮೈಸೂರಿನಲ್ಲಿರುವ ಸ್ನೇಹಿತರ ಮನೆಯ ಸತ್ಯನಾರಾಯಣ ಪೂಜೆಗೆ ಬಂದಿದ್ದ ಗೌರಮ್ಮ, ವೀಣಾ, ಲಕ್ಷ್ಮಿ ಮತ್ತು ಯಶಸ್ವಿನಿ ಸಂತಸ ವ್ಯಕ್ತಪಡಿಸಿದರು.

ಸರ್ಕಾರವೇನೋ ಉಚಿತ ಪ್ರಯಾಣಕ್ಕೆ ಅವಕಾಶ ನೀಡಿದೆ. ಆದರೆ ಎಷ್ಟು ದಿನಗಳ ಕಾಲ ನಿರ್ವಹಣೆ ಮಾಡುತ್ತಾರೆ ಎಂಬುದು ಮುಖ್ಯವಾಗಿದೆ. ಇನ್ನು ಮುಂದೆ ಹಣವಿಲ್ಲದ್ದಿದ್ದರೂ ಪ್ರತಿನಿತ್ಯ ಕೆಲಸಕ್ಕೆ, ದೇವಸ್ಥಾನಗಳಿಗೆ, ಸಂಬಂಧಿಕರ ಮನೆಗೆ ಹೋಗಬಹುದು. ಇಷ್ಟು ದಿನ ಬಸ್ ಚಾರ್ಜ್ ಕೊಡುತ್ತಿದ್ದೆವು. ಇವತ್ತು ಬಸ್ ಚಾರ್ಜ್ ಕೊಡದೆಯೇ ಪ್ರಯಾಣ ಮಾಡಿದ್ದೇವೆ. ನಮ್ಮ ಸ್ವಂತ ವಾಹನದಲ್ಲೇ ಪ್ರಯಾಣ ಮಾಡಿದಷ್ಟು ಖುಷಿಯಾಗಿದೆ ಎಂದು ಸಂಭ್ರಮಿಸುತ್ತಲೇ ಹುಣಸೂರಿಗೆ ವಾಪಸ್ ತೆರಳಲು ಬಸ್ ಹತ್ತಿದರು.



ಚಿಕ್ಕಮಗಳೂರಿನಿಂದ ಕುಟುಂಬ ಸಮೇತ ಬಂದಿದ್ದ ಚೆನ್ನಮ್ಮ, ಸವಿತಾ ಮತ್ತು ಭವ್ಯ ಪ್ರತಿಕ್ರಿಯಿಸಿ, ಚಿಕ್ಕಮಗಳೂರಿನಿಂದ ಮೈಸೂರಿಗೆ 191 ರೂ. ಬಸ್ ಚಾರ್ಜ್ ಇದೆ. ಆದರೆ ಇವತ್ತು ಅಷ್ಟೂ ಹಣ ಉಳಿದಿದ್ದು, ಬಸ್ ಚಾರ್ಜ್ ಹಣದಲ್ಲಿ ಮಕ್ಕಳಿಗೆ ತಿಂಡಿ–ತಿನಿಸು, ಹಣ್ಣು ತೆಗೆದುಕೊಂಡು ಹೋಗಲು ಅನುಕೂಲವಾಯಿತು ಎಂದರು.

ತಿಂಗಳಿಗೆ ಸಾವಿರ ರೂ. ಉಳಿಯಲಿದೆ: ಬೆಂಗಳೂರಿನಲ್ಲಿ ಕೆಲಸದಲ್ಲಿರುವ ಸಕಲೇಶಪುರದ ಅಂಕಿತ, ಕೆಲಸ ನಿಮಿತ್ತ ಮೈಸೂರಿಗೆ ಬಂದಿದ್ದೇನೆ. ಬೇಗ ಬರಬೇಕೆಂದು ಐರಾವತ ಬಸ್‌ನಲ್ಲಿ ಬಂದಿದ್ದರಿಂದ ಬಸ್ ಚಾರ್ಜ್ ಕೊಡಬೇಕಾಯಿತು. ಬೆಂಗಳೂರಿನಲ್ಲಿ ನಾನು ಕೆಲಸ ಮಾಡಲಿದ್ದು, ತಿಂಗಳಿಗೆ ಸುಮಾರು 1 ಸಾವಿರ ರೂ. ಬಸ್ ಚಾರ್ಜ್ ಅಥವಾ ಬಸ್ ಪಾಸ್‌ಗೆ ಖರ್ಚಾಗುತಿತ್ತು. ಇನ್ನೂ ಮುಂದೆ ಆ ಹಣ ಉಳಿಯಲಿದೆ. ಉಚಿತ ಬಸ್ ಪ್ರಯಾಣದಿಂದ ಮಹಿಳೆಯರಿಗೆ ಅನುಕೂಲವಾಗಿದೆ ಎಂದು ಹೇಳಿದರೆ, ಹುಣಸೂರಿನಿಂದ ಮೈಸೂರಿಗೆ ಮಗಳೊಂದಿಗೆ ಆಗಮಿಸಿದ ಕೆ.ಎನ್. ಪೂರ್ಣಿಮಾ ಅವರು, ಉಚಿತ ಬಸ್ ಪ್ರಯಾಣದಿಂದ ಹಣ ಉಳಿಯಲಿದೆ. ಕೆಲಸಕ್ಕೆ ಹೋಗಲು ಸಹಾಯವಾಯಿತು ಎಂದು ಖುಷಿ ಹಂಚಿಕೊಂಡರು.

ಮೊದಲೇ ಜಾರಿ ಮಾಡಬಾರದಿತ್ತೇ...: ಮೈಸೂರಿನ ಸಿದ್ದಾರ್ಥ ಬಡಾವಣೆಯಲ್ಲಿರುವ ಟೆರೆಷಿಯನ್ ಕಾಲೇಜಿನಲ್ಲಿ ಅಂತಿಮ ವರ್ಷದ ಬಿ.ಕಾಂ ವಿದ್ಯಾಭ್ಯಾಸ ಮಾಡುತ್ತಿರುವ ಕೀರ್ತನಾ ಮತ್ತು ಸನ್ನಿಧಿ ಪ್ರತಿಕ್ರಿಯಿಸಿ, ಮದ್ದೂರಿನಿಂದ ಫ್ರೀಯಾಗಿ ಬಸ್‌ನಲ್ಲಿ ಬಂದೆವು. ಈ ಯೋಜನೆಯನ್ನು ಮೊದಲೇ ಜಾರಿ ಮಾಡಿದ್ದರೇ ಚೆನ್ನಾಗಿರುತಿತ್ತು. ಮೈಸೂರಿನಲ್ಲಿರುವ ಹಲವು ಪ್ರವಾಸಿ ತಾಣಗಳಿಗೆ ಉಚಿತವಾಗಿ ಹೋಗಬಹುದಿತ್ತು. ಉಚಿತ ಪ್ರಯಾಣ ಯೋಜನೆ ತುಂಬಾ ಚೆನ್ನಾಗಿದೆ ಎನ್ನುತ್ತಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಥ್ಯಾಂಕ್ಸ್ ಹೇಳಿದರು.

ಬಸ್ ನಿಲ್ದಾಣಗಳಲ್ಲಿ ಶಕ್ತಿ ಪ್ರಚಾರ...

ರಾಜ್ಯ ಸರ್ಕಾರದ ಶಕ್ತಿ ಯೋಜನೆ ಕುರಿತು ಬಸ್ ನಿಲ್ದಣಗಳಲ್ಲಿ ಜಾಹಿರಾತು ಪ್ರಸಾರ ಮಾಡುವ ಮೂಲಕ ಪ್ರಯಾಣಿಕರಲ್ಲಿ ಉಚಿತ ಪ್ರಯಾಣ ಯೋಜನೆಯ ಅರಿವು ಮೂಡಿಸಲಾಗುತ್ತಿದೆ. ಬಸ್ ನಿಲ್ದಾಣಗಳಲ್ಲಿ ಬಸ್‌ಗಳು ಸಂಚರಿಸುವ ಮಾರ್ಗದ ಮಾಹಿತಿ ನೀಡುವುದರ ಜೊತೆಗೆ ಶಕ್ತಿ ಯೋಜನೆ ಪ್ರಚಾರವನ್ನೂ ಮಾಡಲಾಗುತ್ತಿದೆ

ಐಡಿ ತೋರಿಸಬೇಕು: ಪಿರಿಯಾಪಟ್ಟಣದಿಂದ ಮೈಸೂರಿಗೆ ಬಂದ ಪೂನಂ ಮತ್ತು ರೇಖಾ, ಬಸ್‌ನಲ್ಲಿ ಕಂಡಕ್ಟರ್ ಯಾವುದಾರೂ ಐಡಿ ತೋರಿಸಿ ಎಂದರು. ಆದರೆ ನಮ್ಮ ಬಳಿ ಯಾವುದೇ ಐಡಿ ಕಾರ್ಡ್ ಇರಲಿಲ್ಲ. ಮೊಬೈಲ್‌ನಲ್ಲಿ ತೋರಿಸಿದರೂ ಒಪ್ಪಲಿಲ್ಲ. ಇನ್ನೂ ಮುಂದೆ ಐಡಿ ಕಾರ್ಡ್ ತೆಗೆದುಕೊಂಡು ಬಸ್‌ನಲ್ಲಿ ಸಂಚರಿಸುತ್ತೇವೆ ಎಂದರೆ, ಹಾಸನದಿಂದ ಬಂದ ರೂಪಾನಂದ, ಎಲಿಜಾ ಹಾಗೂ ಚಾಮರಾಜನಗರದಿಂದ ಬಂದಿದ್ದ ಮಿಸ್ಬಾ ಮಾತನಾಡಿ, ಬಸ್ ಉಚಿತ ಪ್ರಯಾಣಕ್ಕೆ ಅವಕಾಶ ಮಾಡಿರುವುದು ತುಂಬಾ ಖುಷಿಯಾಗಿದೆ. ಮಹಿಳೆಯರಿಗೆ ತುಂಬಾ ಅನುಕೂಲವಾಗಿದೆ ಎಂದರು.

ಕಾಯುವುದು ಕಡಿಮೆಯಾಯ್ತು: ಜನರು ಬಸ್ ಹತ್ತಲಿ ಎಂದು ಕಾಯುವುದು ಇನ್ನು ಮುಂದೆ ಕಡಿಮೆಯಾಗಲಿದೆ. ಉಚಿತ ಬಸ್ ಪ್ರಯಾಣ ಇರುವುದರಿಂದ ಮಹಿಳೆಯರು ಬಂದೇ ಬರುತ್ತಾರೆ. 20–30 ಜನ ಮಹಿಳೆಯರು ಬಂದರೆ ಸಾಕು ಬಸ್ ಹೊರಡಲಿದೆ. ಇದರಿಂದ ನಮಗೂ ಸಮಯ ಉಳಿತಾಯವಾಗಲಿದ್ದು, ಬೇಗ ಕೆಲಸ ಮುಗಿಸಿ ಮನೆ ಸೇರುತ್ತೇವೆ. ಸರ್ಕಾರದಿಂದ ಕೆಎಸ್‌ಆರ್‌ಟಿಸಿಗೆ ಸರಿಯಾದ ಸಮಯಕ್ಕೆ ಹಣ ಬಿಡುಗಡೆಯಾದರೆ ಯಾವುದೇ ಸಮಸ್ಯೆಯಾಗುವುದಿಲ್ಲ ಎಂದು ಕೆಲ ಕೆಎಸ್‌ಆರ್‌ಟಿ ಬಸ್‌ಗಳ ಡ್ರೈವರ್ ಹಾಗೂ ಕಂಡಕ್ಟರ್‌ಗಳು ಹೇಳಿದರು.



ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರ ಸಾರಿಗೆ ಬಸ್‌ನಲ್ಲಿದ್ದ ಮಹಿಳಾ ಪ್ರಯಾಣಿಕರಿಗೆ ಬಲ್ಲಾಳ್ ವೃತ್ತದಲ್ಲಿ ಹೂವು, ಸಿಹಿ ವಿತರಿಸಿ ಶುಭಕೋರಿದರು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 12 ಸೋಮವಾರ 2023

ಸಂಪುಟ: 44 | ಸಂಚಿಕೆ: 57 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ 'ಶಕ್ತಿ' ಯೋಜನೆಗೆ ಚಾಲನೆ

■ ಸರ್ಕಾರಿ ಬಸ್‌ನಲ್ಲಿ ಮಹಿಳೆಯರ ಉಚಿತ ಪ್ರಯಾಣ ಆರಂಭ
■ ಶ್ರೀ ಮಂಜುನಾಥನ ಸನ್ನಿಧಿ ಧರ್ಮಸ್ಥಳಕ್ಕೆ ಮೊದಲ ಬಸ್ ಸೇವೆ

ಬೆಂಗಳೂರು, ಜೂ.11– ಕರ್ನಾಟಕ ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿಗಳ ಪೈಕಿ ಮೊದಲ ಗ್ಯಾರಂಟಿಯಾದ ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸುವ 'ಶಕ್ತಿ' ಯೋಜನೆಗೆ ಭಾನುವಾರ ವಿಧಾನಸೌಧ ಮುಂಭಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಸೇರಿದಂತೆ ಸಾಂಕೇತಿಕವಾಗಿ ಐವರು ಮಹಿಳೆಯರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಮಾರ್ಟ್ ಕಾರ್ಡ್ ವಿತರಿಸಿದರು. ಇದೇ ವೇಳೆ ಶಕ್ತಿ ಯೋಜನೆಯ ಸ್ಮಾರ್ಟ್ ಕಾರ್ಡ್ ಲೋಗೋ ಮಾದರಿಯನ್ನು ಬಿಡುಗಡೆ ಮಾಡಲಾಯಿತು.

ಶಕ್ತಿ ಯೋಜನೆಯ ಮೊದಲ ಬಸ್ ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣದಿಂದ ಮಂಜುನಾಥನ ಸನ್ನಿಧಿ ಧರ್ಮಸ್ಥಳಕ್ಕೆ, ಎರಡನೇ ಬಸ್ ಮೈಸೂರಿಗೆ, 3ನೇ ಬಸ್ ಕಲಬುರ್ಗಿಗೆ ಮತ್ತು 4ನೇ ಬಸ್ ಬೆಳಗಾವಿಗೆ ಪ್ರಯಾಣ ಬೆಳೆಸಿತು. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ, ಉಚಿತವಾಗಿ ಬಸ್‌ನಲ್ಲಿ ಪ್ರಯಾಣಿಸಿದ ಮಹಿಳೆಯರಿಗೆ ಸಿಹಿ ನೀಡಿ, ಪ್ರಯಾಣ ಸುಖಕರವಾಗಿರಲಿ ಎಂದು ಹಾರೈಸಿದರು. ಇಂದು ಮಧ್ಯಾಹ್ನ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಆಯಾ ಜಿಲ್ಲಾ ಉಸ್ತುವಾರಿ ಸಚಿವರು ಶಕ್ತಿ ಯೋಜನೆಗೆ ಚಾಲನೆ ನೀಡಿದರೆ, ತಾಲೂಕು ಕೇಂದ್ರಗಳಲ್ಲಿ ಶಾಸಕರು ಚಾಲನೆ ನೀಡಿದರು. ವಿಧಾನಸೌಧದಲ್ಲಿ ಉದ್ಘಾಟನಾ ಸಮಾರಂಭ ನಡೆದ ನಂತರ ಮುಖ್ಯಮಂತ್ರಿ ▶ 8ನೇ ಪುಟಕ್ಕೆ



'ಶಕ್ತಿ' ಯೋಜನೆಗೆ ಭಾನುವಾರ ವಿಧಾನಸೌಧ ಮುಂಭಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಮಹಿಳೆಯರಿಗೆ ಸ್ಮಾರ್ಟ್‌ಕಾರ್ಡ್ ನೀಡುವ ಮೂಲಕ ಚಾಲನೆ ನೀಡಿದರು. ಡಿಸಿಎಂ ಡಿ.ಕೆ.ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಇತರರಿದ್ದಾರೆ.

ಎಷ್ಟೇ ಕಷ್ಟ ಬರಲಿ, ಐದು ಗ್ಯಾರಂಟಿ ಈಡೇರಿಸುತ್ತೇವೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಶಪಥ

ಬೆಂಗಳೂರು: ನಮಗೆ ಎಷ್ಟೇ ಕಷ್ಟ ಬರಲಿ, ನಾವು ಪ್ರಣಾಳಿಕೆಯಲ್ಲಿ ಘೋಷಿಸಿರುವ ಐದು ಗ್ಯಾರಂಟಿಗಳನ್ನು ಈಡೇರಿಸಿಯೇ ತೀರುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶಪಥ ಮಾಡಿದರು.

ವಿಧಾನಸೌಧದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ಮೊದಲ ಶೂನ್ಯ ಟಿಕೆಟ್ ನೀಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಅವರು, ನಂತರ ಮಾತನಾಡಿ, ನಮ್ಮ ಐದು ಗ್ಯಾರಂಟಿಗಳ ಜಾರಿಗೆ 59 ಸಾವಿರ ಕೋಟಿ ರೂ. ಅಗತ್ಯವಿದೆ. ಎಷ್ಟು ಖರ್ಚು ಮಾಡುತ್ತಿದ್ದೇವೆ ಎಂಬುದು ಮುಖ್ಯವಲ್ಲ, ▶ 8ನೇ ಪುಟಕ್ಕೆ

ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ

ವಿಪಕ್ಷಗಳಿಗೆ ಡಿಕೆಶಿ ಟಾಂಗ್

ಬೆಂಗಳೂರು: ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಶಕ್ತಿ ಯೋಜನೆ ಜಾರಿ ಬೆನ್ನಲ್ಲೇ ವಿಪಕ್ಷಗಳ ವಿರುದ್ಧ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಪರೋಕ್ಷ ಕಿಡಿಕಾರಿದ್ದು, ಟೀಕೆಗಳು ಸಾಯುತ್ತವೆ, ಕೆಲಸಗಳು ಮಾತ್ರ ಉಳಿಯುತ್ತವೆ ಎಂದು ಹೇಳಿದ್ದಾರೆ. ಶಕ್ತಿ ಯೋಜನೆ ಯೋಜನೆಯ ಸ್ಮಾರ್ಟ್ ಕಾರ್ಡ್ ಬಿಡುಗಡೆ ಮಾಡುವ ಮೂಲಕ ಯೋಜನೆಗೆ ▶ 8ನೇ ಪುಟಕ್ಕೆ

ತಲೆ ಬಾಗಿ ನಮಿಸಿ ಬಸ್ ಏರಿದ ಅಜ್ಜಿ





ಧಾರವಾಡ: ಮಹಿಳೆಯರಿಗೆ ಬಸ್‌ನಲ್ಲಿ ಉಚಿತ ಪ್ರಯಾಣ ಯೋಜನೆ 'ಶಕ್ತಿ' ಜಾರಿಗೆ ಬಂದಿದೆ. ರಾಜ್ಯದ ವಿವಿಧೆಡೆಗಳಲ್ಲಿ ಮಹಿಳೆಯರು ಬಸ್ ಏರಿ ಉಚಿತ ಪ್ರಯಾಣವನ್ನು ಸಂಭ್ರಮಿಸಿದ್ದಾರೆ. ಬೆಳಗಾವಿ ಜಿಲ್ಲೆಯ ಸಂಗೊಳ್ಳಿಯ ನಿಂಗವ್ವ ಸಂಗಾಡಿ ಎಂಬಾಕೆ ಧಾರವಾಡದಲ್ಲಿ ಬಸ್‌ಗೆ ತಲೆ ಬಾಗಿ ನಮಿಸಿ ಪ್ರವೇಶ ಮಾಡಿದ್ದಾರೆ. ಅವರು ಹೀಗೆ ಬಸ್ಸನ್ನೇರಿದ ಫೋಟೋ ವೈರಲ್ ಆಗಿದ್ದು, ಮೆಚ್ಚುಗೆಗೂ ಪಾತ್ರವಾಗುತ್ತಿದೆ. ಸಂಗೊಳ್ಳಿಯಿಂದ ಧಾರವಾಡಕ್ಕೆ ಬಂದಿದ್ದ ಇವರು ಅಲ್ಲಿಂದ ಮೊಮ್ಮಗನ ಗೃಹಪ್ರವೇಶಕ್ಕಾಗಿ ಸವದತ್ತಿಗೆ ಹೊರಟಿದ್ದರು. ಧಾರವಾಡಕ್ಕೆ ಬಂದಾಗ ಶಕ್ತಿ ಯೋಜನೆಯ ಉದ್ಘಾಟನೆಗಾಗಿ ಶೃಂಗಾರಗೊಂಡಿದ್ದ ಬಸ್ ಸಿಕ್ಕಿತ್ತು. ಇದೇ ಬಸ್‌ಗೆ ಹೊರಟ ಅಜ್ಜಿ ಬಸ್‌ನ ಮೆಟ್ಟಿಲಿಗೆ ತಲೆಬಾಗಿ ನಮಸ್ಕರಿಸಿ ▶ 8ನೇ ಪುಟಕ್ಕೆ

ಮೈಸೂರಲ್ಲೂ ಶಕ್ತಿಗೆ ಚಾಲನೆ

ಗುಲಾಬಿ, ಸಿಹಿಯೊಂದಿಗೆ ಮಹಿಳೆಯರಿಗೆ ಉಚಿತ ಬಸ್ ಟಿಕೆಟ್

ಮೈಸೂರು,ಜೂ.11(ಎಂಟಿವೈ)– ರಾಜ್ಯ ಸರ್ಕಾರದ ಬಹು ನಿರೀಕ್ಷಿತ ಐದು ಗ್ಯಾರಂಟಿಗಳಲ್ಲಿ ಒಂದಾದ ಸಾರಿಗೆ ಸಂಸ್ಥೆಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸುವ ಶಕ್ತಿ ಯೋಜನೆಗೆ ಮೈಸೂರಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ, ಹೆಚ್.ಡಿ.ಕೋಟೆ ಹಾಗೂ ಹಾಸನಕ್ಕೆ ಪ್ರಯಾಣಿಸುವ ಬಸ್‌ನಲ್ಲಿ ಮಹಿಳಾ ಪ್ರಯಾಣಿಕರಿಗೆ ಉಚಿತ ಟಿಕೆಟ್ ನೊಂದಿಗೆ ಗುಲಾಬಿ ಹಾಗೂ ಸಿಹಿ ವಿತರಿಸಿ ಶುಭ ಕೋರಿದರು.

ಚುನಾವಣೆಗೂ ಮುನ್ನ ಕಾಂಗ್ರೆಸ್ ರಾಜ್ಯದ ಜನರಿಗೆ ನೀಡಿದ್ದ ಐದು ಗ್ಯಾರಂಟಿ ಯೋಜನೆಗಳಲ್ಲಿ ಒಂದಾಗಿದ್ದ ಮಹಿಳಾ ಪ್ರಯಾಣಿಕರಿಗೆ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸುವ 'ಶಕ್ತಿ' ಯೋಜನೆ ರಾಜ್ಯದಾದ್ಯಂತ ಏಕಕಾಲಕ್ಕೆ ಆರಂಭವಾಗಿದ್ದು, ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ ಮಹಿಳಾ ಪ್ರಯಾಣಿಕರಿಗೆ ಉಚಿತ ಟಿಕೆಟ್, ಸಿಹಿ ಹಾಗೂ ಗುಲಾಬಿ ನೀಡಿದರು.

ಶಿಂಗಾರಗೊಂಡಿದ್ದ ಬಸ್‌ಗಳು: ಮಹಿಳಾ ಪ್ರಯಾಣಿಕರಿಗೆ ಉಚಿತ ಸೇವೆ ಒದಗಿಸುವ ನಿಟ್ಟಿನಲ್ಲಿ ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ನಗರ ವಿಭಾಗದ ಹಸಿರು ಬಸ್ (ಕೆಎ.09.ಎಫ್.5049) ಹಾಗೂ ಹಾಸನಕ್ಕೆ ಪ್ರಯಾಣಿಸುವ ಸಾರಿಗೆ(ಕೆಂಪು) ಬಸ್‌ವೊಂದನ್ನು ಬಣ್ಣ ಬಣ್ಣದ ಹೂವುಗಳಿಂದ ಅಲಂಕಾರ ಮಾಡಲಾಗಿತ್ತು. ಹೊರ ರಾಜ್ಯಗಳ ಪ್ರಯಾಣಿಕರು ಒಳಗೊಂಡಂತೆ ನೂರಾರು ಮಂದಿ ಪ್ರಯಾಣಿಕರು ಅಲಂಕಾರಗೊಂಡಿದ್ದ ಬಸ್ ಮುಂದೆ ಫೋಟೊ ತೆಗೆಸಿಕೊಂಡು ಸಂಭ್ರಮಿಸುತ್ತಿದ್ದ ದೃಶ್ಯ ಕಂಡು ಬಂತು.

ಮುಖಂಡರ ಸಾಥ್: ಶಕ್ತಿ ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಮೈಸೂರು ನಗರ ಕಾಂಗ್ರೆಸ್ ಮುಖಂಡರ ದಂಡೇ ಆಗಮಿಸಿತ್ತು ಅದರಲ್ಲೂ ಮಹಿಳಾ ಘಟಕಗಳ ಮುಂಚೂಣಿ ಮುಖಂಡರು ಪಾಲ್ಗೊಂಡು ನಾರಿಶಕ್ತಿ ಪ್ರದರ್ಶನಕ್ಕೆ ಸಾಥ್ ನೀಡಿದರು. ಈ ವೇಳೆ ಶಾಲಾ–ಕಾಲೇಜುಗಳ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದು ವಿಶೇಷವಾಗಿತ್ತು. ▶ 8ನೇ ಪುಟಕ್ಕೆ



ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ, ಹೆಚ್.ಡಿ.ಕೋಟೆ ಹಾಗೂ ಹಾಸನಕ್ಕೆ ಪ್ರಯಾಣಿಸುವ ಬಸ್‌ನಲ್ಲಿ ಮಹಿಳಾ ಪ್ರಯಾಣಿಕರಿಗೆ ಉಚಿತ ಟಿಕೆಟ್ ನೀಡಿ, ಶುಭ ಕೋರಿದರು.

ಶಕ್ತಿ ಯೋಜನೆ ಅನುಷ್ಠಾನಕ್ಕಾಗಿ ಸಾರಿಗೆ ಸಿಬ್ಬಂದಿಗೆ ತರಬೇತಿ



ವಿಭಾಗೀಯ ಪ್ರಭಾರ ನಿಯಂತ್ರಣಾಧಿಕಾರಿ ಮರಿಗೌಡ

ಮೈಸೂರು,ಜೂ.11(ಎಂಟಿವೈ)–ಸರ್ಕಾರ ಜಾರಿಗೆ ತಂದಿರುವ ಶಕ್ತಿ ಯೋಜನೆಯನ್ನು ಮೈಸೂರು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿದ್ದು, ಸಿಬ್ಬಂದಿಗೆ ತರಬೇತಿ ನೀಡಲಾಗಿದೆ ಎಂದು ವಿಭಾಗೀಯ ಪ್ರಭಾರ ನಿಯಂತ್ರಣಾಧಿಕಾರಿ ಮರಿಗೌಡ ತಿಳಿಸಿದ್ದಾರೆ.

ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಶಕ್ತಿ ಯೋಜನೆ ಅನುಷ್ಠಾನಕ್ಕೆ ಸಾರಿಗೆ ಸಂಸ್ಥೆಯಲ್ಲಿ ಹೊಸದಾಗಿ ಸಾಫ್ಟ್‌ವೇರ್ ಅಳವಡಿಸಿಕೊಳ್ಳಲಾಗಿದೆ. ಮಹಿಳಾ ಪ್ರಯಾಣಿಕರು ಎಲ್ಲಿಂದ ಎಲ್ಲಿಗೆ ಪ್ರಯಾಣಿಸುತ್ತಾರೆ ಎಂಬ ಮಾಹಿತಿ ಟಿಕೆಟ್‌ನಲ್ಲಿ ನಮೂದಾಗಿರುತ್ತದೆ. ಆದರೆ, ಟಿಕೆಟ್ ದರ ಮಾತ್ರ ಶೂನ್ಯವಾಗಿರುತ್ತದೆ. ಇದಕ್ಕಾಗಿ ಸಿಬ್ಬಂದಿಗೆ ತರಬೇತಿ ನೀಡಲಾಗಿದ್ದು, ಮಹಿಳಾ ಪ್ರಯಾಣಿಕರಿಗೆ ಟಿಕೆಟ್ ಕೊಡುವುದು, ಅವರೊಂದಿಗೆ ಗೌರವಯುತವಾಗಿ ವರ್ತಿಸಬೇಕು ಎನ್ನುವುದನ್ನು ತಿಳಿಸಿಕೊಡಲಾಗಿದೆ ಎಂದರು. ಮೈಸೂರು ವಿಭಾಗದಲ್ಲಿ ಪ್ರಸ್ತುತ 871 ಬಸ್‌ಗಳನ್ನು ಪ್ರಯಾಣಿಕರ ಸೇವೆಗಾಗಿ ಬಳಕೆ ಮಾಡಲಾಗುತ್ತಿದೆ. ▶ 8ನೇ ಪುಟಕ್ಕೆ

"ಮೈಸೂರು ವಿಭಾಗದಲ್ಲಿ ಪ್ರಯಾಣಿಕರ ಸಂಚಾರ, ಕಾರ್ಖಾನೆಗಳ ನೌಕರರಿಗೆ ಬಾಡಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಬಸ್‌ಗಳು ಒಳಗೊಂಡಂತೆ 1071 ಬಸ್‌ಗಳಿವೆ. ಇವುಗಳು ಪ್ರತಿದಿನ 976 ಷೆಡ್ಯುಲ್‌ನಲ್ಲಿ 7911 ಟ್ರಿಪ್ ಸಂಚರಿಸಲಿವೆ. 4621 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿದಿನ ಎಲ್ಲಾ ಬಸ್‌ಗಳು ಅಂದಾಜು 3.14 ಲಕ್ಷ ಕಿ.ಮೀ. ದೂರ ಸಂಚರಿಸಲಿವೆ. ಎಲ್ಲಾ ಬಸ್‌ಗಳಿಂದ ದಿನವೊಂದಕ್ಕೆ 1.26 ಕೋಟಿ ಆದಾಯ ಸಂಗ್ರಹವಾಗುತ್ತಿದೆ. ಆದರೆ, ದಿನವೊಂದಕ್ಕೆ 1.67 ಕೋಟಿ ಖರ್ಚಾಗುತ್ತಿದ್ದು, ಮೈಸೂರು ವಿಭಾಗ ದಿನಕ್ಕೆ 40.43 ಲಕ್ಷ ರೂ. ನಷ್ಟ ಅನುಭವಿಸುತ್ತಿದೆ. ಎಲ್ಲಾ ಬಸ್‌ಗಳಿಂದ ದಿನಕ್ಕೆ 4.09 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದು, ಅವರಲ್ಲಿ ಶೇ.50ರಷ್ಟು ಮಹಿಳಾ ಪ್ರಯಾಣಿಕರಾಗಿದ್ದಾರೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

'ಒಡಿಶಾ ರೈಲು ದುರಂತ ಪಿತೂರಿ'



ಫೈಲ್ ಚಿತ್ರ

ನವದೆಹಲಿ: ಜೂನ್ 2ರಂದು ಒಡಿಶಾದಲ್ಲಿ ಸಂಭವಿಸಿದ ರೈಲು ಅಪಘಾತಕ್ಕೆ ಸಂಬಂಧಿಸಿದಂತೆ ದೇಶದಾದ್ಯಂತ 270 ಮಾಜಿ ಅಧಿಕಾರಿಗಳು, ನ್ಯಾಯಾಧೀಶರು ಮತ್ತು ಮಾಜಿ ಸೇನಾ ಅಧಿಕಾರಿಗಳು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದು ದುರಂತ ಸಂಚಿನ ಸಾಧ್ಯತೆಯನ್ನು ವ್ಯಕ್ತಪಡಿಸಿದ್ದಾರೆ.

ಪತ್ರದಲ್ಲಿ 90ರ ದಶಕ ಮತ್ತು 2000ರ ದಶಕದ ಆರಂಭದಲ್ಲಿ, ದೇಶ ವಿರೋಧಿ ಶಕ್ತಿಗಳ ಟ್ಯಾಂಪರಿಂಗ್‌ನಿಂದಾಗಿ ರೈಲ್ವೆ ಹಳಿಗಳಲ್ಲಿ ಅಪಘಾತಗಳು ಸಂಭವಿಸಿದವು. ರೈಲ್ವೇ ಹಳಿಯ ಬಳಿ ಇರುವ ಅಕ್ರಮ ಒತ್ತುವರಿ ಸೇರಿದಂತೆ ರೈಲ್ವೆ ಹಳಿಯ ಉದ್ದಕ್ಕೂ ಇರುವ ಅಕ್ರಮ ಒತ್ತುವರಿಯನ್ನು ತೆರವುಗೊಳಿಸುವಂತೆ ಇವರೆಲ್ಲಾ ಪತ್ರದಲ್ಲಿ ಒತ್ತಾಯಿಸಿದ್ದಾರೆ. ವಿಧ್ವಂಸಕ ಕೃತ್ಯದಿಂದ ಹಿಡಿದು ಪ್ರತಿಯೊಂದು ಆಯಾಮದಲ್ಲೂ ತನಿಖೆ ನಡೆಸುವಂತೆ ಮಾಜಿ ಡಿಜಿಪಿ ವಿಕ್ರಮ್ ಸಿಂಗ್ ಮತ್ತು ಮಾಜಿ ಡಿಜಿಪಿ ಎಸ್ಪಿ ವೇದ್ಯಾ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರದಲ್ಲಿ ಸಲಹೆ ನೀಡಿದ್ದಾರೆ.

ಮಾಜಿ ಅಧಿಕಾರಿಗಳು, ನ್ಯಾಯಾಧೀಶರು, ಮಾಜಿ ಸೇನಾ ಅಧಿಕಾರಿಗಳಿಂದ ಪ್ರಧಾನಿ ಮೋದಿಗೆ ಪತ್ರ

ಪ್ರಧಾನಿಗೆ ಪತ್ರ ಬರೆದಿರುವ ಹೆಚ್ಚಿನ ಐಎಎಸ್/ಐಪಿಎಸ್ ಅಧಿಕಾರಿಗಳು ಇಂತಹ ಘಟನೆಗಳನ್ನು ತಡೆಯಲು ಪಡೆಗಳನ್ನು ಸೂಕ್ತವಾಗಿ ನಿಯೋಜಿಸಬೇಕೆಂದು ಪ್ರತಿಪಾದಿಸಿದ್ದಾರೆ. ಇದರೊಂದಿಗೆ ಸಿಬಿಐ ತನಿಖೆಯಲ್ಲಿ ಸ್ಪಷ್ಟವಾಗಲಿದೆ ಎಂದು ಹೇಳಲಾಗಿದೆ. ಅಪಘಾತಕ್ಕೆ ಉದ್ದೇಶಪೂರ್ವಕ ವಿಧ್ವಂಸಕ ಕೃತ್ಯ ಮತ್ತು ಭಯೋತ್ಪಾದನೆಯೂ ಕಾರಣವಾಗಿರಬಹುದು ಎಂದು ಪತ್ರದಲ್ಲಿ ತಿಳಿಸಲಾಗಿದೆ. ಅಪಘಾತದ ನಂತರ, ಈ ಘಟನೆಯು ರೈಲ್ವೆಯ ನಿರ್ಲಕ್ಷ್ಯದಿಂದ ಸಂಭವಿಸಿದೆಯೇ ಅಥವಾ ಇದು ದೊಡ್ಡ ಪಿತೂರಿಯ ಭಾಗವೇ ಎಂಬ ಪ್ರಶ್ನೆಗಳು ನಿರಂತರವಾಗಿ ಉದ್ಭವಿಸಿದವು. ಈ ಕುರಿತು ಸಂಪೂರ್ಣ ತನಿಖೆ ನಡೆಸಲು ಮೊದಲು ರೈಲ್ವೆ ಸುರಕ್ಷತಾ ಆಯುಕ್ತರು ತನಿಖೆಗೆ ಆದೇಶಿಸಿದರು. ನಂತರ ಸಿಬಿಐ ತನಿಖೆಗೆ ಒಳಪಡಿಸಲು ನಿರ್ಧರಿಸಲಾಯಿತು.

ಜಿಎಸ್‌ಟಿ ಸಮಿತಿ ನೇತೃತ್ವ ಸಿದ್ದರಾಮಯ್ಯ ಹೆಗಲಿಗೆ?



ನವದೆಹಲಿ: ಜಿಎಸ್‌ಟಿ ದರ ಸುಧಾರಣೆಗೆ ರಚಿಸಿರುವ ಸಚಿವರ ಸಮಿತಿಯ ಸಂಚಾಲಕ ಸ್ಥಾನಕ್ಕೆ ಯಾರನ್ನು ನೇಮಕ ಮಾಡಬೇಕು ಎಂಬ ಬಗ್ಗೆ ಕೇಂದ್ರ ಹಣಕಾಸು ಸಚಿವಾಲಯ ಆಲೋಚನೆ ನಡೆಸಿದೆ. ಬಸವರಾಜ ಬೊಮ್ಮಾಯಿ ಅವರು ಕರ್ನಾಟಕದ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವ ಆಗಿದ್ದಾಗ, ಈ ಸಮಿತಿಯ ಸಂಚಾಲಕರಾಗಿದ್ದರು. ಅವರ ಅಧಿಕಾರ ಅವಧಿ ಪೂರ್ಣಗೊಂಡ ನಂತರ ಈ ಸ್ಥಾನವು ಖಾಲಿ ಇದೆ. ಜಿಎಸ್‌ಟಿ ಮಂಡಳಿಯು ಏಳು ಸದಸ್ಯರ ಈ ಸಮಿತಿಯನ್ನು 2021ರ ಸೆಪ್ಟೆಂಬರ್‌ನಲ್ಲಿ ರಚಿಸಿದೆ. ಈಗ ಹೊಸ ಸಂಚಾಲಕರನ್ನು ನೇಮಿಸುವ ಉದ್ದೇಶದಿಂದ ಹಣಕಾಸು ಸಚಿವಾಲಯವು ಇತರ ಸದಸ್ಯರ ಜೊತೆ ಸಮಾಲೋಚನೆ ಆರಂಭಿಸಿದೆ. ಕರ್ನಾಟಕವು ಸಮಿತಿಯ ಸದಸ್ಯ ರಾಜ್ಯವಾಗಿ ಮುಂದುವರಿಯಬಹುದು. ಸದಸ್ಯರ ನಡುವಿನ ಸಮಾಲೋಚನೆ ಆಧರಿಸಿ ಹೊಸ ಸಂಚಾಲಕರನ್ನು ಆಯ್ಕೆ ಮಾಡಲಾಗುತ್ತದೆ ಎಂದು ಮೂಲಗಳು ಹೇಳಿವೆ. ▶ 8ನೇ ಪುಟಕ್ಕೆ

ಬೆಂ–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಭೀಕರ ಅಪಘಾತ

ಓರ್ವ ಸಾವು, ಮೂವರಿಗೆ ಗಂಭೀರ ಗಾಯ



ರಾಮನಗರ: ವೇಗವಾಗಿ ಚಲಿಸುತ್ತಿದ್ದ ಕಾರು ಡಿವೈಡರ್‌ಗೆ ಡಿಕ್ಕಿಹೊಡೆದ ಪರಿಣಾಮ ಚಾಲಕ ಸಾವನ್ನಪ್ಪಿದ್ದು, ಮೂವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ನಡೆದಿದೆ. ಚನ್ನಪಟ್ಟಣ ತಾಲೂಕಿನ ಕೋಲೂರು ಗೇಟ್ ಬಳಿಯ ಚಾಮುಂಡೇಶ್ವರಿ ಆಸ್ಪತ್ರೆ ಮುಂಭಾಗ ಅಪಘಾತ ಸಂಭವಿಸಿದ್ದು, ಮದ್ದೂರು ಮೂಲದ ಚಾಲಕ ಮಂಜೇಶ್ (28) ಸಾವನ್ನಪ್ಪಿದ್ದಾರೆ ಮೂವರು ಗಂಭೀರವಾಗಿ ಗಾಯಗೊಂಡು, ಚಾಮುಂಡೇಶ್ವರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೈಸೂರು ಮಾರ್ಗದಿಂದ ಬರುತ್ತಿದ್ದ ಟಾಟಾ ಇಂಡಿಕಾ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಮಧ್ಯೆ ಅಳವಡಿಸಿದ್ದ ಡಿವೈಡರ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಕಾರು ಸಂಪೂರ್ಣ ನಜ್ಜು ಗುಜ್ಜಾಗಿದೆ. ಈ ಹಿನ್ನೆಲೆಯಲ್ಲಿ ಬೆಂ–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಕೆಲಕಾಲ ಟ್ರಾಫಿಕ್ ಜಾಮ್ ಆಗಿ ಪ್ರಯಾಣಿಕರು ಪರದಾಡುವಂತಾಗಿತ್ತು. ಚನ್ನಪಟ್ಟಣ ಗ್ರಾಮಾಂತರ ಪೊಲೀಸರು ಭೇಟಿ ನೀಡಿದರು. ಚನ್ನಪಟ್ಟಣ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೂನಿಯರ್ ಮಹಿಳಾ ಏಷ್ಯಾ ಕಪ್ ಹಾಕಿ: ಭಾರತಕ್ಕೆ ಚೊಚ್ಚಲ ಕಿರೀಟ

ಕಾಕಾಮಿಗಾರಾ, ಜಪಾನ್: ಸಾಂಘಿಕ ಪ್ರದರ್ಶನ ನೀಡಿದ ಭಾರತ ತಂಡ, ಮಹಿಳೆಯರ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯ ಫೈನಲ್‌ನಲ್ಲಿ ದಕ್ಷಿಣ ಕೊರಿಯಾ ತಂಡದ ಮೇಲೆ ಭಾನುವಾರ 2–1 ಗೋಲುಗಳ ಅಚ್ಚರಿಯ ಜಯಗಳಿಸಿ ಮೊದಲ ಬಾರಿ ಪ್ರಶಸ್ತಿ ಗೆದ್ದುಕೊಂಡಿತು.

ಅನು ಮತ್ತು ನೀಲಂ ಅವರು ಭಾರತ ತಂಡದ ಪರ ಗೋಲುಗಳನ್ನು ಗಳಿಸಿದರೆ, ನಾಲ್ಕು ಬಾರಿಯ ಚಾಂಪಿಯನ್ ಕೊರಿಯಾ ಪರ ಏಕೈಕ ಗೋಲನ್ನು ಪಾರ್ಕ್ ಸಿಯೊಯೊನ್ ಗಳಿಸಿದರು. ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಜಪಾನ್ ತಂಡವನ್ನು 1–0 ಯಿಂದ ಸೋಲಿಸಿ ಫೈನಲ್ ಪ್ರವೇಶಿಸಿತ್ತು. ಆ ಮೂಲಕ ವರ್ಷಾಂತ್ಯಕ್ಕೆ ನಡೆಯುವ ಜೂನಿಯರ್ ಮಹಿಳಾ ವಿಶ್ವಕಪ್‌ಗೂ ಅರ್ಹತೆ ಪಡೆದಿತ್ತು.

22ನೇ ನಿಮಿಷ ಅನು ಪೆನಾಲ್ಟಿ ಕಾರ್ನರ್‌ನಲ್ಲಿ ಭಾರತದ ಮೊದಲ ಗೋಲು ಬಾರಿಸಿದರು. ಸೆಮಿಫೈನಲ್‌ನಲ್ಲಿ ಜಪಾನ್ ವಿರುದ್ಧ ಮಾಡಿದ್ದ ತಪ್ಪನ್ನು ಪುನರಾವರ್ತನೆ ಮಾಡದೆ ಭಾರತಕ್ಕೆ ಆರಂಭಿಕ ಮುನ್ನಡೆ ತಂದುಕೊಟ್ಟರು. ಇದಾದ ಮೂರೇ ನಿಮಿಷಕ್ಕೆ ಎದುರಾಳಿ ತಂಡದ ಪಾರ್ಕ್



ಸಿಯೊಯೆನ್ (24ನೇ ನಿ.) ಚಾಣಾಕ್ಷ ಹೊಡೆತದ ಮೂಲಕ ಗೋಲು ಗಳಿಸಿ ಸಮಬಲ ಸಾಧಿಸಿದರು. ವಿರಾಮದ ವೇಳೆ ಸ್ಕೋರ್ 1–1ರಲ್ಲಿ ಸಮನಾಗಿತ್ತು. 3ನೇ ಕ್ವಾರ್ಟರ್‌ನಲ್ಲಿ ನೀಲಂ ಅವರು 41ನೇ ನಿಮಿಷ ದೊರೆತ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಚೆಂಡನ್ನು ಬಿರುಸಿನಿಂದ ಗೋಲ್‌ಕೀಪರ್ ಬಲಬದಿಯಿಂದ ಗುರಿ ತಲುಪಿಸಿ ಭಾರತಕ್ಕೆ ಮುನ್ನಡೆ ತಂದುಕೊಟ್ಟರು. ಕೊರಿಯಾ ಆಟಗಾರರೂ ಸಾಕಷ್ಟು ದಾಳಿಗಳನ್ನು ನಡೆಸಿದರು. ಆದರೆ ಅವಕಾಶಗಳನ್ನು ಪರಿವರ್ತಿಸಲು ವಿಫಲವಾದರು. ಕೊನೆಯ ಕ್ವಾರ್ಟರ್‌ನಲ್ಲಿ ಭಾರತ ತಂಡ ಮುನ್ನಡೆ ಉಳಿಸಿಕೊಳ್ಳುವ ಪ್ರಯತ್ನದಲ್ಲಿ ರಕ್ಷಣೆಯತ್ತ ಹೆಚ್ಚಿನ ಗಮನಹರಿಸಿತು. ಹೀಗಾಗಿ ಚೆಂಡು ಭಾರತದ ಆಟಗಾರ್ತಿಯರ ಬಳಿಯೇ ಇತ್ತು. ಸಮ ಮಾಡಿಕೊಳ್ಳುವ ಹತಾಶ ಯತ್ನದಲ್ಲಿ ಕೊರಿಯಾ ಆಟಗಾರ್ತಿಯರು ಕೆಲವೊಮ್ಮೆ ಮುನ್ನುಗ್ಗಿದ್ದರೂ ತಪ್ಪು ಪಾಸ್‌ಗಳಿಂದಾಗಿ ಎಡವಿದರು.

ನಗದು ಬಹುಮಾನ ಘೋಷಣೆ: ಮೊದಲ ಬಾರಿ ಪ್ರಶಸ್ತಿಯನ್ನು ಗೆದ್ದ ಆಟಗಾರ್ತಿಯರಿಗೆ ತಲಾ ರೂ. 2 ಲಕ್ಷ ಮತ್ತು ನೆರವು ಸಿಬ್ಬಂದಿಗೆ ತಲಾ ರೂ. 1 ಲಕ್ಷ ನಗದು ಬಹುಮಾನವನ್ನು ಹಾಕಿ ಇಂಡಿಯಾ ಘೋಷಣೆ ಮಾಡಿದೆ.

ನಕ್ಕರೆ ಅದೇ ಸ್ವರ್ಗ

ಈರಮ್ಮ : (ಪಕ್ಕದ ಮನೆ ಬೋರಮ್ಮನವರಿಗೆ ಫೋನ್ ಮಾಡಿ) ಏನ್ರೀ ಫ್ರೀ ಇದ್ದೀರಾ....

ಬೋರಮ್ಮ: ಫ್ರೀ ಇದ್ದೀನಿ, ಹೇಳಿ ಏನ್ ಸಮಾಚಾರ...

ಈರಮ್ಮ : ನಾಳೆ ಬೆಳಗ್ಗೆ ಮಡಿಕೇರಿಗೆ ಫ್ರೀ ಬಸ್ಸಿನಲ್ಲಿ ಹೋಗಿ ಬರೋಣ, ಬರ್ತೀರಾ?

ಬೋರಮ್ಮ: ಏನ್ ವಿಷಯ...

ಈರಮ್ಮ : ಸ್ವಲ್ಪ ತಲೆ ನೋವಿತ್ತು, ಟೀ ಕುಡ್ಕೊಂಡ್ ಬರೋಣ ಅಂತ....

ಬೋರಮ್ಮ: ಹೌದಾ, ನಡೀರಿ ಹೋಗೋಣ, ಹಾಗೆ ಬರ್ತಾ ಚಿಕ್ಕಮಗಳೂರಿಗೂ ಹೋಗಿ ಬರೋಣ, ಮನೇಲಿ ಕಾಫಿಪುಡಿ ಖಾಲಿ ಆಗಿದೆ, ತಗೊಂಡು ಬರೋಣ.

ಮೈಸೂರು ಮಿತ್ರ

ಸೋಮವಾರ, 12 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

'ವಸ್ತುವಿನ ಬೆಲೆ ಕೊಳ್ಳುವುದಕ್ಕೆ ಮುಂಚೆ ತಿಳಿದುಕೊಳ್ಳುತ್ತೇವೆ, ಮನುಷ್ಯನ ಬೆಲೆ ಕಳೆದುಕೊಂಡ ನಂತರ ತಿಳಿದುಕೊಳ್ಳುತ್ತೇವೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಇಬ್ಬರ ಜಗಳ, ಮೂರನೆಯವನಿಗೆ ಲಾಭ

ನಿಮ್ಮ ಪತ್ರಗಳು

ನಗರ ಸಾರಿಗೆ ಬಸ್ಸುಗಳ ಸಮಸ್ಯೆ ಬಗೆಹರಿಸಿ

ಮಾನ್ಯರೆ,

ನಾನು ನಗರ ಸಾರಿಗೆ ಬಸ್ಸಿನ ನಿತ್ಯ ಪ್ರಯಾಣಿಕನಾಗಿರುತ್ತೇನೆ. ನಗರ ಸಾರಿಗೆ ಬಸ್ಸುಗಳ ಸಮಸ್ಯೆಯಿಂದಾಗಿ ಪ್ರಯಾಣಿಕರಿಗೆ ತಮ್ಮ ಕಾರ್ಯಸ್ಥಳಗಳಿಗೆ ತಲುಪಲು ಪ್ರತಿನಿತ್ಯ ವಿಳಂಬವಾಗುತ್ತಿದೆ. ಮೈಸೂರಿನ ಜೆ.ಪಿ.ನಗರದಲ್ಲಿ ಮತ್ತು ಇತರ ಕಡೆಗಳಲ್ಲಿ ಬೆಳಗ್ಗೆ 8.30 ರಿಂದ 9.30 ರವರೆಗೆ ಬಸ್ಸುಗಳ ಅಭಾವವಿರುತ್ತದೆ. ಜೆ.ಪಿ.ನಗರದ ಗೊಬ್ಬಳಿಮರ ತಂಗುದಾಣದಲ್ಲಿ ಬಹಳ ಜನದಟ್ಟಣೆಯಿರುತ್ತದೆ. ಶಾಲಾ–ಕಾಲೇಜು ವಿದ್ಯಾರ್ಥಿಗಳು ಮತ್ತು ನೌಕರರಿಗೆ ಪ್ರತಿದಿನವೂ ಬಹಳ ತೊಂದರೆಯಾಗುತ್ತಿದೆ. ಬಹಳಷ್ಟು ಬಸ್ಸುಗಳು ಹಿಂದಿನ ನಿಲ್ದಾಣದಲ್ಲಿ ಭರ್ತಿಯಾಗಿ ಬರುವ ಕಾರಣ ಗೊಬ್ಬಳಿಮರ ತಂಗುದಾಣದಲ್ಲಿ ನಿಲುಗಡೆ ನೀಡುವುದಿಲ್ಲ. ಇದರಿಂದಾಗಿ ಬಸ್ಸು ಹತ್ತಲು ಪ್ರಯಾಣಿಕರು ಬಸ್ಸಿನ ಹಿಂದೆ ಓಡಬೇಕಾಗಿದ್ದು, ಇದರಿಂದ ಅನಾಹುತಗಳು ಸಂಭವಿಸುವ ಸಾಧ್ಯತೆಗಳಿವೆ.

ಕೊರೊನಾದಿಂದಾಗಿ ಎರಡು ವರ್ಷಗಳ ಹಿಂದೆ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದ ಕುವೆಂಪುನಗರ ಘಟಕಕ್ಕೆ ಸೇರಿದ ಮಾರ್ಗಸಂಖ್ಯೆ 10ಎ, 11ಆರ್, 11ಆರ್‌ಜಿ, 62 ಆರ್‌ಜೆ, 72 ಮತ್ತು 135, 15 ಬಸ್ಸುಗಳು 3 ವರ್ಷಗಳಿಂದ ಸ್ಥಗಿತವಾಗಿದ್ದು, ಇದುವರೆವಿಗೂ ಕಾರ್ಯಾಚರಣೆಗೊಳ್ಳುತ್ತಿಲ್ಲ. ಮೈಸೂರು ನಗರದಲ್ಲಿ ನಗರ ಸಾರಿಗೆ ಬಸ್ಸುಗಳನ್ನು ತಮ್ಮ ದೈನಂದಿನ ಚಟುವಟಿಕೆಗಳಿಗಾಗಿ ನಂಬಿಕೊಂಡಿರುವ ಬಹಳಷ್ಟು ಸಂಖ್ಯೆಯ ಪ್ರಯಾಣಿಕರು ಮತ್ತು ಮಾಸಿಕ ಬಸ್ ಪಾಸ್ ಹೊಂದಿರುವವರು ಇದ್ದಾರೆ. ನಿಗದಿತ ಸಮಯಕ್ಕೆ ಬಸ್ಸುಗಳು ಬರದಿದ್ದಾಗ ಪ್ರಯಾಣಿಕರು ಅನಿವಾರ್ಯವಾಗಿ ದುಬಾರಿ ಹಣ ತೆತ್ತು ಆಟೋದಲ್ಲಿ ತಮ್ಮ ಕಾರ್ಯಸ್ಥಳಗಳಿಗೆ ತಲುಪಬೇಕಾಗಿದೆ. ಪ್ರಸ್ತುತ ಸಾರಿಗೆ ಬಸ್ಸುಗಳಲ್ಲಿ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಉಚಿತ ಪ್ರಯಾಣ ಕಲ್ಪಿಸಿರುವುದರಿಂದ ಸಾರಿಗೆ ಬಸ್ಸುಗಳಿಗೆ ಬೇಡಿಕೆ ಹೆಚ್ಚಾಗುತ್ತದೆ. ಆದಕಾರಣ ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು ದಯಮಾಡಿ ಇತ್ತ ಗಮನಹರಿಸಿ ಆದಷ್ಟು ಶೀಘ್ರ ಸ್ಥಗಿತವಾಗಿರುವ ಎಲ್ಲ ನಗರ ಸಾರಿಗೆ ಬಸ್ಸುಗಳನ್ನು ಕೂಡಲೇ ಮರು ಕಾರ್ಯಾಚರಣೆಗೊಳಿಸಬೇಕು, ಬಸ್ಸುಗಳ ಆಗಮನದ ಬಗ್ಗೆ ಮಾಹಿತಿ ನೀಡುವ ಐ.ಟಿ.ಎಸ್ (INTELLIGENT TRANSPORT SYSTEM) ಫಲಕವನ್ನು ಮರುಚಾಲನೆಗೊಳಿಸಬೇಕು ಮತ್ತು ಸಂಖ್ಯೆ 161ಕ್ಕೆ ನಿಲ್ದಾಣದ ಕೋಡ್ ಅನ್ನು ಎಸ್.ಎಂ.ಎಸ್ ಮಾಡುವ ಮೂಲಕ ಪ್ರಯಾಣಿಕರು ಬಸ್ಸುಗಳ ಆಗಮನದ ಬಗ್ಗೆ ಮಾಹಿತಿ ಪಡೆದುಕೊಳ್ಳುವ ವ್ಯವಸ್ಥೆಯನ್ನು ಮರುಜಾರಿಗೊಳಿಸಬೇಕು ಎಂದು ಸಾರ್ವಜನಿಕ ಕಳಕಳಿಯಿಂದ ಕೋರುತ್ತೇನೆ.

–ಪರಶಿವಮೂರ್ತಿ, ಜೆ.ಪಿ.ನಗರ, ಮೈಸೂರು.

ವಿನೋಬಾ ರಸ್ತೆ ಮುಕ್ತ ಹೋರಾಟ ಶ್ಲಾಘನೀಯ

ಮಾನ್ಯರೆ,

ಜನಪ್ರತಿನಿಧಿಗಳಿಗೆ ಹಾಗೂ ಅಧಿಕಾರಿಗಳಿಗೆ ಮೈಸೂರಿನ ಇತಿಹಾಸ ಸರಿಯಾಗಿ ತಿಳಿಯದಿದ್ದರೆ ನಮ್ಮ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಲ್ಪಿತ ಮೈಸೂರು ಅಭಿವೃದ್ಧಿ ನೆಪದಲ್ಲಿ ತನ್ನ ಸೌಂದರ್ಯವನ್ನು ಕಳೆದುಕೊಳ್ಳುವುದರಲ್ಲಿ ಯಾವುದೇ ಸಂಶಯವಿಲ್ಲ.ಸಯ್ಯಾಜಿರಾವ್ ರಸ್ತೆಯಿಂದ ಮಕ್ಕಾಜಿ ಚೌಕದ ಮೂಲಕ ಗಾಂಧಿ ವೃತ್ತ ತಲುಪಲು ಸರಾಗವಾಗಿದ್ದ ವಿನೋಬಾ ರಸ್ತೆಯನ್ನು ಕಳೆದ ಹಲವಾರು ವರ್ಷಗಳಿಂದ ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧಿಸಿ ಬಂದ್ ಮಾಡಲಾಗಿದ್ದುದ್ದನ್ನು ನ್ಯಾಯಾಲಯದಲ್ಲಿ ದಾವೆ ಹೂಡಿ ಸಾರ್ವಜನಿಕರ ಪರ ತೀರ್ಪು ಬರಲು ಹೋರಾಟ ಮಾಡಿದ ಮೈಸೂರು ರಕ್ಷಣಾ ವೇದಿಕೆ ಮೈಕಾ ಪ್ರೇಮಕುಮಾರ್ ಮತ್ತು ಎಂ. ಎ.ಮೋಹನ್ ಹಾಗೂ ಸಾರ್ವಜನಿಕರ ಶ್ರಮ ತುಂಬಾ ಶ್ಲಾಘನೀಯ.

ಮೈಸೂರು ಹೃದಯ ಭಾಗ ತುಂಬಾ ಸುಂದರವಾಗಿದ್ದು, ಅದನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳದೆ ಗರುಡಮಾಲ್‌ನಂತಹ ವಾಣಿಜ್ಯ ಮಳಿಗೆಗೆ ಅನುವು ಮಾಡಿಕೊಟ್ಟಿರುವುದು ಮತ್ತು ಟೌನ್‌ಹಾಲ್‌ನಲ್ಲಿ ಕಟ್ಟಡವನ್ನು ಕಟ್ಟಿರುವುದು, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಬಗ್ಗೆ ಯಾವುದೇ ಸೂಕ್ತ ನಿರ್ಧಾರ ಕೈಗೊಳ್ಳಲಾಗದೆ ಇರುವುದು ತುಂಬಾ ಬೇಸರದ ವಿಷಯ. ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವಾಗಲೂ ಸ್ಥಳೀಯ ನಾಗರಿಕರ ಜೊತೆಗೆ ಚರ್ಚಿಸಿ ಆಕ್ಷೇಪಣೆಗಳನ್ನು ಕರೆದು ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಸುದೀರ್ಘ ವರ್ಷಗಳ ನಂತರ ಈ ರಸ್ತೆಯಲ್ಲಿ ಸಾರ್ವಜನಿಕರು ಓಡಾಡುವಂತಾಗಿರುವುದು ಮೈಸೂರಿಗರಿಗೆ ಬಲು ಸಂತಸದ ವಿಷಯ. ಇದಕ್ಕೆ ಕಾರಣರಾದ ಪ್ರತಿಯೊಬ್ಬರೂ ಅಭಿನಂದನಾರ್ಹರು.

–ಬೆಸಗರಹಳ್ಳಿ ರವಿ ಪ್ರಸಾದ್, ಕೆಸಿನಗರ, ಮೈಸೂರು.

ಬಿಜೆಪಿ ಸೋಲಿಗೆ 'ಗ್ಯಾರಂಟಿ'ಗಳು ಕಾರಣ ಅಲ್ಲ...

ಮಾನ್ಯರೆ,

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ತನ್ನ ಸೋಲಿನ 'ಆತ್ಮಾವಲೋಕನ' ಸಭೆಯಲ್ಲಿ ಬಹುತೇಕ ಎಲ್ಲ ನಾಯಕರು ಕಾಂಗ್ರೆಸ್‌ನ ಗ್ಯಾರಂಟಿಗಳೇ ಪಕ್ಷದ ಸೋಲಿಗೆ ಕಾರಣ ಎಂದು ಹೇಳಿರುವುದಾಗಿ ಪತ್ರಿಕೆಗಳು ವರದಿ ಮಾಡಿವೆ.

ಆದರೆ ವಾಸ್ತವವಾಗಿ ಇದು ಶುದ್ಧ ಸುಳ್ಳು, ಗ್ಯಾರಂಟಿಗಳಿಂದ ಸ್ವಲ್ಪ ಮಟ್ಟಿಗೆ ಕಾಂಗ್ರೆಸ್‌ಗೆ ಲಾಭವಾಗಿರಬಹುದು, ಆದರೆ ಮುಖ್ಯವಾಗಿ, ಬಿಜೆಪಿ ಸರ್ಕಾರದ ಮಿತಿ ಮೀರಿದ ಭ್ರಷ್ಟಾಚಾರ, ಕೆಲವು ಮಂತ್ರಿಗಳ ದುರಹಂಕಾರದ ವರ್ತನೆ, ಬೊಮ್ಮಾಯಿ ಅವರ ದುರ್ಬಲ ನಾಯಕತ್ವ, ಮೋದಿ ಅವರೊಬ್ಬರನ್ನೇ ನಂಬಿ, ರೋಡ್ ಶೋ/ಸಾರ್ವಜನಿಕ ಸಭೆಗೆ ಸೇರುತ್ತಿದ್ದ ಜನರನ್ನು ನೋಡಿ ಅವೆಲ್ಲವೂ ಮತವಾಗಿ ಪರಿವರ್ತನೆಯಾಗುತ್ತದೆ ಎಂದು ತಪ್ಪಾಗಿ ಭಾವಿಸಿದ್ದು, ದೇಶದ ಪ್ರಧಾನಿಯನ್ನು ಹತ್ತಿರದಿಂದ ನೋಡುವ ಕುತೂಹಲದಿಂದ ಬರುತ್ತಿದ್ದಾರೆ ಎಂಬುದನ್ನು, ನಾಯಕರು ತಿಳಿಯದೇ ಹೋದದ್ದು ಕಾರಣ.

ಬಿಜೆಪಿ ನಾಯಕರೊಬ್ಬರು ನಮಗೆ ಮುಸ್ಲಿಂ ಸಮುದಾಯದ ಮತಗಳೇ ಬೇಡ ಎಂದು ಹೇಳಿಕೆ ನೀಡಿದ್ದು, (ಆದರೆ ಸಮೀಕ್ಷೆಯೊಂದರ ಪ್ರಕಾರ ಶೇ.9 ರಷ್ಟು ಮತಗಳು ಬಿಜೆಪಿಗೆ ಬಂದಿವೆ), ವ್ಯವಸ್ಥಿತ ರೀತಿಯಲ್ಲಿ ಚುನಾವಣಾ ಪ್ರಚಾರ ಮಾಡಲು ವಿಫಲವಾದದ್ದು, ಮುಖ್ಯವಾಗಿ ಬಡ ಮತ್ತು ತಳಸಮುದಾಯದವರ ಅತೃಪ್ತಿಯ ಅಲೆ ಬಿಜೆಪಿ ಸೋಲಿಗೆ ಕಾರಣವಾದವು. ವಾಸ್ತವವನ್ನು ಬಿಟ್ಟು ಬೇರೆಲ್ಲಾ ಕಾರಣ ಹೇಳುತ್ತಿದ್ದಾರೆ. **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು**

'ಹಣ' ಎಂದು ಹೆಣಗಬೇಡಿ

ಮಾನ್ಯರೆ,

ಪ್ರತಿ ದಿನವೂ ಪ್ರತಿ ಕ್ಷಣವು 'ಹಣ' ಎಂದು ಹೆಣಗಬೇಡಿ. ನಿಮ್ಮ ಕೋಟಿ ಕೋಟಿ ಹಣ ಆ ವಿಧಿ ನಿಯಮವನ್ನು ಒಂದು ಕ್ಷಣವೂ ಬದಲಾಯಿಸಲು ಸಾಧ್ಯವಿಲ್ಲ. ನಿಗದಿಯಾದ ಸಮಯಕ್ಕೆ ನಿಮ್ಮ ಹೆಣ ಬೀಳಲೇಬೇಕು. ಜೀವನವನ್ನು ಅರ್ಥಮಾಡಿಕೊಂಡು ಬದುಕಿ.

–ಹುಣಸೂರು ಕಾಳಿಂಗಚಾರ್, ಕುಂಬಾರಕೊಪ್ಪಲು, ಮೈಸೂರು.

ಬೆರಗು




ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಚರ್ಮ ತೊಳೆದರೆ ಕರ್ಮ ಹೋದೀತೆ...?

ಮನುಷ್ಯನಷ್ಟು ಅದೃಷ್ಟಶಾಲಿ ಪ್ರಾಣಿ ಭೂಮಿಯ ಮೇಲೆ ಮತ್ತೊಂದಿಲ್ಲ ಅಂತಲೇ ಹೇಳಬಹುದು. ಪ್ರಕೃತಿದತ್ತವಾಗಿ ಲಭಿಸಿರುವ ಬುದ್ಧಿಶಕ್ತಿಯಿಂದ ತನ್ನ ಆರೋಗ್ಯವನ್ನು ಕಾಪಾಡಿಕೊಂಡು ಒಂದು ರೀತಿಯ ಸುರಕ್ಷತಾ ಜೀವನವನ್ನು ರೂಢಿಸಿಕೊಂಡಿದ್ದಾನೆ. ಪ್ರಕೃತಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಾ, ಪ್ರಕೃತಿಯ ಸಹನೆಯನ್ನು ಸದಾ ಪರೀಕ್ಷಿಸುತ್ತಿರುತ್ತಾನೆ. ಮನುಷ್ಯ ನಾಗರಿಕನಾದಂತೆಲ್ಲಾ ಅನೇಕ ರೀತಿ ರಿವಾಜುಗಳನ್ನು ಮಾಡಿಕೊಂಡು, ಸಂಸ್ಕಾರ–ಸಂಸ್ಕೃತಿ, ಧರ್ಮ–ಕರ್ಮ, ಪಾಪ–ಪುಣ್ಯ... ಎಂದು ಹೇಳುತ್ತಾ ಸ್ವಸ್ಥ ಸಮಾಜವನ್ನು ನಿರ್ಮಿಸಲು ಪ್ರಯತ್ನಿಸುತ್ತಲೇ ಇರುವುದನ್ನು ಕಾಣಬಹುದು. ಸ್ವಸ್ಥ ಜೀವನಕ್ಕೆ ಆರೋಗ್ಯಕರ ದೇಹವಿದ್ದರಷ್ಟೇ ಸಾಲದು, ಆರೋಗ್ಯಕರ ಮನಸ್ಸು ಸಹ ಇರಬೇಕು. ದೇಹದ ಆರೋಗ್ಯ ರಕ್ಷಣೆಗೆ ಶುಚಿತ್ವ ಆಹಾರ, ವಿಹಾರದಂತಹ ಅಂಶಗಳು ಗಣನೆಗೆ ಬಂದರೆ ಮಾನಸಿಕ ಆರೋಗ್ಯ ರಕ್ಷಣೆಗೆ ಧರ್ಮ, ನೀತಿ, ಲೋಕದ ನಿಯಮ, ಯೋಗ–ಧ್ಯಾನ... ಹೀಗೆ ಅನೇಕ ಅಂಶಗಳು ಕಾಣಸಿಗುತ್ತವೆ.

ಪ್ರಾಣಿ ಪ್ರಪಂಚದಲ್ಲಿ ಪ್ರಕೃತಿ ಧರ್ಮವೇ ಧರ್ಮ, ಅವುಗಳು ತಮ್ಮದೇ ಧರ್ಮ ಸೃಷ್ಟಿ ಮಾಡುವಷ್ಟು ಬುದ್ಧಿವಂತಿಕೆ ಹೊಂದಿಲ್ಲ. ಸರಿ ತಪ್ಪು ವಿಚಾರಗಳು ಅವುಗಳಿಗೆ ಏನೂ ಅನಿಸುವುದೇ ಇಲ್ಲ. ಹೊಟ್ಟೆ ಹಸಿವಾದಾಗ ಬೇಟೆ ಆಡುವುದು ಪ್ರಕೃತಿ ಧರ್ಮ ಎನಿಸುತ್ತದೆ. ಆದರೆ ಒಬ್ಬ ಸಸ್ಯಾಹಾರಿ ಮನುಷ್ಯನಿಗೆ ಹಸಿದ ಹುಲಿಯು ಅಸಹಾಯಕ ಹುಲ್ಲೆಯನ್ನು ಬೇಟೆಯಾಡಿದರೆ ಅದೊಂದು ಅಧರ್ಮ ಪಾಲಿಸುವ ಕ್ರೂರ ಮೃಗ ಎನಿಸಿ ಬಿಡಬಹುದು. ಆದರೆ ಹುಲಿಗೆ ಹುಲ್ಲೆಯನ್ನು ಬೇಟೆಯಾಡದೆ ಬೇರೆ ಮಾರ್ಗವೇ ಇಲ್ಲ. ಅದಕ್ಕೆ ಧರ್ಮ–ಕರ್ಮಗಳ ಗೋಜು ಇಲ್ಲ. ಹಸಿವಾದಾಗ ಬೇಟೆಯಾಡುವುದು ಅದಕ್ಕೆ ಸಹಜಧರ್ಮ. ಅದು ಹೊಟ್ಟೆ ತುಂಬಿದಾಗ ಬೇಟೆಯಾಡುವುದಿಲ್ಲ. ಹಸಿವಾದಾಗ ಮಾತ್ರ ಬೇಟೆಯಾಡುತ್ತದೆ. ಆದರೆ ಮನುಷ್ಯನ ವಿಷಯದಲ್ಲಿ ಹಾಗಾಗುವುದಿಲ್ಲ. ಧರ್ಮ ಕರ್ಮದ ಕುರಿತಾಗಿ ಭಾಷಣ ಬಿಗಿಯುವ ಮನುಷ್ಯ ದುರಾಸೆಯಿಂದ ಪ್ರಕೃತಿ ಧರ್ಮವನ್ನು ಮೀರಿ ದರ್ಪದಿಂದ ಕಂಡದ್ದನ್ನೆಲ್ಲಾ ತಿಂದು ತೇಗುವ ಜಾಯಮಾನ ಹೊಂದಿರುತ್ತಾನೆ.

ಮನುಷ್ಯನಷ್ಟು ಒಳ್ಳೆಯ ಜೀವಿ ಮತ್ತೊಂದಿಲ್ಲ ಎಂಬುದು ಬಹುಜನರ ಅಂಬೋಣ. ಏಕೆಂದರೆ ತನ್ನನ್ನು ಹೆತ್ತ, ಹೊತ್ತ ಜನಕರನ್ನು ಇಳಿವಯಸ್ಸಿನಲ್ಲಿ ಜತನದಿಂದ ನೋಡಿಕೊಳ್ಳುವ ಪ್ರಾಣಿ ಮತ್ತೊಂದಿಲ್ಲ, ಕಷ್ಟದಲ್ಲಿರುವವರಿಗೆ, ಅಸಹಾಯಕರಿಗೆ ಸಹಾಯ ಮಾಡುವ ಗುಣ, ಇವುಗಳು ಮನುಷ್ಯನನ್ನು ಸಹಾನುಭೂತಿಯ ಸಾಕಾರಮೂರ್ತಿಯಂತೆ ಕಾಣುವಂತೆ ಮಾಡುತ್ತವೆ. ಕೆಲವರು ಧರ್ಮ, ನ್ಯಾಯ, ಪುಣ್ಯದ ಕೆಲಸಗಳನ್ನು ಸಮಾಜದ ಅಲಿಖಿತ ಕಾನೂನು ಎಂಬಂತೆ ಪಾಲಿಸುವುದನ್ನು ಕಾಣಬಹುದು. ಮನುಷ್ಯ ಊಹೆ ಮಾಡಲಾರದಷ್ಟು ಪುಣ್ಯದ ಕೆಲಸಗಳನ್ನು ಮಾಡಿ ದೇವತಾ ಮನುಷ್ಯ ಎನಿಸಿಕೊಳ್ಳುವಂತೆ ಅದಕ್ಕೆ ತದ್ವಿರುದ್ಧವಾಗಿ ಯಾವ ಪ್ರಾಣಿಗಳೂ ಸಹ ಮಾಡಲಾಗದಂತಹ ಪಾಪಕೃತ್ಯಗಳನ್ನು ಮಾಡಿ ದಾನವ ರೂಪಿಯಾಗಿ ತನ್ನ ವಿರಾಟ್ ಸ್ವರೂಪವನ್ನು ಅನಾವರಣಗೊಳಿಸುತ್ತಾನೆ. ಪಾಪದ ಕೆಲಸ ಮಾಡಿ ಪ್ರಾಯಶ್ಚಿತ್ತಕ್ಕಾಗಿ ಗುಡಿಗೋಪುರಗಳನ್ನು ಅಲೆಯುತ್ತಾನೆ.



> ಮನುಷ್ಯ ಮತ್ತೊಬ್ಬರಿಗೆ ಮೋಸ ಮಾಡಿದ್ದನ್ನು ಕಂಡು ಹಿಡಿಯಲು ಪೊಲೀಸರ ಅಗತ್ಯವಿಲ್ಲ, ಶಿಕ್ಷಿಸಲು ನ್ಯಾಯಾಲಯವೇ ಬೇಕಿಲ್ಲ. ಮನುಷ್ಯನಿಗೆ ಇರುವ ಮನಃಸಾಕ್ಷಿಯೇ ಮನುಷ್ಯನ ಮೋಸ ವಂಚನೆಯನ್ನು ಕಂಡು ಹಿಡಿದು ಎಚ್ಚರಿಸುತ್ತಲೇ ಇರುತ್ತದೆ. ತಪ್ಪು ಮಾಡಿದ ಅಪರಾಧ ಮನೋಭಾವ ಮನುಷ್ಯನನ್ನು ಹಗಲಿರುಳು ಕಾಡುತ್ತಲೇ ಇರುತ್ತದೆ. ಅದಕ್ಕಾಗಿ ಅವನು ತನ್ನನ್ನು ಶಿಕ್ಷಿಸಿಕೊಳ್ಳಲು ಬಯಸುತ್ತಾನೆ. ಆದರೆ ಸ್ವಯಂಶಿಕ್ಷೆಗೆ ಆಯ್ದುಕೊಳ್ಳುವ ಸ್ಥಳವೇ ತೀರ್ಥಕ್ಷೇತ್ರಗಳು, ಗುಡಿ ಗೋಪುರಗಳು. ಅನೇಕರು ಪುಣ್ಯಕ್ಷೇತ್ರಗಳಿಗೆ ಹೋದಾಗ ನದಿಯಲ್ಲಿ ಪುಣ್ಯಸ್ನಾನ ಮಾಡುವ ಪರಿಪಾಠ ಹೊಂದಿರುತ್ತಾರೆ. ಇದಕ್ಕೆ ಒಂದು ವೈಜ್ಞಾನಿಕ ಕಾರಣವೂ ಇದೆ. ಮನುಷ್ಯನ ಋಣಾತ್ಮಕ ಮನೋಭಾವವನ್ನು ಕಳೆದು ಧನಾತ್ಮಕ ಮನೋಭಾವವನ್ನು ವೃದ್ಧಿಸುವ ಕೆಲಸ ನದಿಸ್ನಾನದಿಂದ ಉಂಟಾಗುತ್ತದೆ.

ಪಾಪ–ಪುಣ್ಯಗಳ ಮಾನದಂಡಗಳು ಎಲ್ಲಾ ಜನರಿಗೂ ಒಂದೇ ತೆರನಾಗಿರುವುದಿಲ್ಲ. ಧರ್ಮ, ಜಾತಿ, ವರ್ಗಗಳ ಆಹಾರ ಪದ್ಧತಿಗಳನ್ನೇ ಗಮನಿಸಿದರೆ ತುಂಬಾ ವೈರುಧ್ಯ ಆಚರಣೆ, ಅನುಸರಣೆಗಳನ್ನು ಕಾಣಬಹುದು. ಒಂದು ಧರ್ಮಕ್ಕೆ ಮಾಂಸಾಹಾರ ಸಹಜ ಆಹಾರ ಪದ್ಧತಿಯಾದರೆ, ಮತ್ತೊಂದು ಧರ್ಮಕ್ಕೆ ಪ್ರಾಣಿವಧೆ ಮಹಾಪಾಪ. ಒಂದು ಧರ್ಮಕ್ಕೆ ಒಂದೊಂದು ಪ್ರಾಣಿ ಪೂಜ್ಯನೀಯ ಎನಿಸಿ ಅದನ್ನು ವಧಿಸಿ ತಿನ್ನುವುದು ಪಾಪ ಎನ್ನುತ್ತವೆ. ರಸ್ತೆಯಲ್ಲಿ ನಡೆಯುವಾಗ ಅಚಾನಕ್ ಇರುವೆಗಳು ಹರಿದು ಹೋಗುವಾಗ ಅವುಗಳನ್ನು ತುಳಿದು ಸಾಯಿಸುವುದು ಮಹಾಪಾಪ ಎಂದು ಭಾವಿಸುವ ಒಂದು ಧರ್ಮ ಇದ್ದರೆ, ಒಂಟೆಯಂತಹ ದೊಡ್ಡ ಪ್ರಾಣಿಯನ್ನು ಕೊಂದು ತಿಂದರೂ ಅದು ಪಾಪವಲ್ಲ ಎಂದು ಮತ್ತೊಂದು ಧರ್ಮ ಭಾವಿಸುತ್ತದೆ.

ವ್ಯಾಪಾರದಲ್ಲಿ ಗ್ರಾಹಕರಿಗೆ ಮೋಸ ಮಾಡುವುದು ಪಾಪದ ಕೆಲಸ ಎಂದು ಒಬ್ಬರು ಭಾವಿಸಿದರೆ. ಮತ್ತೊಬ್ಬರು 'ವ್ಯಾಪಾರಂ ದ್ರೋಹ ಚಿಂತನಂ' ಎನ್ನುತ್ತಾರೆ. ವ್ಯಾಪಾರಿ ಧರ್ಮದಲ್ಲಿ ಮೋಸದ ಧರ್ಮವೂ ಅಡಗಿರುತ್ತದೆ ಎಂಬುದು ವಿದೇಶಿ ಲೇಖಕನೊಬ್ಬನ ಅಭಿಪ್ರಾಯ. ಮೋಸವಿಲ್ಲದ ವ್ಯಾಪಾರ ಊಹಿಸಲು ಸಾಧ್ಯವಿಲ್ಲ ಎಂದು ನಿರ್ಭಿಡೆಯಿಂದ ಹೇಳುತ್ತಾನೆ. ವ್ಯಾಪಾರ ಎಂಬುದು ಇಂದು ಎಲ್ಲಾ ಕ್ಷೇತ್ರಗಳಿಗೂ ವಿಸ್ತರಿಸಿಕೊಂಡಿದೆ. ಆರೋಗ್ಯಕ್ಕಾಗಿ ಇರುವ ಆಸ್ಪತ್ರೆ, ಶಿಕ್ಷಣಕ್ಕಾಗಿ ಇರುವ ಶಿಕ್ಷಣ ಸಂಸ್ಥೆಗಳು ಅಷ್ಟೇ ಅಲ್ಲ, ಜನರಿಗೆ ಭಕ್ತಿಭಾವ ಮೂಡಿಸಬೇಕಾದ ದೇವಸ್ಥಾನಗಳಲ್ಲಿಯೂ ಇಂದು ವ್ಯಾಪಾರಿ ಮನೋಭಾವ ಮಿತಿ ಮೀರಿದೆ. ಜನರ ನಂಬಿಕೆಯನ್ನು ಬಂಡವಾಳ ಮಾಡಿಕೊಂಡು ಶೋಷಿಸುವ ಕೇಂದ್ರಗಳಾಗಿ ಇವುಗಳು ಇಂದು ಕಾರ್ಯನಿರ್ವಹಿಸುತ್ತಿವೆ.

ಮನುಷ್ಯ ಮತ್ತೊಬ್ಬರಿಗೆ ಮೋಸ ಮಾಡಿದ್ದನ್ನು ಕಂಡು ಹಿಡಿಯಲು ಪೊಲೀಸರ ಅಗತ್ಯವಿಲ್ಲ, ಶಿಕ್ಷಿಸಲು ನ್ಯಾಯಾಲಯವೇ ಬೇಕಿಲ್ಲ. ಮನುಷ್ಯನಿಗೆ ಇರುವ ಮನಃಸಾಕ್ಷಿಯೇ ಮನುಷ್ಯನ ಮೋಸ ವಂಚನೆಯನ್ನು ಕಂಡು ಹಿಡಿದು ಎಚ್ಚರಿಸುತ್ತಲೇ ಇರುತ್ತದೆ. ತಪ್ಪು ಮಾಡಿದ ಅಪರಾಧ ಮನೋಭಾವ ಮನುಷ್ಯನನ್ನು ಹಗಲಿರುಳು ಕಾಡುತ್ತಲೇ ಇರುತ್ತದೆ. ಅದಕ್ಕಾಗಿ ಅವನು ತನ್ನನ್ನು ಶಿಕ್ಷಿಸಿಕೊಳ್ಳಲು ಬಯಸುತ್ತಾನೆ. ಆದರೆ ಸ್ವಯಂ ಶಿಕ್ಷೆಗೆ ಆಯ್ದುಕೊಳ್ಳುವ ಸ್ಥಳವೇ ತೀರ್ಥ ಕ್ಷೇತ್ರಗಳು, ಗುಡಿ ಗೋಪುರಗಳು. ಅನೇಕರು ಪುಣ್ಯಕ್ಷೇತ್ರಗಳಿಗೆ ಹೋದಾಗ ನದಿಯಲ್ಲಿ ಪುಣ್ಯ ಸ್ನಾನ ಮಾಡುವ ಪರಿಪಾಠ ಹೊಂದಿರುತ್ತಾರೆ. ಇದಕ್ಕೆ ಒಂದು ವೈಜ್ಞಾನಿಕ ಕಾರಣವೂ ಇದೆ. ಮನುಷ್ಯನ ಋಣಾತ್ಮಕ ಮನೋಭಾವವನ್ನು ಕಳೆದು ಧನಾತ್ಮಕ ಮನೋಭಾವವನ್ನು ವೃದ್ಧಿಸುವ ಕೆಲಸ ನದಿಸ್ನಾನದಿಂದ ಉಂಟಾಗುತ್ತದೆ. ಆದರೆ ಇಂದು ಬಹುಪಾಲು ಜನ ನದಿಯಲ್ಲಿ ಸ್ನಾನ ಮಾಡುವುದು ಪಾಪಗಳನ್ನು ಕಳೆದುಕೊಳ್ಳಲು ಎಂದು ಹೇಳಬಹುದು. ಮಾಡ ಬಾರದ ಕೃತ್ಯಗಳನ್ನು ಮಾಡಿ ನದಿಯಲ್ಲಿ ಸ್ನಾನ ಮಾಡಿದರೆ ಅವುಗಳು ಅಳಿಸಿ ಹೋಗುತ್ತವೆಯೇ? ಚರ್ಮ ತೊಳೆದರೆ ಕರ್ಮ ಹೋದೀತೇ? ಎಂಬುದೇ ಪ್ರಶ್ನೆ.

ಅನೇಕ ಶರಣರು, ದಾಸರು, ದಾರ್ಶನಿಕರು ಮನುಷ್ಯ ಪಾಪ ತೊಳೆಯಲು ತೋರುವ ಡಂಭಾಚಾರದ ಭಕ್ತಿಯನ್ನು ಲೇವಡಿ ಮಾಡಿದ್ದಾರೆ. ವಚನಕಾರರಾದ ಬಸವಣ್ಣನವರು 'ನೀರ ಕಂಡಲ್ಲಿ ಮುಳುಗುವರಯ್ಯ, ಮರವ ಕಂಡಲ್ಲಿ ಸುತ್ತುವರಯ್ಯ, ಬತ್ತುವ ಜಲವ, ಒಣಗುವ ಮರವ ನೆಚ್ಚಿದವರು ನಿಮ್ಮನೆತ್ತ ಬಲ್ಲರಯ್ಯ ಕೂಡಲಸಂಗಮದೇವ' ಎಂದು ಮಾರ್ಮಿಕವಾಗಿ ತಮ್ಮ ಈ ವಚನದಲ್ಲಿ ಹೇಳಿದ್ದಾರೆ. ಮಾಡಬಾರದ ಪಾಪಕೃತ್ಯಗಳನ್ನು ಮಾಡಿ ನದಿ ನೀರಿನಲ್ಲಿ ಮಿಂದೆದ್ದರೆ, ಮರವ ಸುತ್ತಿದರೆ ಪಾಪಕರ್ಮಗಳು ಕಳೆಯುವ ಖಾತ್ರಿ ಉಂಟೇ? ನದಿ ನೀರಿನಲ್ಲಿ ಮಿಂದರೆ ಚರ್ಮ ವ್ಯಾಧಿಗಳು ಗುಣವಾಗಬಹುದು, ಆದರೆ ಮನೋವ್ಯಾಧಿಗಳಾಗಲಿ, ಪಾಪಗಳಾಗಲಿ ತೊಲಗುವುದಿಲ್ಲ.

ಇಂದು ಬಹುತೇಕ ದೇವಸ್ಥಾನಗಳು ಭಕ್ತರಿಂದ ತುಳುಕಾಡುತ್ತಿವೆ. ದುರಾಸೆಯನ್ನು ಈಡೇರಿಸಲು ಕೋರಿಕೆ ಸಲ್ಲಿಸುವವರು ಕೆಲವರಾದರೆ, ತಮ್ಮ ದುರಾಸೆಯನ್ನು ಈಡೇರಿಸಿಕೊಂಡ ಜನ ತಮ್ಮ ಪಾಪಕರ್ಮಗಳನ್ನು ತೊಳೆಯುವಂತೆ ತಪ್ಪುಕಾಣಿಕೆ ಸಲ್ಲಿಸಲು ಬಂದಿರುತ್ತಾರೆ. ಭಕ್ತರ ಸೋಗಿನಲ್ಲಿ ಬರುವ ಅನೇಕರು ನಿಜವಾಗಿ ಅಪರಾಧಿಗಳಾಗಿರುತ್ತಾರೆ. ತಮ್ಮ ಸ್ವಾರ್ಥ ಸಾಧನೆಗೆ ಅನ್ಯಾಯ, ಅಕ್ರಮ, ಅಧರ್ಮ, ಅನೀತಿ ಅನುಸರಿಸಿ ಪಾಪದ ಕೊಡೆಯನ್ನು ತುಂಬಿಕೊಂಡೇ ಬಂದಿರುತ್ತಾರೆ. ದೇವರ ಬಳಿಗೆ ಬರುವ ಭಕ್ತರೆಲ್ಲಾ ಸಾತ್ವಿಕರೇ ಆಗಿರುವುದಿಲ್ಲ. ಪ್ರಾರ್ಥನೆಗಾಗಿ ಬರುವವರಷ್ಟೇ ಪ್ರಾಯಶ್ಚಿತ್ತಕ್ಕಾಗಿ ಬರುವವರು ಇರುತ್ತಾರೆ.

ಮನುಷ್ಯ ಅನ್ಯರಿಗೆ ತಿಳಿಯದಂತೆ ತಪ್ಪನ್ನು ಮಾಡಬಹುದು. ಆದರೆ ತನ್ನ ಆತ್ಮಸಾಕ್ಷಿಗೆ ತಿಳಿಯದಂತೆ ತಪ್ಪೆಸಗಲು ಸಾಧ್ಯವೇ ಇಲ್ಲ. ತಾನು ಮಾಡುತ್ತಿರುವ ಕೃತ್ಯ ತಪ್ಪು ಎಂದು ತಿಳಿದಿದ್ದರೂ ಆತ ಮಾಡುತ್ತಾನೆ ಎಂದರೆ ಅವನಲ್ಲಿ ಮನುಷ್ಯತ್ವ ಸತ್ತು ಹೋಗಿದೆ ಅಂತಲೇ ಅರ್ಥ. ಅಷ್ಟಾದರೂ ಪಾಪಕೃತ್ಯಗಳು ಮನುಷ್ಯನಿಗೆ ನೆಮ್ಮದಿಯಿಂದ ಇರಲು ಬಿಡುವುದಿಲ್ಲ. ಅದಕ್ಕಾಗಿ ಪುಣ್ಯಕ್ಷೇತ್ರಗಳಿಗೆ ಹೆಚ್ಚು ಹೆಚ್ಚು ಭೇಟಿ ನೀಡಿ ಪಾಪಕರ್ಮಗಳನ್ನು ಕಡಿಮೆ ಮಾಡಿಕೊಳ್ಳುವ ಬಯಕೆ ಅವನದ್ದಾಗಿರುತ್ತದೆ. ಪ್ರಾಯಶ್ಚಿತ್ತ ಮಾಡಿಕೊಳ್ಳಲು ದೇವರ ಗುಡಿಗೆ ಎಡತಾಕುವ ಮಂದಿ ಒಮ್ಮೆ ತಪ್ಪು ಕಾಣಿಕೆ ಸಲ್ಲಿಸಿಯಾದ ನಂತರ ಮತ್ತೆ ಪಾಪಕಾರ್ಯಗಳನ್ನು ಮಾಡುವುದಿಲ್ಲ ಎಂದು ಅರ್ಥವಲ್ಲ. ಮತ್ತೆ ಪಾಪಕೃತ್ಯದ ಲೈಸೆನ್ಸ್‌ನ್ನು ನವೀಕರಿಸಿಕೊಳ್ಳಲು ಶುಲ್ಕ ಪಾವತಿಸಲು ಮಾತ್ರ ಅವರು ದೇವಾಲಯಗಳಿಗೆ ಬರುವುದು.

ಪದ ತಾಂಬೂಲ:

ಅಪರಾಧಿಗಳು ಜೈಲಿನಲ್ಲಷ್ಟೇ ಅಲ್ಲ
ದೇವಸ್ಥಾನದ ಸರತಿ ಸಾಲಿನಲ್ಲಿಯೂ ಇರುತ್ತಾರೆ

ಸಕಾಲಿಕ



ಆರ್.ಪಿ.ಜಗದೀಶ್
ಹಿರಿಯ ಪತ್ರಕರ್ತರು
ಮೊ: 9845048051

ವರ್ಗಾವರ್ಗಿ ಸುಗ್ಗಿಗೆ ಕಡಿವಾಣ ಹಾಕಿ



> ಸಚಿವರಿಗೆ ನಿಯಮದಂತೆ ನೀಡುವ ಸಿಬ್ಬಂದಿಗಿಂತ ಹೆಚ್ಚಿನವರನ್ನು ನೇಮಿಸಿಕೊಳ್ಳಲು ಇಲ್ಲವೇ ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳಲು ಅವಕಾಶ ಇರಬಾರದು. ಆಪ್ತರ ಮುಲಾಜಿಗೆ ಒಳಗಾಗಿ ಬೇಕಾಬಿಟ್ಟಿ ನೇಮಕ ಮಾಡಿಕೊಂಡರೆ ವಿಧಾನಸೌಧ ತೋಟದಪ್ಪನವರ ಧರ್ಮಛತ್ರದಂತೆ ಸಚಿವರ ಕಚೇರಿಗಳು ತುಂಬುತ್ತವೆ. ಇವರಲ್ಲಿ ಬಹುಮಂದಿಗೆ ಕರ್ತವ್ಯವೂ (ಕೆಲಸ), ಹೊಣೆಗಾರಿಕೆಯಂತೂ ಇಲ್ಲವೇ ಇಲ್ಲ. ಕೇಳುವವರೂ–ಹೇಳುವವರ್ಯಾರೂ ಇಲ್ಲದಂತಾಗುತ್ತದೆ. ಇಂತಹ ದುಂದುವೆಚ್ಚಕ್ಕೆ ಕಡಿವಾಣ ಹಾಕಿ ರಾಜ್ಯದ ಬೊಕ್ಕಸವನ್ನು ಸರ್ಪಕಾವಲಿನಂತೆ ರಕ್ಷಿಸಬೇಕಾದದ್ದು, ಹಣಕಾಸು ಸಚಿವರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹೊಣೆ. ಇಲ್ಲದಿದ್ದರೆ ಸರ್ಕಾರದ ವೆಚ್ಚವೆಂದರೆ 'ಯಾರದ್ದೋ ದುಡ್ಡು ಯಲ್ಲಮ್ಮನ ಜಾತ್ರೆ' ಎಂಬ ಗಾದೆಯಂತಾಗುತ್ತದೆ.

ದಕ್ಷ, ಪ್ರಾಮಾಣಿಕ, ಪಾರದರ್ಶಕ ಆಡಳಿತ ನೀಡಲು ನಿಚ್ಚಳ ಬಹುಮತವೂ ಬಹುಮಟ್ಟಿಗೆ ನೆರವಾಗುತ್ತದೆ. ಆದರೆ ಸರ್ಕಾರಕ್ಕೆ ತಕ್ಷಣಕ್ಕೆ ಸವಾಲಾಗಿರುವುದು ವರ್ಗಾವರ್ಗಿ ಎಂಬ 'ಸುಗ್ಗಿಕಾಲ'. ಕಮಲದ ಕಡೆ 'ಕೈ' ತೋರಿಸುತ್ತಿದ್ದ ಕಾಂಗ್ರೆಸ್‌ನ 'ಹಸ್ತ' ಎಷ್ಟು ಶುದ್ಧ ಎಂಬುದು ಈಗ ಬೆಳಕಿಗೆ ಬರಲಿದೆ.

ನಿರೀಕ್ಷೆಗೂ ಮೀರಿ ಕಾಂಗ್ರೆಸ್ ಶಾಸಕರು ಆಯ್ಕೆಯಾಗಿದ್ದಾರೆ. ಬಿಜೆಪಿ ಆಡಳಿತದ ವಿರುದ್ಧ ರೋಸಿಹೋಗಿದ್ದ ರಾಜ್ಯದ ಮತದಾರರು ಕಾಂಗ್ರೆಸ್‌ನ 'ಕೈ'ಗೆ ಜೈ ಎಂದಿದ್ದಾರೆ. ಈ ಹಿನ್ನೆಲೆಯಲ್ಲಿ ಇವರೆಲ್ಲರ ಆಸೆ ಆಕಾಂಕ್ಷೆಗಳು ಬೆಟ್ಟದಷ್ಟಿವೆ. ಇವರನ್ನೆಲ್ಲಾ ತೃಪ್ತಿಪಡಿಸುವುದು ಸರ್ಕಾರಕ್ಕೆ ದೊಡ್ಡ ಸವಾಲು, ನಿಜ.

ಹಾಗೆಂದ ಮಾತ್ರಕ್ಕೆ ಬಿಗಿ ಆಡಳಿತವನ್ನೂ ಬಲಿಕೊಟ್ಟು, ಮುಲಾಜಿಗೆ ಒಳಗಾಗಿ ಎಲ್ಲಕ್ಕೂ ಎಲ್ಲರಿಗೂ ಹೌದಪ್ಪ ಎಂದರೆ ಹೊಸ ಸರ್ಕಾರದ ಮೇಲಿನ ಭರವಸೆ ಹುಸಿಯಾಗುತ್ತದೆ. ಜನಪರ–ಜನಪ್ರಿಯ ಐದು ಕಾರ್ಯಕ್ರಮಗಳು ಹಳ್ಳ ಹಿಡಿಯುತ್ತವೆ. ಬಡವರ ನಾಡಿಮಿಡಿತ ಬಲ್ಲ ಸಿದ್ದರಾಮಯ್ಯ ಅವರಿಗೆ ಇದರ ಅರಿವಿದ್ದಂತಿದೆ.

ನಿಮಗೆ ತಾಕತ್ತಿದ್ದರೆ ಈ ವರ್ಷ ವರ್ಗಾವರ್ಗಿ ಇಲ್ಲವೆಂದು ಕಠಿಣ ನಿರ್ಧಾರ ಕೈಗೊಳ್ಳಿ. ಆಗ ಆಡಳಿತ ಅರ್ಧ ಸುಧಾರಣೆಗೊಳ್ಳುತ್ತದೆ. ಯಾವ ನೌಕರ ಯಾವ ಜಾಗದಲ್ಲಿದ್ದರೇನು ಪ್ರಪಂಚ ಮುಳುಗಿ ಹೋಗುತ್ತದೆಯೇ. ಇದೆಲ್ಲ ಶಾಸಕರಿಗೂ–ಆಪ್ತರಿಗೂ ಬೇಕಾಗಿರುವುದರಿಂದಲೇ ಈ ದಂಧೆಗೆ ಹೆಚ್ಚಿನ ಮಹತ್ವ. ನಿಮ್ಮ ಆದ್ಯತೆ ಅಭಿವೃದ್ಧಿ ಕಡೆಗೋ ಇಲ್ಲ ವರ್ಗಾವಣೆಗೆ ಮಣೆ ಹಾಕುವುದೋ ತೀರ್ಮಾನಿಸಿ.

ಹೊಸ ಸರ್ಕಾರ ಮೊದಲು ಮಾಡಬೇಕಾದ ಕೆಲಸ ಜಡ್ಡುಹಿಡಿದ ಆಡಳಿತವನ್ನು ಹೊಡೆದೆಬ್ಬಿಸಿ, ಚುರುಕುಗೊಳಿಸುವುದು. 'ಶಕ್ತಿ' ಸೌಧವಾದ ವಿಧಾನಸೌಧ ಹಾಗೂ ಅದರ ಬಾಲ ವಿಕಾಸಸೌಧದಲ್ಲಿ ಬೇರು ಬಿಟ್ಟಿರುವ 'ದಲ್ಲಾಳಿ' ನೌಕರರಿಗೆ ಚಾಟಿ ಬೀಸಬೇಕು. ಎಲ್ಲಾ ಸಚಿವರ ಬಳಿ ನುಸುಳಿಕೊಂಡಿರುವ ಹಳೇ ಹುಲಿ ನೌಕರರನ್ನೆಲ್ಲಾ 'Pool' ಮಾಡಿ ಸೇವಾ ಹಿರಿತನದ ಆಧಾರದ ಮೇಲೆ ನಿರ್ದಾಕ್ಷಿಣ್ಯವಾಗಿ ಇವರನ್ನು ಹೊರಗಟ್ಟಬೇಕು. ಹೊಸಬರಿಗೆ, ದಕ್ಷರಿಗೆ, ಪ್ರಾಮಾಣಿಕರಿಗೆ ಅವಕಾಶ ಮಾಡಿಕೊಡಬೇಕು. ಹಿರಿಯ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಈ ಸ್ವಚ್ಛತಾ ಕಾರ್ಯಗಳು ತ್ವರಿತಗತಿಯಲ್ಲಿ ಆಗಬೇಕು.

ಇಲ್ಲವಾದರೆ ದಲ್ಲಾಳಿಗಳಂತೆ ವರ್ತಿಸುತ್ತ ಸಚಿವರ ಬೇಕು–ಬೇಡಗಳಿಗೆ ತಕ್ಕಂತೆ ಕುಣಿಯುತ್ತಾ ಆಡಳಿತ ವ್ಯವಸ್ಥೆಯನ್ನು ಹಾಳು ಮಾಡುತ್ತಾರೆ. ಇವರ ಲಂಗು ಲಗಾಮು ಇಲ್ಲದ ಆಟಗಳಿಂದಾಗಿ 'ಶಕ್ತಿಸೌಧ' ತನ್ನ ಪಾವಿತ್ರ್ಯತೆ ಕಳೆದುಕೊಂಡು ಕಳಂಕ ಹೊತ್ತುಕೊಳ್ಳುತ್ತದೆ.




ಸಿದ್ದರಾಮಯ್ಯ ಡಿ.ಕೆ.ಶಿವಕುಮಾರ್

ಯಾವೊಬ್ಬ ಸಚಿವರ ಬಳಿಯೂ ಎರಡು–ಮೂರಕ್ಕಿಂತ ಹೆಚ್ಚು ಸಿಬ್ಬಂದಿ ಅವರ ಸ್ವಜಾತಿಯವರಾಗಿರಬಾರದು.

ಸಚಿವರಿಗೆ ನಿಯಮದಂತೆ ನೀಡುವ ಸಿಬ್ಬಂದಿಗಿಂತ ಹೆಚ್ಚಿನವರನ್ನು ನೇಮಿಸಿಕೊಳ್ಳಲು ಇಲ್ಲವೇ ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳಲು ಅವಕಾಶ ಇರಬಾರದು. ಆಪ್ತರ ಮುಲಾಜಿಗೆ ಒಳಗಾಗಿ ಬೇಕಾಬಿಟ್ಟಿ ನೇಮಕ ಮಾಡಿಕೊಂಡರೆ ವಿಧಾನ ಸೌಧ ತೋಟದಪ್ಪನವರ ಧರ್ಮಛತ್ರದಂತೆ ಸಚಿವರ ಕಚೇರಿಗಳು ತುಂಬುತ್ತವೆ. ಇವರಲ್ಲಿ ಬಹುಮಂದಿಗೆ ಕರ್ತವ್ಯವೂ (ಕೆಲಸ), ಹೊಣೆಗಾರಿಕೆಯಂತೂ ಇಲ್ಲವೇ ಇಲ್ಲ. ಕೇಳುವವರೂ–ಹೇಳುವವರ್ಯಾರೂ ಇಲ್ಲದಂತಾಗುತ್ತದೆ. ಇಂತಹ ದುಂದುವೆಚ್ಚಕ್ಕೆ ಕಡಿವಾಣ ಹಾಕಿ ರಾಜ್ಯದ ಬೊಕ್ಕಸವನ್ನು ಸರ್ಪಕಾವಲಿನಂತೆ ರಕ್ಷಿಸಬೇಕಾದದ್ದು, ಹಣಕಾಸು ಸಚಿವರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹೊಣೆ. ಇಲ್ಲದಿದ್ದರೆ ಸರ್ಕಾರದ ವೆಚ್ಚವೆಂದರೆ 'ಯಾರದ್ದೋ ದುಡ್ಡು ಯಲ್ಲಮ್ಮನ ಜಾತ್ರೆ' ಎಂಬ ಗಾದೆಯಂತಾಗುತ್ತದೆ.

ಐದು ವರ್ಷಗಳ ಅಧಿಕಾರದ ಅವಧಿಯಲ್ಲಿ ಮೊದಲ ವರ್ಷದ ಆಡಳಿತ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್‌ಗೆ 'ಟೆಸ್ಟ್ ಡೋಸ್' ಇದ್ದಂತೆ.

ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ–ಉಪ ಮುಖ್ಯಮಂತ್ರಿ ಸೇರಿದಂತೆ ಎಲ್ಲಾ ಸಚಿವರ ಆಡಂಬರದ ಬದುಕಿಗೆ ಇತಿಶ್ರೀ ಹಾಡಬೇಕು. ಭಗವಂತ ನಿಮಗೆ ಬಯಸಿದ್ದನ್ನೆಲ್ಲಾ ಕೊಟ್ಟಿದ್ದಾನೆ. ಅಂದ ಮೇಲೆ ಸರಳ ಜೀವನಕ್ಕೆ ಶರಣಾಗಿ ಮಾದರಿ ರಾಜಕಾರಣಿಗಳಾಗಿ ಜನ ಮೆಚ್ಚುವಂತೆ ಕೆಲಸ ಮಾಡಿ. ನೀವೂ ಶೇ.40 ಕಪ್ಪುಮಸಿ 'ಕೈ'ಗೆ ಅಂಟಿಕೊಳ್ಳದಂತೆ ಎಚ್ಚರವಹಿಸಿ. ಜನ ಕಣ್ಣಿಗೆ ಎಣ್ಣೆಬಿಟ್ಟುಕೊಂಡು ಕಾಯುತ್ತಿದ್ದಾರೆ. ನಿಮ್ಮ ನಡೆ–ನುಡಿ ಬಗ್ಗೆ ಕಾದು ನೋಡುತ್ತಿದ್ದಾರೆ. ಒಂದು ಮುದ್ದೆ ಇಲ್ಲವೇ ಎರಡು ಚಪಾತಿಗಾಗಿ ಅಷ್ಟು 'ಹಣದಾಹ' ಯಾಕೆ? ಆತ್ಮಾವಲೋಕನ ಮಾಡಿಕೊಳ್ಳಿ.

ಇನ್ನು ಕಾಂಗ್ರೆಸ್‌ನ ನಿಚ್ಚಳ ಬಹುಮತದ ಪೆಟ್ಟಿಗೆ ಗಲಿಬಿಲಿಗೊಂಡು ನಿಶ್ಚಲವಾಗಿ ಮಕಾಡೆ ಮಲಗಿರುವ ಬಿಜೆಪಿಗೆ ವಿರೋಧ ಪಕ್ಷದ ನಾಯಕನ ಆಯ್ಕೆಯೇ ಸವಾಲಾಗಿದೆ. 'Surprise' ಕೊಡುವುದರಲ್ಲಿ ನಿಸ್ಸೀಮರಾಗಿರುವ ಬಿಜೆಪಿ ವರಿಷ್ಠರು, ಯಾರಿಗೆ ಮಣೆ ಹಾಕುತ್ತಾರೋ ಕಾದು ನೋಡಬೇಕು. 'ಆಡಿಸಿನೋಡು, ಬೀಳಿಸಿನೋಡು, ಉರುಳಿ ಹೋಗದು' ಎಂಬಂತೆ ಜೆಡಿಎಸ್, ಕಾಂಗ್ರೆಸ್–ಬಿಜೆಪಿ ನಡುವೆ ಕಮಲದ ಕಡೆ ವಾಲುತ್ತಿರುವಂತೆ ಕಾಣುತ್ತಿದೆ.

ಈಗ ಎಲ್ಲಾ ಹೊಣೆಗಾರಿಕೆ ಹೊಸ ಸರ್ಕಾರದ ಹೆಗಲ ಮೇಲಿದೆ. ಜೋಡೆತ್ತಿನ ನಡಿಗೆ ಅವಲಂಬಿಸಿದೆ. ಮತದಾರ ಹೊಸ ಹೊಸ ನಿರೀಕ್ಷೆಗಳಲ್ಲಿ ತನ್ನ ಬದುಕು ಕಂಡುಕೊಳ್ಳುತ್ತಿದ್ದಾನೆ. ಸರ್ಕಾರ ಆಪ್ತರ ಪುನರ್‌ವಸತಿ ಕೇಂದ್ರವಾಗದಂತೆ ಎಚ್ಚರವಹಿಸಬೇಕಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಸೋಮವಾರ 12 ಜೂನ್ 2023

ಮಂಡ್ಯದಲ್ಲಿ ಶಕ್ತಿ ಯೋಜನೆಗೆ ಚಾಲನೆ

ಮಹಿಳೆಯರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ: ಸಿಆರ್‌ಎಸ್





ಮಂಡ್ಯ, ಜೂ.11– ಸರ್ಕಾರದ ಮಹತ್ವಾಕಾಂಕ್ಷಿ ಶಕ್ತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದ್ದು, ಮಹಿಳೆಯರು ರಾಜ್ಯದ 4 ಸಾರಿಗೆ ನಿಗಮಗಳ ಸಾಮಾನ್ಯ, ನಗರ ಸಾರಿಗೆ ಮತ್ತು ವೇಗದೂತ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಬಹುದು ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಭಾನುವಾರ ಮಂಡ್ಯ ಬಸ್ ನಿಲ್ದಾಣದಲ್ಲಿ ಶಕ್ತಿ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು, ಮಹಿಳೆಯರು ಬಸ್‌ನಲ್ಲಿ ಪ್ರಯಾಣಿಸುವಾಗ ತಪ್ಪದೇ ಆಧಾರ್ ಅಥವಾ ಚುನಾವಣಾ ಗುರುತಿನ ಚೀಟಿ ಹಾಜರು ಪಡಿಸಿ ನಿರ್ವಾಹಕರಿಂದ ಶೂನ್ಯ ಮೊತ್ತದ ಟಿಕೆಟ್ ಪಡೆದುಕೊಳ್ಳಬೇಕು. ಮಹಿಳೆಯರ ಪ್ರಯಾಣಕ್ಕೆ ತಗಲುವ ವೆಚ್ಚವನ್ನು ಪ್ರತಿ ಮಾಹೆ ಸರ್ಕಾರ ನಿಗಮಕ್ಕೆ ಪಾವತಿ ಮಾಡಲಿದೆ ಎಂದರು.

ಮಹಿಳೆಯರಿಗೆ ಉಚಿತವಾಗಿ ಬಸ್ ಪ್ರಯಾಣ ಕಲ್ಪಿಸಿರುವುದರಿಂದ ಹಣ ಉಳಿತಾಯವಾಗಲಿದೆ. ಈ ಹಣವನ್ನು ಮಹಿಳೆಯರು ಮನೆಗೆ ಖರ್ಚು ಮಾಡಿ. ಬಸ್ಸಿನಲ್ಲಿ ನಿರ್ವಾಹಕರು ಮಹಿಳೆಯರೊಂದಿಗೆ ಸೌಜನ್ಯದಿಂದ ವರ್ತಿಸಿ. ಅವರಿಗೆ ನೀಡುವ ಉಚಿತ ಪ್ರಯಾಣದ ವೆಚ್ಚವನ್ನು ಸರ್ಕಾರ ಭರಿಸಲಿದೆ. ಬಸ್ಸುಗಳನ್ನು ಮಹಿಳೆಯರು ಹೆಚ್ಚು ಇರುವ ಸ್ಥಳದಲ್ಲಿ ನಿಲುಗಡೆ ಮಾಡದಿರುವುದು. ಅನುಚಿತವಾಗಿ ವರ್ತಿಸುವ ಬಗ್ಗೆ ದೂರುಗಳು ಬಂದರೆ ಕ್ರಮ ವಹಿಸಲಾಗುವುದು ಎಂದರು.

ಮಂಡ್ಯದಿಂದ ರಾಮನಗರ ಹಾಗೂ ಮಂಡ್ಯದಿಂದ ಮೈಸೂರಿಗೆ ಶಟಲ್ ಬಸ್‌ಗಳು ಇಲ್ಲದಿದ್ದರೆ ವ್ಯವಸ್ಥೆ ಮಾಡುವಂತೆ ಹಾಗೂ ಮಂಡ್ಯ ಬಸ್ ನಿಲ್ದಾಣದ ನವೀಕರಣ ಕುರಿತಂತೆ ಪ್ರಸ್ತಾವನೆ ಸಲ್ಲಿಸುವಂತೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ತಿಳಿಸಿದರು.

ಶಾಸಕ ಗಣಿಗ ರವಿಕುಮಾರ್ ಮಾತನಾಡಿ, ಜಿಲ್ಲೆಯ ಮಹಿಳೆಯರು ಮಂಡ್ಯದಿಂದ ರಾಜ್ಯದ ಯಾವ ಜಿಲ್ಲೆಗೆ ಬೇಕಾದಾರೂ ಬಡವರು, ಶ್ರೀಮಂತರು ಎಂಬ ಬೇಧ ಭಾವವಿಲ್ಲದೇ ಉಚಿತವಾಗಿ ಸಂಚರಿಸಬಹುದು ಎಂದರು. ಮಹಿಳೆ ತಾಯಿ, ಅಕ್ಕ, ತಂಗಿ, ಹೆಂಡತಿಯಾಗಿ ಕುಟುಂಬದಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ. ಅವರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯ. ಮಹಿಳೆಯರನ್ನು ಗೌರವಿಸಲು ಶಕ್ತಿ ಯೋಜನೆ ಜಾರಿಗೆ ತರಲಾಗಿದೆ. ಹಲವು ಮಹಿಳೆಯರು ತಮ್ಮ ಮನೆ ಕೆಲಸದ ನಿರ್ವಹಣೆ ಜೊತೆಗೆ ಹೊರಗೂ ದುಡಿಯುತ್ತಾರೆ. ಗೆಜ್ಜಲಗೆರೆ ಗಾರ್ಮೆಂಟ್ಸ್‌ನಲ್ಲಿ ಕೆಲಸ ನಿರ್ವಹಿಸುವ ಮಹಿಳೆಯರು ಆಟೋಗಳಲ್ಲಿ ಹಣ ಉಳಿತಾಯ ಮಾಡಲು ಕಡಿಮೆ ಆಸನದ ವ್ಯವಸ್ಥೆ ಇದ್ದರೂ ಹೆಚ್ಚಿನ ಜನರು ಸಂಚರಿಸುತ್ತಾರೆ. ಮಹಿಳೆಯರು ಈ ಯೋಜನೆ ಉಪಯೋಗಿಸಿಕೊಳ್ಳಿ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ, ಜಿಪಂ ಸಿಇಓ ಶೇಖ್ ತನ್ವೀರ್ ಆಸೀಫ್, ವಿಭಾಗೀಯ ನಿಯಂತ್ರಣಾಧಿಕಾರಿ ನಾಗರಾಜ್, ಪ್ರಾದೇಶಿಕ ಸಾರಿಗೆ ಅಧಿಕಾರಿ ವಿವೇಕಾನಂದ ಸೇರಿದಂತೆ ಇನ್ನಿತರರಿದ್ದರು

ಮೂರೇ ವರ್ಷದಲ್ಲಿ ಜಿಲ್ಲೆಗೆ ಹೊಸ ರೂಪ

ಅಭಿನಂದನಾ ಸಮಾರಂಭದಲ್ಲಿ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಭರವಸೆ



ಮಂಡ್ಯ, ಜೂ.11– ಮಂಡ್ಯ ನಗರ ಸೇರಿದಂತೆ ಇಡೀ ಜಿಲ್ಲೆಗೆ ಇನ್ನು ಮೂರೇ ವರ್ಷದಲ್ಲಿ ಹೊಸ ರೂಪ ಕೊಡುತ್ತೇವೆ ಕಾದು ನೋಡಿ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಭರವಸೆ ನೀಡಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ಸಂಘ ಆಯೋಜಿಸಿದ್ದ ನೂತನ ಜನಪ್ರತಿನಿಧಿಗಳಿಗೆ ಅಭಿನಂದನಾ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ನಾವು ಕೊಟ್ಟ ಭರವಸೆಗೆ ಅಭಿಮಾನದಿಂದ ಮತ ಹಾಕಿ ಗೆಲ್ಲಿಸಿದ ಜಿಲ್ಲೆಯ ಮತದಾರರಿಗೆ ಅಭಿವೃದ್ಧಿ ಮಾಡುವ ಮೂಲಕ ನಿಮ್ಮ ವಿಶ್ವಾಸ ಉಳಿಸಿಕೊಳ್ಳುತ್ತೇವೆ. ನಾವು ಚುನಾವಣೆ ಸಂದರ್ಭ ಮಾತು ಕೊಟ್ಟಂತೆ ಅಧಿಕಾರಕ್ಕೆ ಬಂದ 15 ದಿನದಲ್ಲಿ ಮೈಷುಗರ್ ಕಾರ್ಖಾನೆಗೆ ಹೊಸ ರೂಪ ನೀಡುತ್ತೇವೆಂದು ಮಾತು ಕೊಟ್ಟಿದ್ದೆವು. ಅದರಂತೆ ಸರ್ಕಾರ ಮೈಷುಗರ್‌ಗೆ 50 ಕೋಟಿ ರೂ. ಬಿಡುಗಡೆ ಮಾಡಿ ಮಾತು ಉಳಿಸಿಕೊಂಡಿದೆ. ರಾಜ್ಯದ ಯಾವ ಜಿಲ್ಲೆಗೂ ಇಷ್ಟು ಬೇಗ ಇಷ್ಟು ಮೊತ್ತದ ಅನುದಾನ ಬಿಡುಗಡೆಯಾಗಿಲ್ಲ ಎಂದರು.

ವಾರದೊಳಗೆ ವಿಷನ್ ಮಂಡ್ಯ ಎಂಬ ತಂಡ ಕಟ್ಟಿ ನಗರ ಹಾಗೂ ಇಡೀ ಜಿಲ್ಲೆ ಅಭಿವೃದ್ಧಿಗೆ ರೂಪುರೇಷೆ ತಯಾರಿಸಿ ವರದಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದೇವೆ ಅದನ್ನು ಒಂದು ವರ್ಷದ ಅವಧಿಯಲ್ಲಿ ಸರ್ಕಾರದಿಂದ ಮಂಜೂರು ಮಾಡಿಸಿ ಕಾರ್ಯಗತಗೊಳಿಸುವುದು ನಿಶ್ಚಿತ. ಯಾರಿಗೂ ಸಂಶಯ ಬೇಡ ಎಂದರು.

> ಜನ ಕೆಲವೊಮ್ಮೆ ಅಭಿವೃದ್ಧಿ ಮಾಡಿದವರನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. 5 ವರ್ಷ ಗೆಲ್ಲಿಸಿ, 5 ವರ್ಷ ಮನೆಯಲ್ಲಿ ಕೂರಿಸಿದರೆ ಪ್ರಯೋಜನವಿಲ್ಲ. ಸದಾ ಅಭಿವೃದ್ಧಿ ಕನಸು ಕಂಡು ಆ ನಿಟ್ಟಿನಲ್ಲಿ ಚಾಚೂ ತಪ್ಪದೇ ಕೆಲಸ ಮಾಡುವ ವ್ಯಕ್ತಿಯನ್ನು ಬೆಂಬಲಿಸಿ ಕೆಲಸ ಮಾಡಿಸಿಕೊಳ್ಳುವುದು ಉಪಯುಕ್ತ. ಹಾಗಾಗಿ ಒಂದು ಸರ್ಕಾರ ಕನಿಷ್ಠ 10 ವರ್ಷ ಆಡಳಿತ ನಡೆಸುವಂತಾಗಬೇಕು. ಅದು ಒಂದೇ ಪಕ್ಷದ ಸರ್ಕಾರ ಆಡಳಿತದಲ್ಲಿರಬೇಕು. ಹಾಗಾದಾಗ ಮಾತ್ರ ಅಭಿವೃದ್ಧಿ ಸಾಧ್ಯ.
>
> – ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ.

ಜಿಲ್ಲೆ ಅಭಿವೃದ್ಧಿಯಾಗಿದ್ದರೆ ಅದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾರಣ. ಜಿಲ್ಲೆಯಲ್ಲಿ ಸಾಂಸ್ಕೃತಿಕ, ಶೈಕ್ಷಣಿಕ, ಆರೋಗ್ಯ ಕ್ಷೇತ್ರಗಳಲ್ಲಿ ಒಂದಷ್ಟು ಕೆಲಸಗಳಾಗಿವೆ ಎಂದರೆ ಅದು ಚುಂಚನಗಿರಿ ಕ್ಷೇತ್ರದ ಕೊಡುಗೆ ಎಂದು ಬಣ್ಣಿಸಿದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್‌ಗೌಡ ಮಾತನಾಡಿ, 70ರ ದಶಕದ ಮಂಡ್ಯ ರಾಜಕಾರಣವನ್ನು ಇಡೀ ದೇಶವೇ ಗಮನನಿಸುತ್ತಿತ್ತು. ಆದರೆ, ಆ ಗತ್ತು, ಗಾಂಭೀರ್ಯ ಇತ್ತೀಚೆಗೆ ಇಲ್ಲವಾಗಿದೆ. ಹತ್ತಾರು ವರ್ಷದಲ್ಲಿ ಆಗಿರುವ ಬೆಳವಣಿಗೆ ಜಿಲ್ಲೆಯ ಘನತೆ ಹೆಚ್ಚಿಸುವ ಕೆಲಸ ಮಾಡಿಲ್ಲ. 1938ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಚಳುವಳಿ ಕಿಚ್ಚನ್ನು ಹಚ್ಚಿದ ಶಿವಪುರ ಧ್ವಜ ಸತ್ಯಾಗ್ರಹ ಸೌಧ ಇಂದು ಪಾಳು ಬಿದ್ದಂತಿರುವುದು ಮನಸ್ಸಿಗೆ ನೋವಾಗುತ್ತದೆ. ಇದಕ್ಕೆ ಕಾಯಕಲ್ಪ ತರುವ ನಿಟ್ಟಿನಲ್ಲಿ ಯಾರೂ ಮುಂದಾಗುತ್ತಿಲ್ಲವೇಕೆ ಎಂದು ತಮ್ಮ ಅಳಲು ತೋಡಿಕೊಂಡರು.

ಜಿಲ್ಲೆಯಲ್ಲಿ ಸುಸಜ್ಜಿತ ಆರ್ಟ್ ಗ್ಯಾಲರಿ ಇಲ್ಲ. ಸ್ವಿಮಿಂಗ್ ಪೂಲ್ ಇಲ್ಲ. ಶಿಕ್ಷಣ, ಆರೋಗ್ಯ, ಕ್ರೀಡೆ, ಸಾಂಸ್ಕೃತಿಕ ಕ್ಷೇತ್ರಗಳ ಅಭಿವೃದ್ಧಿಯತ್ತ ಯಾರೂ ಏಕೆ ಗಮನಿಸುತ್ತಿಲ್ಲ? ಮಂಡ್ಯದ ಕಲಾಮಂದಿರದ ಅವ್ಯವಸ್ಥೆ, ರೈತ ಸಭಾಂಗಣ ಇರುವ ಪರಿಸ್ಥಿತಿ ಸರಿಪಡಿಸುವ ನಿಟ್ಟಿನಲ್ಲಿ ಯಾರು ಏಕೆ ಮುಂದಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ರವಿಕುಮಾರ್ ಗಣಿಗ, ಕದಲೂರು ಉದಯ್, ಪಿ.ಎಂ. ನರೇಂದ್ರಸ್ವಾಮಿ ಅವರನ್ನು ಅಭಿನಂದಿಸಲಾಯಿತು. ವೇದಿಕೆಯಲ್ಲಿ ಆದಿಚುಂಚನಗಿರಿ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ವಿಶ್ವಮಾನವ ಕ್ಷೇತ್ರದ ಪುರುಷೋತ್ತಮಾನಂದನಾಥ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಮಾಜಿ ಶಾಸಕ ಎಂ. ಶ್ರೀನಿವಾಸ್, ಎಂಎಲ್‌ಸಿ ಮಧು ಜಿ.ಮಾದೇಗೌಡ, ಮಾಜಿ ಸದಸ್ಯ ಬಿ.ರಾಮಕೃಷ್ಣ, ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್, ಕರ್ನಾಟಕ ಸಂಘದ ಲೋಕೇಶ್, ಪ್ರೊ.ಬಿ. ಶಂಕರೇಗೌಡ ಮತ್ತಿತರರಿದ್ದರು.



ಭಾರತೀನಗರ ಸಮೀಪದ ಚಿಕ್ಕರಸಿನಕೆರೆಯಲ್ಲಿ ಇತ್ತೀಚೆಗೆ ನಿಧನರಾದ ಶಿವಪ್ರಸಾದ್ ಮನೆಗೆ ಕಾಂಗ್ರೆಸ್ ಮುಖಂಡ ಆಶಯ್ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು. ಈ ವೇಳೆ ತಾಪಂ ಮಾಜಿ ಸದಸ್ಯ ಗಿರೀಶ್, ಭರತೇಶ್, ಪಿಎಸಿಎಸ್ ಸದಸ್ಯ ಆರ್.ಸಿದ್ದಪ್ಪ, ಎಪಿಎಸ್ ಮಾಜಿ ಅಧ್ಯಕ್ಷ ಪ್ರಕಾಶ್, ಗ್ರಾಪಂ ಸದಸ್ಯರಾದ ಪ್ರಭು, ಸಣ್ಣಪ್ಪ, ಚಿಕ್ಕಬೋರಯ್ಯ, ಮುಖಂಡರಾದ ಮಹದೇವು, ವಿಜಯ್ ಇತರರಿದ್ದರು.

ಕೆ.ಆರ್.ಪೇಟೆಯಲ್ಲೂ ಶಕ್ತಿ ಯೋಜನೆ ಉದ್ಘಾಟನೆ



ಕೆ.ಆರ್.ಪೇಟೆ, ಜೂ.11– ಕಾಂಗ್ರೆಸ್ ಪಕ್ಷ ಚುನಾವಣಾ ಪೂರ್ವದಲ್ಲಿ ನೀಡಿದ್ದ ಭರವಸೆಯಂತೆ 5 ಗ್ಯಾರಂಟಿಗಳ ಪೈಕಿ ಸಾರಿಗೆ ಬಸ್‌ಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಬಹುದಾದ ಶಕ್ತಿ ಯೋಜನೆ ಜಾರಿಗೊಳಿಸಿದ್ದು, ಇನ್ನುಳಿದ ಯೋಜನೆಗಳೂ ಶೀಘ್ರ ಜಾರಿಯಾಗಲಿವೆ ಎಂದು ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ತಿಳಿಸಿದರು.

ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಡೆದ ಶಕ್ತಿ ಯೋಜನೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಕಾಂಗ್ರೆಸ್ ಸರ್ಕಾರ ಶಕ್ತಿ ಯೋಜನೆ ಜಾರಿಗೊಳಿಸುವ ಮೂಲಕ ನುಡಿದಂತೆ ನಡೆದಿದೆ ಈ ಯೋಜನೆ ಮೂಲಕ ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರು, ವಿದ್ಯಾರ್ಥಿನಿಯರು ಉಚಿತವಾಗಿ ಪ್ರಯಾಣಿಸಬಹುದಾಗಿದೆ. ಇದನ್ನು ದುರುಪಯೋಗಪಡಿಸಿಕೊಳ್ಳದೇ ಸದುಪಯೋಗಪಡಿಸಿಕೊಳ್ಳಿ ಎಂದರು. ಹಿರಿಯ ಕಾಂಗ್ರೆಸ್ ಮುಖಂಡ, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು ಮಾತನಾಡಿ, ಸರ್ಕಾರ ಮಹಿಳೆಯರ ಉಚಿತ ಪ್ರಯಾಣಕ್ಕಾಗಿ ಶಕ್ತಿ ಯೋಜನೆ ಜಾರಿಗೊಳಿಸಿದೆ. ಮಹಿಳೆಯರು ಅಗತ್ಯವಿದ್ದರೇ ಮಾತ್ರ ಬಸ್‌ಗಳಲ್ಲಿ ಪ್ರಯಾಣಿಸಬೇಕು. ಅನಗತ್ಯವಾಗಿ ಪ್ರಯಾಣಿಸಬಾರದು. ಉಚಿತವಿದೆ ಎಂದು ಗಂಡ, ಮನೆ, ಮಕ್ಕಳನ್ನು ಬಿಟ್ಟು ಅನಗತ್ಯ ಪ್ರಯಾಣ ಮಾಡಿ ಕುಟುಂಬದಲ್ಲಿ ಜಗಳ, ವಿರಸ ಮಾಡಿಕೊಳ್ಳಬಾರದು ಎಂದು ಕಿವಿಮಾತು ಹೇಳಿದರು.

ಜಿಲ್ಲಾ ಸಾರಿಗೆ ಅಧಿಕಾರಿ ಚನ್ನಬಸಪ್ಪ ಮಾತನಾಡಿದರು. ಇದೇ ವೇಳೆ ತಹಸೀಲ್ದಾರ್ ನಿಸರ್ಗ ಪ್ರಿಯ ಕೆಎಸ್‌ಆರ್‌ಟಿಸಿ ಬಸ್‌ಗೆ ಹಸಿರು ನಿಶಾನೆ ತೋರಿಸುವ ಮೂಲಕ ಶಕ್ತಿ ಯೋಜನೆಗೆ ಚಾಲನೆ ನೀಡಿದರು.

ಈ ವೇಳೆ ತಾಪಂ ಇಓ ಬಿ.ಎಸ್. ಸತೀಶ್, ಕೆ.ಆರ್.ಪೇಟೆ ಬಸ್ ಡಿಪೋ ವ್ಯವಸ್ಥಾಪಕ ಮಂಜುನಾಥ್, ಪುರಸಭಾ ಮುಖ್ಯಾಧಿಕಾರಿ ಎಂ.ಬಸವರಾಜು, ಅಗ್ನಿಶಾಮಕ ಠಾಣಾಧಿಕಾರಿ ಶಿವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ್, ಬಿ.ನಾಗೇಂದ್ರ ಕುಮಾರ್, ಕಾಂಗ್ರೆಸ್ ಮುಖಂಡರಾದ ವಿಜಯ್ ರಾಮೇಗೌಡ, ನಾರಾಯಣಗೌಡ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಗೋವಿಂದರಾಜು, ಜಿಪಂ ಮಾಜಿ ಸದಸ್ಯರಾದ ದಯ, ದೇವರಾಜು, ರಾಮದಾಸ್, ಜಾಣೇಗೌಡ, ರಂಗಪ್ಪ, ಶ್ರೀಕಾಂತ್, ದಿವಾಕರ್, ಚೇತನ್, ಮಹೇಶ್, ಮಂಚೇಗೌಡ, ಕುಮಾರ್ ಇತರರಿದ್ದರು.

ಪ್ರವಾಸ ಕಾರ್ಯಕ್ರಮ

ಮಂಡ್ಯ, ಜೂ.11– ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ವೆಂಕಟೇಶ್ ಜೂ.12 ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಅಂದು ಬೆಳಗ್ಗೆ 11 ರಿಂದ 1 ರವರೆಗೆ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋದಿ ಆಂದೋಲನ ದಿನಾಚರಣೆಯಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 1ಕ್ಕೆ ಸರ್ಕಾರಿ ಬಾಲಕರ ಬಾಲಮಂದಿರಕ್ಕೆ ಭೇಟಿ ಮತ್ತು ಪರಿಶೀಲನೆ. ಮಧ್ಯಾಹ್ನ 230ಕ್ಕೆ ಸರ್ಕಾರಿ ಬಾಲಕಿಯರ ಬಾಲಮಂದಿರಕ್ಕೆ ಭೇಟಿ ಮತ್ತು ಪರಿಶೀಲನೆ. ಮಧ್ಯಾಹ್ನ 3 ಗಂಟೆಗೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಹಾಗೂ ಸಿಬ್ಬಂದಿಗಳೊಂದಿಗೆ ಮಕ್ಕಳ ರಕ್ಷಣೆಗೆ ಕೈಗೊಂಡಿರುವ ಕ್ರಮಗಳ ಕುರಿತು ಚರ್ಚಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಸ್ತುತ ಪ್ರಾಮಾಣಿಕ ಪ್ರಕಾಶಕರ ಸಂಖ್ಯೆ ಕಡಿಮೆ

ಡಾ.ಸಿ.ಪಿ. ಕೃಷ್ಣಕುಮಾರ್ ಅಭಿಮತ



ಮೈಸೂರು,ಜೂ.11(ಎಸ್‌ಪಿಎನ್)– ಪ್ರೊ.ಹೆಚ್.ಎಂ.ಶಂಕರ ನಾರಾಯಣರವರ ಪುಣ್ಯಸ್ಮರಣೆ ಪ್ರಯುಕ್ತ 'ಶಂಕರ ಸ್ಮೃತಿ' ಕೃತಿಯನ್ನು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಶನಿವಾರ ಬಿಡುಗಡೆಗೊಳಿಸಿದರು.

ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಜಿಲ್ಲಾ ಕಸಾಪ ಭವನದಲ್ಲಿ ಕನ್ನಡ ಸಾಹಿತ್ಯ ಕಲಾಕೂಟ, ಡಾ.ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ, ಜಿಲ್ಲಾ ಕಸಾಪ ಸಹಯೋಗದೊಂದಿಗೆ ಆಯೋಜಿಸಿದ್ದ ಪ್ರೊ.ಹೆಚ್.ಎಸ್. ಗೋಪಿನಾಥ್–80 ಅಭಿನಂದನೆ ಹಾಗೂ ಶಂಕರ ಕೃತಿ ಬಿಡುಗಡೆ ಸಮಾರಂಭದಲ್ಲಿ ಬಿಡುಗಡೆಗೊಳಿಸಿ ಮಾತನಾಡಿದರು. ನಾನು ಪಿಯುಸಿ ಓದುತ್ತಿದ್ದಾಗಲೇ ಹೆಚ್.ಎಂ.ಶಂಕರ ನಾರಾಯಣ್ ಅವರು ಖ್ಯಾತ ಪ್ರಕಾಶಕರಾಗಿದ್ದರು. ಆಗಲೇ ಅವರು, ನನ್ನನ್ನು ಬರೆಯಲು ಪ್ರೋತ್ಸಾಹಿಸಿದ್ದರು. ಪ್ರಸ್ತುತ ದಿನಮಾನ ಗಳಲ್ಲಿ ಪ್ರಾಮಾಣಿಕ ಪ್ರಕಾಶಕರ ಸಂಖ್ಯೆ ಕಡಿಮೆಯಾಗುತ್ತಿದೆ. ಬದಲಾಗಿ, ಪ್ರಕಾಶಕರು ವಾಣಿಜ್ಯೀಕರಣದತ್ತ ವಾಲುತ್ತಿರುವುದು ಬೇಸರ ಸಂಗತಿ ಎಂದರು.

ಸಾಹಿತಿ, ಪ್ರಕಾಶಕ ಹಾಗೂ ಓದುಗ ಮೂವರು ಒಂದಾದರೆ ಮಾತ್ರ ಸಾಹಿತ್ಯ ಲೋಕದಲ್ಲಿ ಉತ್ತಮ ಪುಸ್ತಕಗಳು ಹೊರ ಬರುತ್ತವೆ. ಇಲ್ಲದಿದ್ದರೆ, ಗುಣಮಟ್ಟಣದ ಪುಸ್ತಕಗಳ ಪ್ರಕಟಣೆ ಅಸಾಧ್ಯ. ಡಾ.ಕೆ. ಕೃಷ್ಣಮೂರ್ತಿ ಅವರಿಗೆ ಶಂಕರನಾರಾಯಣ ಜೀವಿತಾವಧಿಯಲ್ಲಿ ಸಾಕಷ್ಟು ಸ್ನೇಹಮಯಿಯಾಗಿದ್ದರು. ಅವರ ಕುರಿತು ಹೊರಬಂದಿರುವ ಶಂಕರ ಸ್ಮೃತಿ ಖ್ಯಾತ ಸಾಹಿತಿಗಳಾದ ದೇಜಗೌ ಸೇರಿದಂತೆ 18 ಲೇಖಕರ ಉತ್ತಮ ಲೇಖನ ಒಳಗೊಂಡಿದೆ ಎಂದು ತಿಳಿಸಿದರು.

ಶಂಕರ ನಾರಾಯಣ ಅವರು, ಬಹು ದಿನಗಳ ಹಿಂದೆ ನನ್ನೊಂದು ಪುಸ್ತಕವನ್ನು ಪ್ರಕಟಿಸಿದ್ದರು. ಆ ಪುಸ್ತಕ ಜನಮನ್ನಣೆ ಗಳಿಸಿ, ಮರು ಮುದ್ರಣಗೊಂಡಿತು. ಆಗ ಎರಡನೇ ಬಾರಿ ಮುದ್ರಣಗೊಂಡಿದ್ದಕ್ಕೆ ಶಂಕರ ನಾರಾಯಣರು ಸಂಭಾವನೆ ಕೊಟ್ಟ ಪ್ರಸಂಗವನ್ನು ವಿವರಿಸಿದರು. ಇಂತಹ ಉತ್ತಮ ಪ್ರಕಾಶಕರು ಪ್ರಸ್ತುತ ವಿರಳ ಎಂದರು.

ಈ ವೇಳೆ ಪ್ರೊ.ಹೆಚ್.ಎಸ್. ಗೋಪಿ ನಾಥ್ ಅವರನ್ನು ಅಭಿನಂದಿಸಲಾಯಿತು. ವೇದಿಕೆಯಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಲೇಖಕಿ ಡಾ.ಕೆ.ಲೀಲಾಪ್ರಕಾಶ್, ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಆರ್. ಧರ್ಮಸೇನಾ, ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ.ಹೆಚ್.ಎಸ್.ಹರಿಶಂಕರ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಡಾ.ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ಸಂಚಾಲಕ ಸಿ.ಎನ್.ಕೇಶವಪ್ರಕಾಶ್ ಉಪಸ್ಥಿತರಿದ್ದರು.

ಆಸ್ಟ್ರೇಲಿಯಾ ನೂತನ ವಿಶ್ವ ಟೆಸ್ಟ್ ಚಾಂಪಿಯನ್

ಕಳಪೆ ಪ್ರದರ್ಶನಕ್ಕೆ ಬೆಲೆತೆತ್ತ ಭಾರತ ರನ್ನರ್ ಅಪ್



ಲಂಡನ್, ಜೂ.11– ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಸಂಘಟಿತ ಪ್ರದರ್ಶನ ತೋರಿದ ಆಸ್ಟ್ರೇಲಿಯಾ ನೂತನ ವಿಶ್ವ ಟೆಸ್ಟ್ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಆ ಮೂಲಕ ಕಳಪೆ ಪ್ರದರ್ಶನಕ್ಕೆ ಬೆಲೆತೆತ್ತ ಭಾರತ ಸತತ ಎರಡನೇ ಬಾರಿಗೆ ರನ್ನರ್‌ಅಪ್ ಪ್ರಶಸ್ತಿಗೆ ತೃಪ್ತಿ ಪಟ್ಟುಕೊಂಡಿದೆ.

ಇಲ್ಲಿನ ಕೆನ್ನಿಂಗ್‌ಟನ್ ಓವಲ್ ಮೈದಾನದಲ್ಲಿ ನಡೆದ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯದಲ್ಲಿ 2ನೇ ಇನ್ನಿಂಗ್ಸ್‌ನಲ್ಲಿ 444 ರನ್‌ಗಳ ಗುರಿ ಬೆನ್ನಟ್ಟಿದ ಭಾರತ 4ನೇ ದಿನದಂತ್ಯಕ್ಕೆ 3 ವಿಕೆಟ್ ನಷ್ಟಕ್ಕೆ 164 ರನ್ ಗಳಿಸಿತ್ತು. ಅಂತಿಮ ದಿನದಾಟದಲ್ಲಿ ಭಾರತದ ಗೆಲುವಿಗೆ 280 ರನ್‌ಗಳ ಅಗತ್ಯವಿತ್ತು. ಆದರೆ ಭಾರತ 234 ರನ್‌ಗೆ ಆಲೌಟ್ ಆಗುವ ಮೂಲಕ ಹೀನಾಯ ಸೋಲು ಅನುಭವಿಸಿತು. 209 ರನ್‌ಗಳ ಭರ್ಜರಿ ಜಯ ಸಾಧಿಸುವ ಮೂಲಕ ಆಸೀಸ್ ಮೊದಲ ಬಾರಿಗೆ ಟೆಸ್ಟ್ ಚಾಂಪಿಯನ್‌ಶಿಪ್ ಜಯಿಸಿತು.

5ನೇ ದಿನದಾಟ ಆರಂಭಿಸಿದ ವಿರಾಟ್ ಕೊಹ್ಲಿ ನಿನ್ನೆಯ ಮೊತ್ತಕ್ಕೆ 5 ರನ್ ಸೇರಿಸುವ ಮೂಲಕ 49ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ನಂತರ ಬಂದ ರವೀಂದ್ರ ಜಡೇಜಾ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಆದರೆ ಮತ್ತೊಂದೆಡೆ ಎಚ್ಚರಿಕೆಯಿಂದ ಆಡುತ್ತಿದ್ದ ಅಜಿಂಕ್ಯಾ ರಹಾನೆ 46 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ಶ್ರೀಕರ್ ಭರತ್ 23, ಮೊಹಮ್ಮದ್ ಶಮಿ 13 ರನ್ ಗಳಿಸಿತ್ತು. ಅಂತಿಮವಾಗಿ ಭಾರತ ಕೊನೆ ದಿನ 22.3 ಓವರ್‌ಗಳಲ್ಲಿ 70 ರನ್‌ಗಳಿಗೆ ಉಳಿದ 7 ವಿಕೆಟ್‌ಗಳನ್ನು ಕಳೆದುಕೊಂಡು ಸೋಲು ಅನುಭವಿಸಿತು.

ಆಸೀಸ್ ಪರ ನಥಾನ್ ಲಿಯಾನ್ 4, ಸ್ಕಾಟ್ ಬೋಲ್ಯಾಂಡ್ 3, ಮಿಚೆಲ್ ಸ್ಟಾರ್ಕ್ 2 ಹಾಗೂ ಪ್ಯಾಟ್ ಕಮ್ಮಿನ್ಸ್ 1 ವಿಕೆಟ್ ಪಡೆದು ಮಿಂಚಿದರು. ಪಂದ್ಯದಲ್ಲಿ ಭರ್ಜರಿ ಶತಕ ಸಿಡಿಸಿ ತಂಡದ ಗೆಲುವಿಗೆ ಕಾರಣರಾದ ಟ್ರಾವಿಸ್ ಹೆಡ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಸಂಕ್ಷಿಪ್ತ ಸ್ಕೋರ್

ಆಸ್ಟ್ರೇಲಿಯಾ ಮೊದಲ ಇನ್ನಿಂಗ್ಸ್: 469/10
ಭಾರತ ಮೊದಲ ಇನ್ನಿಂಗ್ಸ್: 296/10
ಆಸ್ಟ್ರೇಲಿಯಾ ಎರಡನೇ ಇನ್ನಿಂಗ್ಸ್: 270/8ಡಿಕ್ಲೇರ್
ಭಾರತ ಎರಡನೇ ಇನ್ನಿಂಗ್ಸ್: 234/10

ಮಡಿಕೇರಿಗೆ ಹೋಗುವುದಾಗಿ ಹೇಳಿ ಹೋದ ಯುವಕ ನಾಪತ್ತೆ

ಮೈಸೂರು, ಜೂ.11– ಕೆಲಸಕ್ಕೆ ಮಡಿಕೇರಿಗೆ ಹೋಗುತ್ತೇನೆಂದು ಹೇಳಿಹೋದ ಯುವಕ ನಾಪತ್ತೆಯಾಗಿರುವ ಘಟನೆ ಮಂಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಇಲ್ಲಿನ ನಿವಾಸಿ ಎ.ನಾರಾಯಣಸ್ವಾಮಿ ಎಂಬುವರ ಪುತ್ರ ಎನ್.ರಾಕೇಶ್(25) ನಾಪತ್ತೆಯಾದ ಯುವಕ. ಕಳೆದ 4 ತಿಂಗಳಿಂದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಜೂ.5ರಂದು ಮಧ್ಯಾಹ್ನ 3 ಗಂಟೆಗೆ ಕೆಲಸದ ಮೇಲೆ ಮಡಿಕೇರಿಗೆ ಹೋಗುತ್ತಿದ್ದೇನೆ ಎಂದು ಹೇಳಿ ಹೋದವನು ಇನ್ನೂ ಮನೆಗೆ ವಾಪಸ್ ಬಂದಿಲ್ಲ ಎಂದು ರಾಕೇಶ್ ತಂದೆ ನಾರಾಯಣ ಸ್ವಾಮಿ ಮಂಡಿ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ದೂ.ಸಂ.0821–2418339, 2418313, 2418513, ಮೊ.ನಂ.9845862184 ಸಂಪರ್ಕಿಸಬಹುದು.

ಮೈಸೂರು ಮಿತ್ರ ಸೋಮವಾರ 12 ಜೂನ್ 2023

ಕೊಡಗಲ್ಲೂ ಮಹಿಳೆಯರ ಉಚಿತ ಬಸ್ ಪ್ರಯಾಣ ಶಕ್ತಿಗೆ ಚಾಲನೆ

ಆ.15ರೊಳಗೆ ಕಾಂಗ್ರೆಸ್ ಪಕ್ಷದ ಎಲ್ಲಾ ಗ್ಯಾರಂಟಿಗಳು ಅನುಷ್ಠಾನಕ್ಕೆ: ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು





ಮಡಿಕೇರಿ, ಜೂ.11– ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯ ಒದಗಿಸುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ 'ಶಕ್ತಿ' ಯೋಜನೆಗೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಣ್ಣ ನೀರಾವರಿ ಸಚಿವ ಎನ್.ಎಸ್. ಭೋಸರಾಜು ಅವರು ನಗರದ ಸರ್ಕಾರಿ ಬಸ್ ನಿಲ್ದಾಣದಲ್ಲಿ ವಿಧ್ಯುಕ್ತ ಚಾಲನೆ ನೀಡಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಪುತ್ತೂರು ವಿಭಾಗದ ಮಡಿಕೇರಿ ಘಟಕಕ್ಕೆ ಒಳಪಟ್ಟ ಮಡಿಕೇರಿ ಕೆಎಸ್‌ಆರ್‌ಟಿಸಿ ಬಸ್ಸು ನಿಲ್ದಾಣದಲ್ಲಿ ಆಯೋಜಿತ ಕಾರ್ಯಕ್ರಮದಲ್ಲಿ ಸಚಿವರು ಜ್ಯೋತಿ ಬೆಳಗಿ, ಮಹಿಳಾ ಪ್ರಯಾಣಿಕರಿಗೆ ಗುಲಾಬಿ ನೀಡಿ, ಉಚಿತ ಬಸ್ ಟಿಕೆಟ್ ವಿತರಿಸಿ ಶಕ್ತಿ ಯೋಜನೆಗೆ ಚಾಲನೆ ನೀಡಿದರು.

ಬಳಿಕ ಶಾಸಕ ಮಂಥರ್ ಗೌಡ, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ವಿಧಾನ ಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ ಸಹಿತ ಮಹಿಳಾ ಪ್ರಯಾಣಿಕರೊಂದಿಗೆ ಬಸ್‌ನಲ್ಲಿ ಸಚಿವರು ನಗರ ಪ್ರದಕ್ಷಿಣೆ ಮಾಡಿ ಗಮನ ಸೆಳೆದರು. ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಸಚಿವರು, ರಾಜ್ಯ ವಿಧಾನ ಸಭಾ ಚುನಾವಣೆಯ ಸಂದರ್ಭ ಪ್ರಣಾಳಿಕೆಯಲ್ಲಿ ನೀಡಿದ್ದ 5 'ಗ್ಯಾರಂಟಿ'ಗಳನ್ನು ಪ್ರಸಕ್ತ ಸಾಲಿನ ಆಗಸ್ಟ್ 15ರೊಳಗಾಗಿ ಕಾರ್ಯರೂಪಕ್ಕೆ ತರುವ ಮೂಲಕ ಬಡ ಜನತೆಗೆ ಅನುಕೂಲತೆಯನ್ನು ಕಲ್ಪಿಸಿಕೊಡಲು ಸರ್ಕಾರ ಕಟಿಬದ್ಧವಾಗಿದೆ. ಗ್ಯಾರಂಟಿಗಳಲ್ಲಿ ಮೊದಲನೆಯದಾದ ಮಹಿಳೆಯರಿಗೆ ಉಚಿತ ಪ್ರಯಾಣದ ಶಕ್ತಿ ಯೋಜನೆಗೆ ಇಂದು ರಾಜ್ಯಾದ್ಯಂತ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

ದಾರಿ ತಪ್ಪಿಸುವವರ ವಿರುದ್ಧ ಕ್ರಮ: ಶಕ್ತಿ ಯೋಜನೆಯಡಿ ಜಿಲ್ಲೆಯಲ್ಲಿ ಎಸಿ, ಸ್ಲೀಪರ್ ಕೋಚ್ ಸೇರಿದಂತೆ ಕೆಲ ಬಸ್‌ಗಳನ್ನು ಹೊರತುಪಡಿಸಿದಂತೆ ಉಳಿದ ಎಲ್ಲ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಒದಗಿಸಲಾಗಿದೆ. ಯೋಜನೆಯ ಸೌಲಭ್ಯ ಪಡೆಯಲು ಮಹಿಳೆಯರಿಗೆ ಸ್ಮಾರ್ಟ್ ಕಾರ್ಡ್ ವಿತರಣೆಗೆ ಒಂದಷ್ಟು ಕಾಲಾವಕಾಶದ ಅಗತ್ಯವಿದೆ. ಅದರ ಒಳಗಾಗಿ ಮಹಿಳೆಯರು ಆಧಾರ್, ಮತದಾರರ ಗುರುತಿನ ಚೀಟಿ ಮೊದಲಾದವುಗಳನ್ನು ಬಳಸಿ ಪ್ರಯಾಣಿಸಲು ಅವಕಾಶವಿದೆ ಎಂದರು.

ಈ ಹಂತದಲ್ಲಿ ಮಹಿಳಾ ಪ್ರಯಾಣಿಕರಿಗೆ ಗುರುತಿನ ಚೀಟಿಗಳಿಲ್ಲ ಮೊದಲಾದ ಕಾರಣ ನೀಡಿ ಪ್ರಯಾಣಕ್ಕೆ ಅವಕಾಶ ಒದಗಿಸದೆ, ಅವರ ದಾರಿ ತಪ್ಪಿಸುವ ಪ್ರಯತ್ನ ಮಾಡಿದರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಸರ್ಕಾರದ ಆದೇಶವನ್ನು ಪರಿಪೂರ್ಣವಾಗಿ ಜಾರಿಮಾಡಬೇಕೆಂದು ಸ್ಪಷ್ಟ ಸೂಚನೆ ನೀಡಿದರು.

ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದು ರೂಪಿಸುವ ಜನಪರವಾದ ಯೋಜನೆಗಳು ಯಶಸ್ವಿಯಾಗಲು ಜನಸಾಮಾನ್ಯರ ಮತ್ತು ಅಧಿಕಾರಿಗಳ ಸಹಕಾರ ಅತ್ಯಗತ್ಯ. ಸರ್ಕಾರದ ಉದ್ದೇಶಿತ ಯೋಜನೆಗಳ ಜಾರಿಗೆ ಸಂಬಂಧಿಸಿದಂತೆ ಯಾವುದೇ ಅಧಿಕಾರಿಗಳ ವಿರುದ್ಧ ದೂರುಗಳು ಬಂದಲ್ಲಿ, ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

ಕೊಡಗಿನಲ್ಲಿ 94 ಬಸ್ ಸಂಚಾರ: ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಅಧ್ಯಕ್ಷತೆ ವಹಿಸಿ ಮಾತನಾಡಿ, ಕೊಡಗಿನಲ್ಲಿ ಕೆಎಸ್‌ಆರ್‌ಟಿಸಿಯ 94 ಬಸ್‌ಗಳು ಸಂಚರಿಸುತ್ತಿವೆ. ಇದರಲ್ಲಿ ಸುಮಾರು 40 ಬಸ್‌ಗಳು ಜಿಲ್ಲಾ ವ್ಯಾಪ್ತಿಯ ಒಳಗೆ ಸಂಚರಿಸುತ್ತಿವೆ. ಇವುಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯ ಕಲ್ಪಿಸಲಾಗಿದೆ. ಈ ಉಚಿತ ಪ್ರಯಾಣದ ಹಂತದಲ್ಲಿ ಕೆಎಸ್‌ಆರ್‌ಟಿಸಿ ಸಿಬ್ಬಂದಿಗಳು ಮಹಿಳಾ ಪ್ರಯಾಣಿಕರೊಂದಿಗೆ ಗೌರವದಿಂದ ನಡೆದುಕೊಳ್ಳಬೇಕೆಂದು ಸ್ಪಷ್ಟ ಸೂಚನೆ ನೀಡಿದರು.

ಹೆಚ್ಚಿನ ಬಸ್ ರೂಟ್ ಅವಶ್ಯ: ಕೊಡಗಿನಲ್ಲಿ ಹೆಚ್ಚಿನ ಬಸ್ ರೂಟ್ ಮತ್ತು ಬಸ್‌ಗಳು ಹಾಗೂ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳ ಅಗತ್ಯವಿದ್ದು, ಸಚಿವರು ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಶಾಸಕ ಡಾ. ಮಂಥರ್ ಗೌಡ ಮನವಿ ಮಾಡಿದರು.

ಮಹಿಳೆಯರಿಗೆ ಶೂನ್ಯ ದರ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪುತ್ತೂರು ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಜಿ. ಜಯಕರ ಶೆಟ್ಟಿ ಮಾತನಾಡಿ, ಶಕ್ತಿ ಯೋಜನೆಯಡಿ ಸರ್ಕಾರಿ ಬಸ್‌ನಲ್ಲಿ ಸಂಚರಿಸುವ ಮಹಿಳೆಯರಿಗೆ ಶೂನ್ಯ ದರದ ಟಿಕೆಟ್ ನೀಡಲಾಗುತ್ತದೆ ಎಂದು ತಿಳಿಸಿದರು. ಈ ಯೋಜನೆಯಡಿ ಅಂತರ್ ರಾಜ್ಯಗಳಿಗೆ ಉಚಿತವಾಗಿ ಪ್ರಯಾಣಿಸಲು ಅವಕಾಶವಿಲ್ಲ. ಯೋಜನೆಯ ಸೌಲಭ್ಯ ಪಡೆಯಲು ಇಚ್ಛಿಸುವವರು ಸೇವಾ ಸಿಂಧು ಮೂಲಕ ನೋಂದಾಯಿಸಿಕೊಂಡು ಗುರುತಿನ ಚೀಟಿ ಪಡೆದುಕೊಳ್ಳಬೇಕಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಕಾರ್ಯಕ್ರಮದಲ್ಲಿ ಮಡಿಕೇರಿ ನಗರಸಭಾ ಅಧ್ಯಕ್ಷೆ ಎನ್.ಪಿ. ಅನಿತಾ, ಜಿಲ್ಲಾಧಿಕಾರಿ ಡಾ. ಬಿ.ಸಿ.ಸತೀಶ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್, ಡಿಪೋ ವ್ಯವಸ್ಥಾಪಕಿ ಗೀತಾ, ವಿಧಾನ ಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜಾ ಉತ್ತಪ್ಪ, ಜಿ.ಪಂ. ಮಾಜಿ ಸದಸ್ಯೆ ಕೆ.ಪಿ. ಚಂದ್ರಕಲಾ, ಕಾಂಗ್ರೆಸ್ ಮುಖಂಡ ಹೈಕೋರ್ಟ್ ವಕೀಲ ಹೆಚ್.ಎಸ್. ಚಂದ್ರಮೌಳಿ ಸೇರಿದಂತೆ ಪಕ್ಷ ಪ್ರಮುಖರು ಉಪಸ್ಥಿತರಿದ್ದರು.

ಜನಪ್ರತಿನಿಧಿಗಳು ಪ್ರಯಾಣ ಮಾಡಿ

ಸರ್ಕಾರದ ಜನೋಪಯೋಗಿ 'ಶಕ್ತಿ' ಯೋಜನೆ ಪರಿಣಾಮಕಾರಿಯಾಗಿ ಜಾರಿಯಾಗಬೇಕಾದ ಹಿನ್ನೆಲೆ, ಜನಪ್ರತಿನಿಧಿಗಳು ಬಸ್‌ಗಳಲ್ಲಿ ಸಂಚರಿಸಿ ಸಮಸ್ಯೆಗಳನ್ನು ಅರಿತು ನಮಗೆ ತಿಳಿಸಬೇಕೆಂದು ಉಸ್ತುವಾರಿ ಸಚಿವ ಭೋಸರಾಜು ಅವರು ತಿಳಿಸಿದರು. ಸರ್ಕಾರ ಕೋಟ್ಯಂತರ ವೆಚ್ಚದ ಯೋಜನೆಯನ್ನು ಜಾರಿ ಮಾಡುತ್ತಿದೆ. ಈ ಹಿನ್ನೆಲೆ ಜನಪ್ರತಿನಿಧಿಗಳು ಅನಿರೀಕ್ಷಿತವಾಗಿ ಬಸ್ ಪ್ರಯಾಣ ಮಾಡುವ ಮೂಲಕ ಮಹಿಳೆಯರ ಉಚಿತ ಪ್ರಯಾಣದಲ್ಲಿ ಇರುವ ಸಮಸ್ಯೆಗಳನ್ನು ಅರಿತು, ಬಗೆಹರಿಸುವ ನಿಟ್ಟಿನ ಪ್ರಯತ್ನಗಳಿಗೆ ಕೈ ಜೋಡಿಸಬೇಕೆಂದರು. ಶೀಘ್ರದಲ್ಲೇ ತಾನು ಸಹ ಅನಿರೀಕ್ಷಿತವಾಗಿ ಬಸ್ ಪ್ರಯಾಣ ಮಾಡುವುದಾಗಿದ್ದೇನೆಂದು ಸಚಿವ ಭೋಸರಾಜು ಅವರು ಸ್ಪಷ್ಟಪಡಿಸಿದರು.

ಮಗನ ಸಾವಿನ ಬೆನ್ನ ಹಿಂದೆಯೇ ತಾಯಿಯೂ ಸಾವು

ರಸ್ತೆ ದುರಂತದಲ್ಲಿ ಮಗ ಬಲಿ, ಚಿಕಿತ್ಸೆ ಫಲಿಸದೇ ತಾಯಿ ನಿಧನ



ನಾಪೋಕ್ಲು, ಜೂ.11– ತನ್ನನ್ನು ನೋಡಲು ಬರುತ್ತಿದ್ದ ಮಗ ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ ಬೆನ್ನ ಹಿಂದೆಯೇ ತಾಯಿಯೂ ಚಿಕಿತ್ಸೆ ಫಲಕಾರಿಯಾಗದೆ ಅಸುನೀಗಿರುವ ಘಟನೆ ಭಾನುವಾರ ಸಂಭವಿಸಿದೆ.

ಸ್ಥಳೀಯ ಇಂದಿರಾನಗರದ ನಿವಾಸಿ ದಿವಂಗತ ರಾಜು ಧರ್ಮಪತ್ನಿ ಕಮಲ (50) ನಿಧನರಾದವರಾಗಿದ್ದಾರೆ. ಕಮಲ ಅವರು ಅನಾರೋಗ್ಯದಿಂದ ಬಳಲುತ್ತಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೆ, ತಾಯಿಯನ್ನು ನೋಡಲು ಹೋಗುತ್ತಿದ್ದ ಪುತ್ರ ಅಪ್ಪಾಜಿ (19) ಮೂರ್ನಾಡು ಮುಖ್ಯರಸ್ತೆಯ ಹೊದವಾಡ ಗ್ರಾಮದ ತಿರುವಿನಲ್ಲಿ ಶುಕ್ರವಾರ ದ್ವಿಚಕ್ರ ವಾಹನ ಮತ್ತು ಕಾರಿನ ನಡುವೆ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟಿದ್ದರು.

ಕಮಲ ಪುತ್ರ ಸೇರಿದಂತೆ ಬಂಧು–ಬಳಗವನ್ನು ಅಗಲಿದ್ದಾರೆ. ಮಡಿಕೇರಿಯ ಹಿಂದೂ ರುದ್ರಭೂಮಿಯಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಳೆ ಜಿಲ್ಲಾ ಮಟ್ಟದ ಕಾರ್ಯಾಗಾರ

ಮಡಿಕೇರಿ, ಜೂ.11– ಕೊಡಗು ಕೇಂದ್ರೀಯ ವಿದ್ಯಾಲಯ ವತಿಯಿಂದ ವರ್ಚುವಲ್ ಮೋಡ್‌ನಲ್ಲಿ 'ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರವನ್ನು ಖಚಿತಪಡಿಸಿಕೊಳ್ಳುವ ಸಂಬಂಧ' ಜಿಲ್ಲಾ ಮಟ್ಟದ ಕಾರ್ಯಾಗಾರವು ಜೂ.13 ರಂದು ಮಧ್ಯಾಹ್ನ 3 ಗಂಟೆಗೆ ಕೇಂದ್ರೀಯ ವಿದ್ಯಾಲಯದಲ್ಲಿ ನಡೆಯಲಿದೆ ಎಂದು ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲರು ತಿಳಿಸಿದ್ದಾರೆ.

ವಿ.ಪೇಟೆ ಅಖಿಲ ಕೊಡವ ಸಮಾಜದಿಂದ ಶಾಸಕ ಪೊನ್ನಣ್ಣ, ಸಾಧಕರಿಗೆ ಸನ್ಮಾನ



ವಿರಾಜಪೇಟೆ, ಜೂ.11– ವಿರಾಜಪೇಟೆ ಅಖಿಲ ಕೊಡವ ಸಮಾಜದ ವತಿಯಿಂದ ಸಮಾಜದ ಸಭಾಂಗಣದಲ್ಲಿ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಮತ್ತು ಸಾಧಕರನ್ನು ಅಭಿನಂದಿಸಲಾಯಿತು.

ಸನ್ಮಾನ ಸ್ವೀಕರಿಸಿದ ಶಾಸಕರು ಮಾತನಾಡಿ, ಕೊಡವ ಸಮಾಜಗಳು ಬರಿ ಮದುವೆ ಸಮಾರಂಭಗಳಿಗೆ ಮಾತ್ರ ಸೀಮಿತವಾಗಿದ್ದರೆ ಸಾಲದು. ಕೊಡವ ಜನಾಂಗದ ಅಭಿವೃದ್ಧಿಯಾಗಬೇಕಿದೆ. ಕೆಲವೊಂದು ಕಡೆ ಕನಿಷ್ಠ ಬದುಕು ನಡೆಸುತ್ತಿರುವುದನ್ನು ಕಂಡಿದ್ದೇನೆ. ಅನೇಕ ಬಡ ಜನರಿದ್ದಾರೆ. ಅವರ ಸಮಸ್ಯೆಗಳ ಬಗ್ಗೆ ಅರಿತು ಕೆಲಸ ಮಾಡಬೇಕಾಗಿದೆ ಎಂದರು.

ಕೊಡವ ಕೋವಿ ಹಕ್ಕಿನ ವಿಚಾರದಲ್ಲಿ ಸಮರ್ಥವಾಗಿ ವಾದ ಮಂಡಿಸಿದ್ದು, ಆ ಹಕ್ಕು ಹಿಂದಿನ ಕಾಲದಿಂದಲೂ ಜಾರಿಯಲ್ಲಿದೆ. ಈ ವಿಚಾರ ಕೊಡವರ ಹಕ್ಕು ಎಂದು ವಾದ ಮಂಡಿಸಿದ್ದೇನೆ. ಸಾರ್ವಜನಿಕ ಜೀವನದಲ್ಲಿ ಪಾರದರ್ಶಕತೆ ಇರಬೇಕು. ನಾನು ಮೇ 13 ರಿಂದ ಜನರಿಗೆ ಸ್ಪಂದಿಸಿ ಕೆಲಸ ಮಾಡುತ್ತಿದ್ದೇನೆ. ಅಧಿಕಾರಿಗಳ ಸಭೆ ಕರೆದು ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿ ಆಡಳಿತ ವ್ಯವಸ್ಥೆಗೆ ಚುರುಕು ಮುಟ್ಟಿಸಿರುವುದಾಗಿ ತಿಳಿಸಿದರು.

ಕ್ಷೇತ್ರದ ಅಧಿಕಾರಿ ವರ್ಗದಲ್ಲಿ ಅವರದೆ ಅದ ವ್ಯವಸ್ಥೆ ಇದೆ. ಅದನ್ನು ತೆಗೆದು ಹಾಕುವುದು ಕಠಿಣವಾದರೂ ಭ್ರಷ್ಟಾಚಾರ ಮುಕ್ತ ಮಾಡಿ ಸಾರ್ವಜನಿಕರು ಕಚೇರಿಗೆ ಹೋದಾಗ ಅವರಿಗೆ ಸ್ಪಂದಿಸಿ ಗೌರವ ನೀಡುವ ಕೆಲಸ ಆಗಬೇಕು. ಸ್ವಾಭಿಮಾನಕ್ಕೆ ಧಕ್ಕೆ ಬಾರದಂತೆ ಜಾತಿ ಧರ್ಮ ಭೇದವಿಲ್ಲದೆ ನನ್ನ ಜವಾಬ್ದಾರಿ ನಿಭಾಯಿಸುವುದಾಗಿ ಹೇಳಿದರಲ್ಲದೆ, ಅಖಿಲ ಕೊಡವ ಸಮಾಜ ಆಚಾರ ವಿಚಾರ ಸಂಸ್ಕೃತಿ ಭಾಷೆಯನ್ನು ಉಳಿಸಿ ಬೆಳೆಸಿ ಮುಂದಿನ ಪೀಳಿಗೆಗೆ ಪರಿಚಯಿಸುವಂತ ಕೆಲಸ ಮಾಡುವಂತಾಗಲಿ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ಅಖಿಲ ಕೊಡವ ಸಮಾಜ ಹಿಂದಿನಿಂದಲು ಕೊಡವರ ಕೊಡಗಿನ ನೆಲಕ್ಕೆ ಧಕ್ಕೆಯಾದಾಗ ಅದರ ಹಿತ ಕಾಯುವ ಕೆಲಸ ಮಾಡುತ ಬರುತ್ತಿದ್ದು ಈಗ ಅನೇಕ ಕೊಡವ ಸಮಾಜ ಸಂಘ ಸಂಸ್ಥೆಗಳು ನಮ್ಮ ಜೊತೆಗೂಡಿರುವುದು ಸಂತಸ ತಂದಿದೆ ಎಂದರು.

ಕೊಡಗಿಗೆ ಸಚಿವ ಸ್ಥಾನ ಸಿಗುತ್ತಿಲ್ಲ. ಕ್ಷೇತ್ರ ವಿಂಗಡಣೆ ಹೆಸರಿನಲ್ಲಿ ಜಿಲ್ಲೆಯನ್ನು ಕಡೆಗಣಿಸಲಾಗಿದೆ. ನಮಗೆ ಬುಡಕಟ್ಟು ಸ್ಥಾನಮಾನ ಸಿಗುತ್ತಿಲ್ಲ. ಕಂದಾಯ ಇಲಾಖೆಯಲ್ಲಿ ಜಮ್ಮ ಸೇರಿದಂತೆ ವಿವಿಧ ಗಂಭೀರ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ ಎಂದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಐಮುಡಿಯಂಡ ರಾಣಿಮಾಚಯ್ಯ, ಹಿರಿಯ ಅಥ್ಲೇಟ್‌ಗಳಾದ ಪಾಲೇಕಂಡ ಸಹೋದರರಾದ ಬೋಪಯ್ಯ ಬೆಳ್ಯಪ್ಪ ಮತ್ತು ಮಾರಮಂಡ ಮಾಚಮ್ಮ ಅವರುಗಳನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಅಖಿಲ ಕೊಡವ ಸಮಾಜದ ಉಪಾಧ್ಯಕ್ಷ ಅಜ್ಜಿಕುಟ್ಟಿರ ಸುಬ್ರಮಣಿ, ಕಾರ್ಯದರ್ಶಿ ಅಮ್ಮಣಿಚಂಡ ನಂಜಪ್ಪ, ಸಹ ಕಾರ್ಯದರ್ಶಿ ನಂದೇಟಿರ ರಾಜ ಖಜಾಂಚಿ ಮಂಡೇಪಂಡ ಸುಗುಣ, ಯೂತ್ ವಿಂಗ್ ಅಧ್ಯಕ್ಷ ಚಮ್ಮಟ್ಟಿರ ಪ್ರವೀಣ್, ಪೊಮ್ಮಕ್ಕಡ ಪರಿಷತ್ ಉಪಾಧ್ಯಕ್ಷೆ ಮಳವಂಡ ಪೂವಿ ಮುತ್ತಮ್ಮ ಮತ್ತು ಕಾರ್ಯದರ್ಶಿ ಮಂಡೇಪಂಡ ಗೀತಾಮಂದಣ್ಣ ಹಾಗೂ ದೇಶ ತಕ್ಕರಾದ ಬೊಳ್ಳೆರ ಸುಮನ್ ಉಪಸ್ಥಿತರಿದ್ದರು.

ಚಾ.ನಗರದಲ್ಲಿ 'ಶಕ್ತಿ' ಯೋಜನೆಗೆ ಸಚಿವ ವೆಂಕಟೇಶ್ ಚಾಲನೆ

ಕೊಟ್ಟ ಮಾತಿನಂತೆ 5 ಯೋಜನೆಗಳ ಅನುಷ್ಠಾನಕ್ಕೆ ಕ್ರಮ



ಚಾಮರಾಜನಗರ, ಜೂ.11– ನಗರದ ಸಾರಿಗೆ ಬಸ್ ನಿಲ್ದಾಣದಲ್ಲಿ ವಿಶೇಷವಾಗಿ ಸಿಂಗರಿಸಿದ್ದ ಮೈಸೂರು ಮತ್ತು ಗುಂಡ್ಲುಪೇಟೆ ಮಾರ್ಗದ ಬಸ್‌ಗಳಿಗೆ ಹತ್ತಿದ್ದ ಮಹಿಳೆಯರಿಗೆ ಹೂ ನೀಡಿ, ಉಚಿತ ಟಿಕೆಟ್ ನೀಡುವ ಮೂಲಕ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಶಕ್ತಿ ಯೋಜನೆಗೆ ಪಶು ಸಂಗೋಪನೆ, ರೇಷ್ಮೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಚಾಲನೆ ನೀಡಿದರು.

ಇದಕ್ಕೂ ಮುನ್ನಾ ಬಸ್ ನಿಲ್ದಾಣದಲ್ಲಿ ಜಿಲ್ಲಾಡಳಿತ, ಚಾಮರಾಜನಗರ ಸಾರಿಗೆ ವಿಭಾಗದಿಂದ ಆಯೋಜಿಸಿದ್ದ ಶಕ್ತಿ ಯೋಜನೆ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಚುನಾವಣೆ ಸಂದರ್ಭ ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ನಮ್ಮ ಪಕ್ಷ 5 ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದಾಗಿ ವಾಗ್ದಾನ ನೀಡಿತ್ತು ಕೊಟ್ಟ ಮಾತಿನಂತೆ 5 ಯೋಜನೆಗಳ ಅನುಷ್ಠಾನಕ್ಕೆ ಕ್ರಮ ವಹಿಸಿದ್ದೇವೆ. ಅದರಂತೆ ಮಹಿಳೆಯರು ಸರ್ಕಾರಿ ಬಸ್‌ಗಳಲ್ಲಿ ಉಚಿತವಾಗಿ ರಾಜ್ಯದೆಲ್ಲೆಡೆ ಸಂಚರಿಸಲು ಅವಕಾಶ ಮಾಡಿಕೊಡುವ ಶಕ್ತಿ ಯೋಜನೆಯನ್ನು ಮೊದಲನೆಯದಾಗಿ ಇಂದು ಜಾರಿಗೆ ತರುತ್ತಿದ್ದೇವೆ ಎಂದರು.

ಮಹಿಳೆಯರಿಗೆ ರಾಜ್ಯಾದ್ಯಂತ ಸಾಮಾನ್ಯ, ವೇಗದೂತ, ನಗರ ಸಾರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. ಮುಂದಿನ ದಿನಗಳಲ್ಲಿ ಪ್ರಯಾಣಕ್ಕೆ ಸ್ಮಾರ್ಟ್ ಕಾರ್ಡ್ ನೀಡಲಿದ್ದು, ಇದಕ್ಕಾಗಿ ಅರ್ಜಿ ಹಾಕಬಹುದು. ಅಲ್ಲಿವರೆಗೂ ಆಧಾರ್, ಮತದಾರರ ಗುರುತಿನ ಚೀಟಿ, ಕೇಂದ್ರ ಹಾಗೂ ರಾಜ್ಯ ಸರ್ಕಾರ ನೀಡಿರುವ ಯಾವುದೇ ಭಾವಚಿತ್ರವಿರುವ ಗುರುತಿನ ಚೀಟಿ ತೋರಿಸಿ ಬಸ್ಸಿನಲ್ಲಿ ಉಚಿತವಾಗಿ ಓಡಾಡಬಹುದು ಎಂದರು.

ಜಿಲ್ಲೆಯ ಹಲವು ಸಮಸ್ಯೆಗಳ ಬಗ್ಗೆ ತಿಳಿದಿದೆ. ಸ್ಥಳೀಯ ಶಾಸಕರು, ಜನಪ್ರತಿನಿಧಿಗಳು, ಎಲ್ಲಾ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜಿಲ್ಲೆ ಅಭಿವೃದ್ಧಿಗೆ ಮುಂದಾಗುತ್ತೇನೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ ಕೊಟ್ಟ ಮಾತಿನಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಡೆದುಕೊಂಡಿದ್ದಾರೆ. 5 ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಿದ್ದು, ಅದನ್ನು ಅನುಷ್ಠಾನಕ್ಕೆ ತರುತ್ತಿದ್ದೇವೆ. ಮಹಿಳೆಯರು, ಜನ ಸಾಮಾನ್ಯರ ಕಷ್ಟ ಅರಿತಿದ್ದು, ಅವರನ್ನು ಮೇಲೆ ತರುವ ಉದ್ದೇಶ ಸರ್ಕಾರದ್ದಾಗಿದೆ ಎಂದರು.

ಜಿಲ್ಲೆಗೆ ಹೆಚ್ಚಿನ ಮೂಲ ಸೌಕರ್ಯಗಳ ಅಗತ್ಯವಿದೆ. 276 ಕೋಟಿ ರೂ. ವೆಚ್ಚದ 3ನೇ ಹಂತದ ಕುಡಿಯುವ ನೀರಿನ ಯೋಜನೆ ಸಾಕಾರಗೊಳ್ಳಬೇಕಿದೆ. ಕೈಗಾರಿಕಾ ಪ್ರದೇಶ ಸೇರಿದಂತೆ ಚಾಮರಾಜನಗರ ಪಟ್ಟಣಕ್ಕೆ ನೀರಿನ ಸೌಲಭ್ಯ ಒದಗಿಸುವುದು ಮುಖ್ಯವಾಗಿದೆ ಎಂದು ಸಚಿವರ ಗಮನಕ್ಕೆ ತಂದರು.

ಮಹಿಳೆಯರ ಸಂಭ್ರಮ: ಮಧ್ಯಾಹ್ನ 1.30ರ ವೇಳೆಗೆ ಚಾಮರಾಜನಗರದಿಂದ ಮೈಸೂರು ಹಾಗೂ ಗುಂಡ್ಲುಪೇಟೆಗೆ ಸಾರಿಗೆ ಬಸ್‌ನಲ್ಲಿ ಹೊರಟ ಮಹಿಳಾ ಪ್ರಯಾಣಿಕರು ಉಚಿತ ಪ್ರಯಾಣದ ಟಿಕೆಟ್‌ಗಳನ್ನು ಹಿಡಿದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕಾಂಗ್ರೆಸ್ ಪರ ಘೋಷಣೆ ಕೂಗಿ ಸಂಭ್ರಮಿಸಿದರು.

ಮಾಜಿ ಸಂಸದ ಎಂ.ಶಿವಣ್ಣ ಮಾತನಾಡಿದರು. ಇದೇ ವೇಳೆ ಸಚಿವ ವೆಂಕಟೇಶ್ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾಧಿಕಾರಿ ಡಿ.ಎಸ್.ರಮೇಶ್, ಎಸ್ಪಿ ಪದ್ಮಿನಿ ಸಾಹು, ಜಿಪಂ ಸಿಇಓ ಎಸ್.ಪೂವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಕಾತ್ಯಾಯಿನಿ ದೇವಿ, ನಗರಸಭಾ ಸದಸ್ಯರಾದ ಚಿನ್ನಮ್ಮ, ಅಬ್ರಾರ್ ಅಹಮದ್, ರಾಜಪ್ಪ, ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್, ಇತರೆ ಮುಖಂಡರು, ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

ಜಿಲ್ಲೆಯ 70 ಸಾವಿರಕ್ಕೂ ಹೆಚ್ಚು ಮಹಿಳಾ ಪ್ರಯಾಣಿಕರಿಗೆ ಅನುಕೂಲ

ರಾಜ್ಯ ಸರ್ಕಾರದ ಮಹಾತ್ವಕಾಂಕ್ಷಿ ಶಕ್ತಿ ಯೋಜನೆಯಿಂದ ಚಾಮರಾಜನಗರ ವಿಭಾಗದ 4 ಕೆಎಸ್‌ಆರ್‌ಟಿಸಿ ಘಟಕಗಳಿಂದ ಅಂದಾಜು 70 ಸಾವಿರಕ್ಕೂ ಹೆಚ್ಚು ಮಹಿಳಾ ಪ್ರಯಾಣಿಕರಿಗೆ ಅನುಕೂಲವಾಗಲಿದೆ.

ಜಿಲ್ಲೆಯಲ್ಲಿ ಪ್ರಸ್ತುತ ನಿತ್ಯ 1.78 ಲಕ್ಷ ಕಿಮೀ ಬಸ್‌ಗಳು ಸಂಚರಿಸುತ್ತಿದ್ದು, ಪುರುಷರು ಹಾಗೂ ಮಹಿಳೆಯರು ಸೇರಿದಂತೆ 1.70 ಲಕ್ಷ ಮಂದಿ ಪ್ರಯಾಣಿಸುತ್ತಿದ್ದಾರೆ. ಈ ಪೈಕಿ 70 ಸಾವಿರಕ್ಕೂ ಹೆಚ್ಚು ಮಹಿಳೆಯರು ಈ ಯೋಜನೆಯ ಲಾಭ ಪಡೆಯಲಿದ್ದಾರೆ ಎಂದು ಜಿಲ್ಲೆಯ ಸಾರಿಗೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

5 ಗ್ಯಾರಂಟಿಗಳ ಪೈಕಿ ಶಕ್ತಿ ಯೋಜನೆ ಅನುಷ್ಠಾನ: ಗಣೇಶ್‌ಪ್ರಸಾದ್



ಗುಂಡ್ಲುಪೇಟೆ, ಜೂ.11– ಕಾಂಗ್ರೆಸ್ ಪಕ್ಷ ನೀಡಿದ್ದ ಭರವಸೆಯಂತೆ 5 ಗ್ಯಾರಂಟಿಗಳ ಪೈಕಿ ಶಕ್ತಿ ಯೋಜನೆಯನ್ನು ಅನುಷ್ಠಾನಗೊಳಿಸಿದೆ ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ತಿಳಿಸಿದರು.

ಪಟ್ಟಣದ ಸಾರಿಗೆ ಬಸ್ ನಿಲ್ದಾಣದಲ್ಲಿ ಶಕ್ತಿ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆಯುವ ಸರ್ಕಾರ. ಎಲ್ಲಾ ಗ್ಯಾರಂಟಿಗಳನ್ನು ಆ.15ರೊಳಗೆ ಅನುಷ್ಠಾನಗೊಳಿಸಲಾಗುವುದು ಎಂದರು.

ದುಡಿಯುವ ಮಹಿಳೆಯರು ಹಾಗೂ ಬಡ ಮತ್ತು ಶ್ರಮಿಕ ವರ್ಗಗಳನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆ ಜಾರಿಗೊಳಿಸಲಾಗಿದೆ. ಮಹಿಳೆಯರು ಈ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಿ ಎಂದರು.ಈ ವೇಳೆ ತಹಸೀಲ್ದಾರ್ ಜಯಪ್ರಕಾಶ್, ಚಾಮುಲ್ ನಿರ್ದೇಶಕ ಹೆಚ್.ಎಸ್. ನಂಜುಂಡಪ್ರಸಾದ್, ಕಾಡಾ ಮಾಜಿ ಅಧ್ಯಕ್ಷ ನಂಜಪ್ಪ, ಪುರಸಭೆ ಸದಸ್ಯರಾದ ಅಣ್ಣಯ್ಯಸ್ವಾಮಿ, ಹೀನಾ ಕೌಸರ್, ಶ್ರೀನಿವಾಸ್‌ಕಣ್ಣಪ್ಪ, ಮುಖಂಡರಾದ ಲಿಂಗರಾಜು, ಎಸ್‌ಆರ್‌ಎಸ್ ರಾಜಶೇಖರ್, ರಾಜೇಶ್, ಮೃತ್ಯುಂಜಯ, ನಟೇಶ್, ಡಿಪೋ ಮ್ಯಾನೇಜರ್ ಪುಷ್ಪಾ, ಸಾರಿಗೆ ಇಲಾಖೆ ಮಹೇಂದ್ರ ಮತ್ತು ಸಿಬ್ಬಂದಿ, ಕಾಂಗ್ರೆಸ್ ಕಾರ್ಯಕರ್ತರು ಹಾಜರಿದ್ದರು.

ವೈಫೈ ಸಮಸ್ಯೆ ಹಿನ್ನೆಲೆ ರೇಷ್ಮೆ ಹರಾಜು ಸ್ಥಗಿತ: ಪ್ರತಿಭಟನೆ



ಕೊಳ್ಳೇಗಾಲ, ಜೂ.11– ವೈಫೈ ಸಮಸ್ಯೆ ಹಿನ್ನೆಲೆಯಲ್ಲಿ ಇಲ್ಲಿನ ಮುಡಿಗುಂಡ ರೇಷ್ಮೆಗೂಡು ಮಾರುಕಟ್ಟೆಯಲ್ಲಿ ರೇಷ್ಮೆಗೂಡು ಹರಾಜು ತಡವಾಗಿದ್ದರಿಂದ ರೊಚ್ಚಿಗೆದ್ದ ರೈತರು ಭಾನುವಾರ ಪ್ರತಿಭಟನೆ ನಡೆಸಿದರು.


ಮೊನ್ನೆ ವಿದ್ಯುತ್ ಸಮಸ್ಯೆಯಿಂದಾಗಿ ಹರಾಜು ಪ್ರಕ್ರಿಯೆ ತಡವಾದರೆ, ಇಂದು ವೈಫೈ ಸಮಸ್ಯೆಯಿಂದ ರೇಷ್ಮೆಗೂಡು ಹರಾಜು ಪ್ರಕ್ರಿಯೆ ನಡೆಯದ ಪರಿಣಾಮ ಮಳ್ಳವಳ್ಳಿ, ಮಂಡ್ಯ, ರಾಮನಗರ, ಕನಕಪುರ ಸೇರಿದಂತೆ ಅನೇಕ ರೇಷ್ಮೆ ಬೆಳೆಗಾರರು ಆಕ್ರೋಶ ವ್ಯಕ್ತಪಡಿಸಿ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿ, ಅರ್ಧ ಗಂಟೆಗೂ ಹೆಚ್ಚು ಕಾಲ ಪ್ರತಿಭಟನೆ ನಡೆಸಿದರು.

ಈ ವೇಳೆ ರೇಷ್ಮೆಗೂಡು ಮಾರುಕಟ್ಟೆ ಉಪನಿರ್ದೇಶಕ ಮಹದೇವಯ್ಯ, ತಕ್ಷಣ ವೈಫೈ ಸರಿಪಡಿಸಿ ಹರಾಜು ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಭರವಸೆ ನೀಡಿ ರೈತರನ್ನು ಸಮಾಧಾನಪಡಿಸಿದರು. ಬಳಿಕ ಹಳೇ ಪದ್ಧತಿಯಲ್ಲಿ ರೇಷ್ಮೆ ಮಾರಾಟ ಮಾಡಿ ರೈತರು ವಾಪಸ್ಸಾದರು.

ಪ್ರತಿಭಟನೆಯಲ್ಲಿ ರವೀಶ್ ಹೊನ್ನಿಂಗಹಳ್ಳಿ, ನಾಗೇಂದ್ರ ಕಂದೇಗಾಲ, ಲೋಕೇಶ್, ಅಂಚೆದೊಡ್ಡಿ ನಾಗರಾಜು, ಬಸವರಾಜು ಕನಕಪುರ, ರವಿ ಕೆ.ಎಂ. ದೊಡ್ಡಿ, ಮುತ್ತುರಾಜು, ದರ್ಶನ್ ಸೇರಿದಂತೆ ಅನೇಕ ರೈತರು ಹಾಜರಿದ್ದರು.

ಬಿಳಿಗಿರಿರಂಗನಬೆಟ್ಟ ಕಂದಾಯ ಗ್ರಾಮ ಗೊಂದಲಕ್ಕೆ ಶೀಘ್ರ ಪರಿಹಾರ

ಶಾಸಕ ಎ.ಆರ್.ಕೃಷ್ಣಮೂರ್ತಿ ಭರವಸೆ



ಯಳಂದೂರು, ಜೂ.11– ತಾಲೂಕಿನ ಬಿಳಿಗಿರಿರಂಗನ ಬೆಟ್ಟವನ್ನು ಕಂದಾಯ ಗ್ರಾಮವಾಗಿಸುವ ಸಮಸ್ಯೆಯನ್ನು ಶೀಘ್ರ ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ವಹಿಸುತ್ತಿದ್ದು, ಇದಕ್ಕೆ ಸಂಬಂಧಿಸಿದ ಉನ್ನತ ಮಟ್ಟದ ಅಧಿಕಾರಿಗಳಿಂದ ಮಾಹಿತಿ ಪಡೆದು ಸಮಸ್ಯೆ ಬಗ್ಗೆ ವಿಧಾನಸೌಧದ ಕಲಾಪದಲ್ಲಿ ಪ್ರಸ್ತಾಪಿಸಿ ಪರಿಹಾರ ಕಂಡುಕೊಳ್ಳಲಾಗುವುದು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಭರವಸೆ ನೀಡಿದರು.

ತಾಲೂಕಿನ ಬಿಳಿಗಿರಿರಂಗನಬೆಟ್ಟದ ಬಿಳಿಗಿರಿರಂಗನಾಥಸ್ವಾಮಿ ದೇಗುಲಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 1960ರ ದಶಕದಲ್ಲಿ ಬಿಳಿಗಿರಿರಂಗನಬೆಟ್ಟದ ಅರಣ್ಯ ಭೂಮಿಯನ್ನು ಕಂದಾಯ ಭೂಮಿಯಾಗಿ ಹಾಗೂ ಗಡಿಭಾಗದ ಪ್ರದೇಶದಲ್ಲಿ ಸಾಗುವಳಿ ಮಾಡುವ ನಿಟ್ಟಿನಲ್ಲಿ ಆಗಿನ ಅರಣ್ಯ ಮತ್ತು ಕಂದಾಯ ಸಚಿವರಾಗಿದ್ದ ಬಿ.ರಾಚಯ್ಯ ಪರಿವರ್ತಿಸಿದ್ದರು. ಆದರೆ ಆ ಜಾಗ ಪಡೆದ ರೈತರು ಕಾಡುಪ್ರಾಣಿಗಳ ಹಾವಳಿ ಹಾಗೂ ನೀರಿನ ಸಮಸ್ಯೆ ಹಿನ್ನೆಲೆಯಲ್ಲಿ ವ್ಯವಸಾಯ ಮಾಡದೆ ಪಾಳು ಬಿಟ್ಟಿದ್ದರು. ಇದರಿಂದ ಆ ಪ್ರದೇಶ ಗಿಡಮರಗಳು ಬೆಳೆದು ಕಾಡಾಗಿ ಪರಿವರ್ತನೆಯಾಗಿದ್ದು, ಅರಣ್ಯ ಇಲಾಖೆ ವಶಪಡಿಸಿಕೊಂಡಿದೆ. ಈ ಬಗ್ಗೆ ನೈಜ ಸಾಗುವಳಿ ಪಡೆದ ರೈತರು ಪ್ರಶ್ನಿಸಲು ಹೋದರೆ ತೊಂದರೆಯಾಗುತ್ತಿದೆ. ಈ ಬಗ್ಗೆ ಹಿಂದಿನ ನಕ್ಷೆ ಆಧಾರದ ಮೇಲೆ ಕಂದಾಯ, ಅರಣ್ಯ, ಸರ್ವೇ ಇಲಾಖೆಗಳೊಂದಿಗೆ ಜಂಟಿ ಸರ್ವೇ ನಡೆಸಿ ಗಡಿ ಗುರುತಿಸುವ ಕೆಲಸ ಮಾಡಲಾಗುವುದು. ಈ ಬಗ್ಗೆ ಉನ್ನತ ಮಟ್ಟದ ಅಧಿಕಾರಿಗಳಿಂದ ಮಾಹಿತಿ ಪಡೆದು ವಿಧಾನಸೌಧದ ಸದನದಲ್ಲಿ ಈ ಬಗ್ಗೆ ಧ್ವನಿ ಎತ್ತಿ ಪ್ರಸ್ತಾವ ಸಲ್ಲಿಸುವುದಾಗಿ ಭರವಸೆ ನೀಡಿದರು.

ವಿಶೇಷ ಪೂಜೆ: ಶ್ರೀಬಿಳಿಗಿರಿರಂಗನಾಥಸ್ವಾಮಿ ಹಾಗೂ ಅಲಮೇಲಮ್ಮ ದೇಗುಲಕ್ಕೆ ಭೇಟಿ ನೀಡಿದ ಶಾಸಕ ಎ.ಆರ್.ಕೃಷ್ಣಮೂರ್ತಿ ದೇವರಿಗೆ ಅಭಿಷೇಕ, ಅರ್ಚನೆ, ವಿಶೇಷ ಪೂಜೆ ನೆರವೇರಿಸಿ, ಹರಕೆ ತೀರಿಸಿದರು. ಈ ವೇಳೆ ಜಿಪಂ ಮಾಜಿ ಉಪಾಧ್ಯಕ್ಷೆ ಕೇತಮ್ಮ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರು, ಪ್ರಧಾನ ಕಾರ್ಯದರ್ಶಿ ಪ್ರಕಾಶ್, ಮುಖಂಡರಾದ ವೆಂಕಟೇಶ್, ದೇವರಾಜು, ಸತೀಶ್, ಚೇತನ್, ಗುರು, ಚೇತನ್, ನಂಜುಂಡಸ್ವಾಮಿ, ರಾಘವೇಂದ್ರ ಹಾಲಿನ ಮಹದೇವಶೆಟ್ಟಿ, ವಿಶ್ವ, ರವಿ, ದೇಗುಲದ ಇಓ ಮೋಹನ್ ಕುಮಾರ್, ದೇಗುಲದ ಸಿಬ್ಬಂದಿಗಳಾದ ರಾಜಣ್ಣ, ಶೇಷಾದ್ರಿ, ಪೊಲೀಸ್ ಸಿಬ್ಬಂದಿ ಮುರಳಿ ಸೇರಿದಂತೆ ಇತರರಿದ್ದರು.

ಇಂದು ನೇರ ಸಂದರ್ಶನ

ಚಾಮರಾಜನಗರ, ಜೂ.11– ನಿರುದ್ಯೋಗಿ ಪುರುಷ ಮತ್ತು ಮಹಿಳೆಯರಿಗೆ ಖಾಸಗಿ ಕಂಪನಿ, ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ನೇಮಕಾತಿಗಾಗಿ ಜೂ.12ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆವರೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೇರ ಸಂದರ್ಶನ ಆಯೋಜಿಸಲಾಗಿದೆ. ಮೈಸೂರಿನ ಖಾಸಗಿ ಕಂಪನಿಗಳಲ್ಲಿ ಹಾಗೂ ಬೆಂಗಳೂರಿನ ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ಖಾಲಿ ಇರುವ 100ಕ್ಕೂ ಹೆಚ್ಚು ಸೂಪರ್‌ವೈಸರ್, ಕ್ಯಾಪ್ಟನ್, ಸ್ಟೀವರ್ಡ್ಸ್, ಕಿಚನ್ ಅಸಿಸ್ಟಂಟ್, ಚೆಫ್ ಮತ್ತು ಫ್ರಂಟ್ ಆಫೀಸ್ ಎಕ್ಸಿಕ್ಯೂಟಿವ್ ಹುದ್ದೆಗಳು ಲಭ್ಯವಿರುತ್ತವೆ. ಆಕರ್ಷಕ ಸಂಬಳ, ಉಚಿತ ಊಟ, ವಸತಿ ಹಾಗೂ ಇಎಸ್‌ಐ, ಪಿಎಫ್ ಸೌಲಭ್ಯವಿರುತ್ತದೆ ಮಾಹಿತಿಗೆ ದೂ: 08226–224430 ಅಥವಾ ಮೊ: 8884865299 ಸಂಪರ್ಕಿಸಿ.

ಜಿಲ್ಲೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ: ಸಚಿವ ಕೆ.ವೆಂಕಟೇಶ್



ಚಾಮರಾಜನಗರ, ಜೂ.11– ಚಾಮರಾಜನಗರ ಜಿಲ್ಲೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಪಶು ಸಂಗೋಪನೆ, ರೇಷ್ಮೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗಡಿ ಜಿಲ್ಲೆ ಚಾಮರಾಜನಗರದ ಬಗ್ಗೆ ಅಲ್ಪ ಸ್ವಲ್ಪ ತಿಳಿದುಕೊಂಡಿದ್ದೇನೆ. ಈ ಹಿಂದೆ ಇದ್ದ ಅನೇಕ ಸಚಿವರು ಜಿಲ್ಲೆ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ನಾನು ಜಿಲ್ಲೆಯಲ್ಲಿ ಆಗಬೇಕಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಗಮನ ಹರಿಸುತ್ತೇನೆ ಎಂದರು.

ಮುಂದಿನ ದಿನಗಳಲ್ಲಿ ಅಧಿಕಾರಿಗಳೊಂದಿಗೆ ಚರ್ಚಿಸಿ, ಸ್ಥಳೀಯ ಶಾಸಕರು, ಮುಖಂಡರು, ಸಂಘ–ಸಂಸ್ಥೆಗಳು ಹಾಗೂ ಮಾಧ್ಯಮದವರ ಸಲಹೆ ಸಹಕಾರ ಪಡೆದು ಜಿಲ್ಲೆಯ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದರು. ಈ ಹಿಂದೆ ಜಿಲ್ಲೆಯಲ್ಲಿ ರೈತರು ಹೆಚ್ಚು ರೇಷ್ಮೆ ಬೆಳೆಯುತ್ತಿದ್ದರು. ಪ್ರಸ್ತುತ ಕಡಿಮೆಯಾಗಿದೆ. ರೇಷ್ಮೆ ಅಭಿವೃದ್ಧಿಗೆ ಪ್ರಯತ್ನಿಸುತ್ತೇನೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಇದಕ್ಕೂ ಮುನ್ನಾ ಜಿಲ್ಲೆಗೆ ಆಗಮಿಸಿದ ಸಚಿವರನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ನಗರದ ಹೊರವಲಯದಲ್ಲಿ ಹೂಗುಚ್ಛ ನೀಡಿ ಸ್ವಾಗತಿಸಿದರು. ಬಳಿಕ ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿ ಯಲ್ಲಿ ಪಕ್ಷದ ಮುಖಂಡರು ಸಚಿವರನ್ನು ಸನ್ಮಾನಿಸಿದರು. ನಂತರ ಪ್ರವಾಸಿ ಮಂದಿರಕ್ಕೆ ಆಗಮಿಸಿದ ಸಚಿವರನ್ನು ಜಿಲ್ಲೆಯ ಅಧಿಕಾರಿಗಳು ಸ್ವಾಗತಿಸಿ ಪರಿಚಯ ಮಾಡಿಕೊಂಡರು. ಈ ವೇಳೆ ಕೆಲವು ರೈತ ಮುಖಂಡರು ಸಚಿವರನ್ನು ಭೇಟಿ ಮಾಡಿ ಸಚಿವರಿಗೆ ಮನವಿ ಸಲ್ಲಿಸಿ, ಹಲವು ವಿಚಾರಗಳ ಬಗ್ಗೆ ಚರ್ಚಿಸಿದರು. ಈ ವೇಳೆ ಮಾಜಿ ಶಾಸಕರಾದ ಆರ್.ನರೇಂದ್ರ ಜಿ.ಎನ್.ನಂಜುಂಡಸ್ವಾಮಿ ಇತರರಿದ್ದರು.

ನಾಲ್ವಡಿ ಜಯಂತಿ ಅಂಗವಾಗಿ ಸಾಧಕರಿಗೆ ಪ್ರಶಸ್ತಿ ಪ್ರದಾನ



ಮೈಸೂರು, ಜೂ.11(ಎಂಕೆ)– ನಗರದ ಕೃಷ್ಣಮೂರ್ತಿಪುರಂನ ನಮನ ಕಲಾ ಮಂಟಪದಲ್ಲಿ ವಿಶ್ವ ಚೇತನ ಬಳಗದ ವತಿಯಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ಕೆ.ಆರ್.ಪೇಟೆಯ ದೈಹಿಕ ಶಿಕ್ಷಣ ಶಿಕ್ಷಕಿ ಟಿ.ಜೆ.ವಿಮಲ ಅವರಿಗೆ 'ಶ್ರೇಷ್ಠ ದೈಹಿಕ ಶಿಕ್ಷಕಿ' ಪ್ರಶಸ್ತಿ ನೀಡಿ ಅಭಿನಂದಿಸಿದರೆ, ನಿವೃತ್ತ ಶಿಕ್ಷಕಿ ಎ.ಎಸ್.ವಾಣಿ ಸುಬ್ಬಯ್ಯ ಅವರಿಗೆ 'ಮೈಸೂರು ಸಿರಿ ರತ್ನ' ಪ್ರಶಸ್ತಿ ಹಾಗೂ 'ಶ್ರೇಷ್ಠ ಶಿಕ್ಷಕ ಪ್ರಶಸ್ತಿಯನ್ನು ಕೆ.ಆರ್.ಪೇಟೆ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಕೆ.ಪಿ.ಬೋರೇಗೌಡ ಅವರ ಪರವಾಗಿ ಪತ್ನಿ ಶಶಿಕಲಾ ಸ್ವೀಕರಿಸಿದರು.

ಬಳಿಕ ಒಡೆಯರ್ ಒಂದು ನೆನಪು ಕುರಿತು ಮಾತನಾಡಿದ ಹಿರಿಯ ಸಾಹಿತಿ ಇಂದಿರಾ ಹೆಚ್.ಪಾಟೀಲ್, ಮೈಸೂರು ಒಡೆಯರ್ ಸಂಸ್ಥಾನದ 25 ಮಹಾರಾಜರುಗಳಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬಹುಕಾಲ ಮನದಲ್ಲಿ ನಿಲ್ಲುತ್ತಾರೆ. ಹಲವಾರು ಸಮಾಜಮುಖಿ ಚಿಂತನೆ ಹಾಗೂ ಯೋಜನೆಗಳನ್ನು ಹಾಕಿಕೊಂಡು ಎಲ್ಲರಿಗೂ ದಾರಿದೀಪವಾದರು. ಕಡಿಮೆ ಅವಧಿಯಲ್ಲಿ ಹೆಚ್ಚು ಕೆಲಸ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ ಎಂದರು.

ಲೇಖಕ ಕಾಳಿಹುಂಡಿ ಶಿವಕುಮಾರ್ ಮಾತನಾಡಿ, ಈಗಾಗಲೇ ಮೈಸೂರಿನಲ್ಲಿ ಜಿಲ್ಲಾಡಳಿತ ಸೇರಿದಂತೆ ಅನೇಕ ಸಂಘ–ಸಂಸ್ಥೆಗಳಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 139ನೇ ಜಯಂತಿ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಗಿದೆ. ಸದಾ ನೆನಪಿನಲ್ಲಿ ಉಳಿಯುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಯೊಬ್ಬ ಮಹಾರಾಜರಿಗೂ ಮಾದರಿಯಾಗಿದ್ದಾರೆ ಎಂದು ಬಣ್ಣಿಸಿದರು. ನೃತ್ಯಗಾರ್ತಿ ಎಂ.ಎನ್.ಯದುಗಿರಿ ಗೋಪಾಲನ್, ವಾಗ್ಮಿ ವಿ.ನಾರಾಯಣರಾವ್, ವಿಶ್ವಚೇತನ ಬಳಗದ ಸಂಸ್ಥಾಪಕ ಎಂ.ಶಿವಸ್ವಾಮಿ, ಪುಷ್ಪಲತಾ, ಬಿ.ಡಿ.ಎಂ.ಕುಮಾರ್ ಮತ್ತಿತರರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ
Salary : 13,000-21,000+ESI+PF
ವಿದ್ಯಾರ್ಹತೆ: 10th, PUC, ITI, Diploma & Any Degree
ಇಂದೇ ಸಂಪರ್ಕಿಸಿ:
9035734821

ಮಂಟಪ ಮನೆ
ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ
ಸಂಪರ್ಕಿಸಿ: ಶ್ರೀನಗರ ಮೈಸೂರು
9448207634
9036742526

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC
Sales & Service
Contact: Srinivas
9379699229

HOUSE FOR SALE
2 Houses (GF + FF) measuring 22 sq each, built on 45ft x 60ft plot in Siddharthanagar, Mysuru
Buyers only contact:
63607 45146
Brokers not welcome

ಸುವರ್ಣಯಾತ್ರ
ಚಾರ್ಧಾಮ್ ಪ್ರವಾಸ ಯಮುನೋತ್ರಿ ಗಂಗೋತ್ರಿ, ಕೇದಾರನಾಥ, ಬದ್ರಿನಾಥ್, ಹರಿದ್ವಾರ್, ಋಷಿಕೇಶ್ 13 ದಿನಗಳು 21–09–2023 ಅಥವಾ 05–10–2023 ಅಥವಾ 27–10–2023
9019462508
9008381022

ಶಾಶ್ವತ ವಿದ್ಯಾಮಂದಿರ
(ಇಂಗ್ಲೀಷ್ ಮಾಧ್ಯಮ)
ಸಿದ್ದರಾಮನಹುಂಡಿ ವರುಣಾ ಹೋಬಳಿ,
TEACHERS WANTED
English / Spoken English Social, Nursery, P.T. Teachers & Bus Driver
9740032559
9964236933

ಕೆಲಸಕ್ಕೆ ಬೇಕಾಗಿದ್ದಾರೆ
ಡಿ.ಟಿ.ಪಿ ಆಪರೇಟರ್ (M/F) ಕನ್ನಡ (ನುಡಿ) ಮತ್ತು ಇಂಗ್ಲೀಷ್ ಟೈಪಿಂಗ್ ಕಡ್ಡಾಯವಾಗಿ ಗೊತ್ತಿರಬೇಕು.
ಸ್ಥಳ: ಸಂಕ್ರಾಂತಿ ಸರ್ಕಲ್ ಹತ್ತಿರ, ಹೆಬ್ಬಾಳು, ಮೈಸೂರು
9900525880
8105946168

ನಕ್ಷತ್ರ ಕನ್‌ಸ್ಟ್ರಕ್ಷನ್ಸ್
ಮೈಸೂರಿನಲ್ಲಿ ಮನೆ ಕಟ್ಟಬೇಕೆ?
ಫ್ರೀ ಕನ್‌ಸ್ಟ್ರಕ್ಷನ್ ಪ್ಲಾನ್, 3D ಡಿಸೈನ್, ಸ್ಯಾಂಕ್ಷನ್ ಪ್ಲಾನ್
ಉತ್ತಮ ಮೆಟೀರಿಯಲ್ಸ್, ಎಂಡ್ ಟು ಎಂಡ್ ಮ್ಯಾನೇಜ್ಮೆಂಟ್, ಪ್ರೀಮಿಯಂ ಕನ್‌ಸ್ಟ್ರಕ್ಷನ್ ಜೊತೆಗೆ 100% ವಾಸ್ತು
ವಿಶೇಷ ಬೆಲೆ, ಪ್ರತಿ ಚದರ ಅಡಿಗೆ 1799 ರೂ.ನಿಂದ ಪ್ರಾರಂಭ
ಸಂಪರ್ಕ: 80885 12141

ಬೇಕಾಗಿದ್ದಾರೆ
ಅಕೌಂಟ್ ಮ್ಯಾನೇಜರ್
ಟ್ಯಾಲಿ ಕಲಿತಿರಬೇಕು
ಅನುಭವ ಇರುವವರಿಗೆ ಆದ್ಯತೆ
ಜೈಭಾರತ್ ಮಾರ್ಕೆಟಿಂಗ್
ಅಶೋಕ ರೋಡ್, ಮೈಸೂರು
Call: 9741825653

ಶ್ರೀ ಗೌರಿಶಂಕರ ಟ್ರಾವೆಲ್ಸ್
28–6–2023 (4 ದಿನ): ಭೀಮಾಶಂಕರ, ಶಿರಡಿ, ಘೃಷ್ಣೇಶ್ವರ, ಎಲ್ಲೋರ, ನಾಸಿಕ್, ಶನಿ ಸಿಂಗನಾಪುರ, ತ್ರ್ಯಯಂಬಕೇಶ್ವರ.
12–8–23 (7 ದಿನ): ಅಯೋಧ್ಯೆ, ಪ್ರಯಾಗ್ ರಾಜ್, ಕಾಶಿ, ಗಯಾ, ಬುದ್ಧಗಯಾ, ಬಾಬಾ ಬೈದ್ಯನಾಥ್, ಇತ್ಯಾದಿ.
ವಿಮಾನ / ಎಸಿ ಬಸ್ / ಊಟ / ರೂಂ.
Mob: 9620002114

Sudarshan Saur
SOLAR WATER HEATER
ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

100% TEAK WOOD FACTORY FINISH DOORS
@ DEPOT RATES
10 YEARS WARRANTY
www.ssbuildmart.com
9901291267
9845426862

DTCP SITES FOR SALE
DTCP Sites
Rs. 699 per sq.ft., Near Jayapura, H.D. Kote Road, Mysore.
9590491194, 9606783264

Alpha School of Fashion Design, Mysore
Become a Fashion Designer
NCVTE New Delhi approved courses
- 3 MONTHS CERTIFICATION COURSE
- 6 MONTHS DIPLOMA COURSE
- 1 YEAR ADVANCE DIPLOMA COURSE
ADMISSION OPEN
*HOSTEL AND PG AVAILABLE
Alpha School of Fashion Design, No.66/2, Maisandavadi Road, Near Ring Road Signal Junction, Srirampura, Mysore
7829937469

SITE FOR SALE
50X80 South Face Park opposite 4th Stage, 2nd Phase Vijayanagar Mysore
9620026084

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್, ಸೂಪರ್‌ವೈಸರ್ (12 hrs) ಬೇಕಾಗಿದ್ದಾರೆ. ಉತ್ತಮ ಸಂಬಳ ESI & PF ಸೌಲಭ್ಯ
Age: 30 to 45 Yrs. Edu: SSLC, PUC
ಸ್ಥಳ: ಹೆಬ್ಬಾಳು, ಬೆಳವಾಡಿ, ವಿಜಯನಗರ & ಮೈಸೂರು ಸುತ್ತಮುತ್ತಲಿನ ಪ್ರದೇಶಗಳಿಗೆ
9739199355
9844235981

40x60 SITE FOR SALE
West Facing, Auction Site DIRECTLY MUDA
Rajeeva Nagar, Ali Miyan Road Near Dharu Salam Masjid, MYSORE
—Rs. 94 Lacs—
Call : 9845286583

ಹೊಸ ಮನೆ ಮಾರಾಟಕ್ಕಿದೆ
1400 ಅಡಿ ಪೂರ್ವ ದಿಕ್ಕು ಹಾಗೂ ಸೈಟುಗಳು ದೊರೆಯುತ್ತವೆ ಶ್ರೀನಗರ ಹಿಂಭಾಗ ಶ್ರೀರಾಂಪುರ ರಿಂಗ್ ರೋಡ್, ಮೈಸೂರು
8050345574

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಉತ್ತಮವಾದ ಸಂಬಳ ವಯೋಮಿತಿ 30 ರಿಂದ 45 ರವರೆಗೆ ಮೇಟಗಳ್ಳಿ, ಬೆಳವಾಡಿ, ಜೆ.ಪಿ.ನಗರ, ಬೋಗಾದಿ ಹಾಗೂ ಮೈಸೂರು ಸುತ್ತಮುತ್ತ ಇರುವ ಪ್ರದೇಶಗಳಿಗೆ ದೂರವಾಣಿ ಸಂಖ್ಯೆ:
9538886328
9108100117

ಕಳೆದಿದೆ
ಕಣ್ಣಣಿ. ಎ, ನಂ. 65 ಬಿಬಿ ಕೇರಿ, ಪುಲಿಕೇಶಿ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು, ಅರ್ಜಿದಾರರ ಬಾಬ್ತು ತಾಯಿಯ ಹೆಸರಿನಲ್ಲಿರುವ ಮನೆ ನಂ. 65, ಬಿಬಿ ಕೇರಿ ವಿಳಾಸ್ ಹಕ್ಕು ಪತ್ರ Reg No. 5192/2008-09 ರ 3ನೇ ಪುಟ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9945463895

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
87490 98879

ಬೇಕಾಗಿದ್ದಾರೆ
ಅಂಗಡಿ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ
ಜೆಮಿನಿ ರೋಲಿಂಗ್ ಷಟರ್ ಮೆಟೀರಿಯಲ್ಸ್
ವಿಶ್ವೇಶ್ವರ ನಗರ ಇಂಡಸ್ಟ್ರಿಯಲ್ ಸಬ್‌ಅರ್ಬನ್, ಮೈಸೂರು.
ಸಂಬಳ: 12000/–. ಸಂಪರ್ಕಿಸಿ:
7829665715

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15200/- to 86000/-
9740733021
9535028750

2 BHK MUDA APPROVED 30x40
NEW HOUSE FOR SALE
NEAR ST. JOSEPH SCHOOL, ILWALA, MYSORE.
8217851695

ಸಂಪು ಕ್ಲೀನಿಂಗ್
ಸಂಪರ್ಕಿಸಿ:
8431541631

ಬ್ಯುಸಿನೆಸ್ ಪ್ಲ್ಯಾನ್
ಬ್ಯುಸಿನೆಸ್ ಪ್ಲ್ಯಾನ್ ನಿಮ್ಮದು. ಬಂಡವಾಳ ನಮ್ಮದು. ಬಂದ ಆದಾಯದಲ್ಲಿ 50–50. ಈ ರೀತಿ ಬ್ಯುಸಿನೆಸ್ ಪ್ಲ್ಯಾನ್ ಇರುವವರು ಕೂಡಲೇ ಸಂಪರ್ಕಿಸಿ
9901080314

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಶ್ರೀ ಮಾರುತಿ ರಿಯಲ್ ಎಸ್ಟೇಟ್
ಸೈಟುಗಳು ಕೊಳ್ಳಲು / ಮಾರಲು
ಸೈಟುಗಳು ಮಾರಾಟಕ್ಕಿವೆ.
30x40, 30x50 & 40x60
ಸಂಪರ್ಕಿಸಿ: 9538412881

ಷೇರ್ ಮಾರ್ಕೆಟ್ ಟ್ರೇಡಿಂಗ್
Nifty & Bank Nifty Option+ Trading
ಟ್ರೇಡಿಂಗ್ in Live ಕೋರ್ಸ್
Daily 1500-2000 Profit (Trading Tips also)
Ph: 9945667806

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

COMPANY NAME
M/s. Deccan Financial Services
Rama Vilas Road, Beside Rajesh Automobile
Required TELECALERS
Male and Female candidates
Qualification: SSLC / PUC/ Graduation Pass or Fail. Languages: Kannada, English, Hindi & All Language.
Contact for details: 9743744662, 9538094411, 9886577507

MUDA Site for Sale
(Allotment Duplicate)
20x30, Rajiv Nagar, 3rd Stage, Ring Road, near NRH, Mysore.
Contact:
8105157403, 9731962456

CHANGE OF NAME
I, S. Mahesha Swamy, residing at No. 757/B-4, "Shiva Krupa", 3rd Cross, 2nd Stage, Bogadi, near Amrita Vidyalayam, Mysuru-570 026, changed my name as S. Mahesh Swamy, on my own free will, in front of Notary D.C. Anantha Kumar, Mysore on 17-5-2023. I declare that at all the times hereafter in all records, deeds and writing and in all proceeding and transactions, I shall be called and sign of the name of S. Mahesh Swamy.
Sd/- S. Mahesh Swamy

ವಾಟರ್ ಲೆವೆಲ್ ಕಂಟ್ರೋಲ್‌ಗಾಗಿ
ಸಂಪರ್ಕಿಸಿ:
Mob: 8880558064

HOUSE FOR RENT
2 BHK, E/F 2nd Floor Vijayanagar 2nd Stage, G/F Single Room with attach for Rent Vijayanagar 2nd Stage, Mysore
9916820426

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ.
ಸಂಬಳ 12000 ದಿಂದ 18000,
8050699742
ನಮ್ಮಲ್ಲೇ ಉಳಿದುಕೊಳ್ಳುವಂತಹ ಚಾಲಕರು ಸಹ ಬೇಕಾಗಿದ್ದಾರೆ
6366141518

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ಎಲ್ಲಾ ವಯಸ್ಸಿನ ಎಲ್ಲಾ ವಿದ್ಯಾವಂತ ವಧುವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ
ಡಾ. ಗುರೂಜಿ
9448229184
7899625268

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು/ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 8000 ದಿಂದ 11 ಸಾವಿರದವರೆಗೆ (ಅನುಭವದ ಆಧಾರದ ಮೇಲೆ) ಸಮಯ: ಬೆ.09.30 ಯಿಂದ ರಾತ್ರಿ 9.00 ರವರೆಗೆ
ಸ್ಥಳ: ಅಗ್ರಹಾರ, ಮೈಸೂರು
(ಸ್ಥಳೀಯರಿಗೆ ಆದ್ಯತೆ)
9986311444, 9986322444

ಕೆಲಸಕ್ಕೆ ಬೇಕಾಗಿದ್ದಾರೆ
ವೈನ್ ಸ್ಟೋರ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಮೈಸೂರಿನವರಿಗೆ ಮೊದಲ ಆದ್ಯತೆ ವಯೋಮಿತಿ – 35 ವರ್ಷದ ಒಳಗೆ ಇರತಕ್ಕದ್ದು.
9448563900
9113619961

ಟೆಲಿಕಾಂ ಲೇಔಟ್
30x40 N/F ಸೈಟು @ Rs.25 ಲಕ್ಷ
ತಕ್ಷಣ ಮನೆ ಕಟ್ಟಬಹುದು.
ಬ್ಯಾಂಕ್ ಲೋನ್ ಲಭ್ಯ, ಇಲವಾಲ ಬಸ್ಸು ನಿಲ್ದಾಣ ಹಿಂಭಾಗ, ಹುಣಸೂರು ರಸ್ತೆ, ಮೈಸೂರು
9538583377

FOR SALE
Buy & Sell site, house, land
1) 20x30 old house Rknagar
2) 30x40 40x60 Somanatha Nagar attch
3) 30x40 Duplex House Srirampura
4) 20x30 New and Old House available in Dattagalli
5) 20x30, 30x40, 40x60 sites in H D Kote Road Near Defence Apartment
95386 90359
90359 90359

WANTED
Marketing Executive, Sales Executives, Sales Manager & Web Designer for a reputed Real Estate Company in Mysore
Experienced or Fresher
info@vinyasgroup.com
6364212612

ಸೈಟು ಮಾರಾಟಕ್ಕಿದೆ ಮೂಡ ಅಪ್ರೂವ್ಡ್
30x40, North, West 40x60 N/F, 40x60-W/F, 30x60 North East Corner, 58x60- North East Corner
ರಿಂಗ್ ರೋಡ್ ಹತ್ತಿರ ಯುನಿಸರ್ವಿಟಿ ಲೇಔಟ್ ಎದುರು, 30x40, E/F ATME Engineering ಕಾಲೇಜ್ ಪಕ್ಕ, 40x60 - East Face ವರುಣ ಹತ್ತಿರ.
9900372792

ಬೇಕಾಗಿದ್ದಾರೆ
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಹಾಗೂ ಸೆಕ್ಯೂರಿಟಿ ಗಾರ್ಡ್ ಮೈಸೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ (ಪಾರ್ಟ್ ಟೈಮ್ ಹಾಗೂ ಫುಲ್ ಟೈಮ್)
ವಯಸ್ಸು: 40ರ ಒಳಗೆ
ಆಸಕ್ತಿ ಇದ್ದವರು ಸಂಪರ್ಕಿಸಿ:
8310098788
6361439167

ಈ ತಕ್ಷಣವೇ ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳ ಕಂಪನಿಯಲ್ಲಿ ಕೆಲಸಮಾಡಲು ಹುಡುಗರು, ಹುಡುಗಿಯರು, ಗಂಡಸರು, ಹೆಂಗಸರು, ಟೈಲರುಗಳು ಮತ್ತು ಹೆಲ್ಪರುಗಳು, ಸೆಕ್ಯೂರಿಟಿಗಳು ಬೇಕಾಗಿದ್ದಾರೆ. ESI & PF ವಾರದ ರಜೆ ಮತ್ತು ಕೆಲವು ಸ್ಥಳಗಳಿಗೆ ಬಸ್ಸಿನ ಸೌಲಭ್ಯವಿರುತ್ತದೆ.
7795285485
8105249880

ITIಗೆ ಪ್ರವೇಶಾವಕಾಶ
ಎರಡು ವರ್ಷದ ITI ತುಕಿಗೆ SSLC, PUC ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ NCVT ಭಾರತ ಸರ್ಕಾರದಿಂದ ಸಂಯೋಜನೆ ಗೊಂಡಿರುತ್ತದೆ.
ಬೆನಕ ಐ.ಟಿ.ಐ. ಕಾಲೇಜ್
ಕಾವೇರಿ ವೃತ್ತದ ಹತ್ತಿರ, ಡಾ॥ ರಾಜ್‌ಕುಮಾರ್ ರಸ್ತೆ, ರಾಘವೇಂದ್ರ ನಗರ, ಮೈಸೂರು–29
9342123467, 9141756695

ವಧು ಬೇಕಾಗಿದೆ
32 ವರ್ಷ ಲಿಂಗಾಯತ ವರನಿಗೆ ಯಾವುದಾದರೂ ಸಸ್ಯಹಾರಿ ವಧು
XL ಪಬ್ಲಿಕ್ ಸ್ಕೂಲ್ ಅಟೆಂಡರ್ 5 1/2 ಅಡಿ ಎತ್ತರ. ಸಂಪರ್ಕಿಸಿ
9164736639
9483082982

ಅಡುಗೆ ಹೆಲ್ಪರ್ ಬೇಕಾಗಿದ್ದಾರೆ
ಹಾಸ್ಟೆಲ್‌ಗೆ ಅಡುಗೆ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ಸ್ಥಳ: ಸುಳ್ಯ
9902176566

ಮನೆಯಿಂದಲೇ ಕೆಲಸ
ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುವ ಯುವಕ ಯುವತಿಯರಿಗೆ ಗೃಹಿಣಿಯರಿಗೆ ವಿದ್ಯಾರ್ಥಿಗಳಿಗೆ ನಿವೃತ್ತರಾದವರಿಗೆ ಎಲ್ಲರಿಗೂ ಸದಾವಕಾಶ ದಿನದ ಬಿಡುವಿನ ಸಮಯದಲ್ಲಿ ಕೆಲಸ ಮಾಡಿ ತಿಂಗಳಿಗೆ 12000 ದಿಂದ 18000ವರೆಗೆ ಗಳಿಸಿ.
9035023710, 9742332728

ತಕ್ಷಣ ಬೇಕಾಗಿದ್ದಾರೆ
Telecalling ಮಾಡಲು ಯುವತಿಯರು ಬೇಕಾಗಿದ್ದಾರೆ. No Age Limit
Salary : 7000+Incentives
ವಿದ್ಯಾರ್ಹತೆ: 10th, PUC Any Degree Pass or Fail
Time: 9.30 Am to 6.00 pm
(ಪ್ರವೇಶ ಶುಲ್ಕ ಇರುವುದಿಲ್ಲ)
9980332303

FOR SALE
Commercial Building 33x59 ft North
Mysore- Hunsur Highway
ವಾಣಿಜ್ಯ ಕಟ್ಟಡ ಮಾರಾಟಕ್ಕಿದೆ
ಮೈಸೂರು–ಹುಣಸೂರು ಹೈವೇಸ್ಟ್ 33x59 ಅಡಿ + ಉತ್ತರ
9844511289
9353533188

ಬೇಕಾಗಿದ್ದಾರೆ
ಕಂಪ್ಯೂಟರ್ ಆನ್‌ಲೈನ್ ಅಪ್ಲಿಕೇಷನ್ ಆಪರೇಟರ್ ಬೇಕಾಗಿದೆ.
ಜೆರಾಕ್ಸ್‌ಮಿಶಿನ್
7795646371

WANTED TEACHERS
Jnanajyothi Vidyalaya HPS, Beerihundi
English Teachers-2
Mathematics, Science Teacher-2
NST/Montessori Teachers-2
DEd. B.A, M.A. B.Sc, M.Sc, Bed
Any degree candidates are Contact
9845390377, 8197057626

ಉಚಿತ ತರಬೇತಿ
ಇಂದೇ ಉಷಾ ಹೊಲಿಗೆ ಯಂತ್ರ ಖರೀದಿಸಿ, 2 ತಿಂಗಳ ಹೊಲಿಗೆ ತರಬೇತಿಯನ್ನು ಉಚಿತವಾಗಿ ಪಡೆಯಿರಿ, ತರಬೇತಿ ನಂತರ ಸರ್ಟಿಫಿಕೇಟ್ ಕೊಡಲಾಗುವುದು, ಕೇವಲ 25 ಸೀಟುಗಳು ಲಭ್ಯ Bajaj Easy EMI ಸೌಲಭ್ಯದೊಂದಿಗೆ. ಸಂಪರ್ಕಿಸಿ:
ಗಾನವಿ ಇಂಟರ್‌ನ್ಯಾಷನಲ್
22/2 ಚಂದ್ರಗುಪ್ತ ರಸ್ತೆ, ಸಬರ್ಬನ್ ಬಸ್ ಸ್ಟ್ಯಾಂಡ್ ಹತ್ತಿರ, ಮೈಸೂರು
Contact: 9620476665, 6360737581, 0821-2591111

CHANGE OF NAME
I, S.Arvind Rajan Residing at Flat No. 103, Sankalp Solitaire, General Thimmaiah Road, Near Yoga Narasimha Temple, 2nd Stage, Vijayanagar, Mysore-570017 have changed my name as Arvind Soundarajan vide affidavit Dated 6th June 2023 sworn before Notary C.Mangala, Mysore
Sd/- Arvind Soundarajan

SITE FOR SALE
Urdu Teachers Layout Moulim Nagar Outer Ring Road From 50 Meter Devegowda Circle, Muda Approved (Muda Khatha) 1940 Sqft. (West Face)
95 Lackh (Slightly Nego.)
Broker Excuse
Direct owner
8880368881

ಟೀಚರ್ಸ್ ಬೇಕಾಗಿದ್ದಾರೆ
ಯಾವುದೇ ಪದವಿ ಪಡೆದಿರುವ 1 ರಿಂದ 4ನೇ ತರಗತಿ ವರೆಗೆ ಇಂಗ್ಲೀಷ್ ಪಾಠ ಮಾಡಬಲ್ಲ. ನುರಿತ ಶಿಕ್ಷಕಿ ಬೇಕಾಗಿದ್ದಾರೆ.
ಜ್ಞಾನ ಗಂಗೋತ್ರಿ ಕಾನ್ವೆಂಟ್
ರಾಜೇಂದ್ರ ನಗರ (N.R.Mohalla) ಮೈಸೂರು:
9113980741

ಇಂದೇ ಸಂಪರ್ಕಿಸಿ
ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೊಸದಾಗಿ ತೆರೆದಿರುವ ಕಂಪನಿಯೊಂದಕ್ಕೆ 156 ವಿವಿಧ ಹುದ್ದೆಗಳಿಗೆ SSLC, PUC, ITI, Degree ಆಗಿರುವ ಉತ್ಸಾಹಿ ಯುವಕ /ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೂಟದೊಂದಿಗೆ 14,000–30,000/- (ESI+PF+OT)
9164052361, 9035143190

ತಕ್ಷಣ ಬೇಕಾಗಿದ್ದಾರೆ
ಬೇಗೂರು, ತೊಂಡವಾಡಿ, ಸಿಂಧುವಳ್ಳಿಪುರ ಸುತ್ತಮುತ್ತ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ: 16000/- ವಯೋಮಿತಿ: 50 ವರ್ಷದೊಳಗೆ. ESI ಮತ್ತು PF ಊಟ ತಿಂಡಿ ಸೌಲಭ್ಯವಿರುತ್ತದೆ
9620667819
9880727819

ತಕ್ಷಣ ಬೇಕಾಗಿದ್ದಾರೆ
ಬೋಗಾದಿ ಟಿ.ಕೆ.ಲೇಔಟ್ ಸುತ್ತಮುತ್ತ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ: 14000/-
ವಯೋಮಿತಿ: 50 ವರ್ಷದೊಳಗೆ
ESI ಮತ್ತು PF ಸೌಲಭ್ಯವಿರುತ್ತದೆ
9620777819
9880727819

ಇಂದೇ ಸಂಪರ್ಕಿಸಿ
ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೊಸದಾಗಿ ತೆರೆದಿರುವ ಕಂಪನಿಯೊಂದಕ್ಕೆ 156 ವಿವಿಧ ಪೋಸ್ಟ್‌ಗಳಿಗೆ SSLC, PUC, ITI, Degree ಆಗಿರುವ ಉತ್ಸಾಹಿ ಯುವಕ /ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೂಟದೊಂದಿಗೆ 14,000–30,000/- (ESI+PF+OT)
6364103418, 6366141586

Free ಅಡ್ಮಿಷನ್
3 ರಿಂದ 9ನೇ ತರಗತಿ ವರೆಗೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಪ್ ಸಹಿತ ರಿಯಾಯಿತಿ ಶುಲ್ಕದಲ್ಲಿ English Medium (State Syllabus) ವಿಭಾಗದಲ್ಲಿ ಕೆಲವೇ ಸೀಟುಗಳು ಲಭ್ಯವಿದೆ.
ಜ್ಞಾನ ಗಂಗೋತ್ರಿ ಕಾನ್ವೆಂಟ್
ರಾಜೇಂದ್ರ ನಗರ, ಮೈಸೂರು
9243580672

ಸೈಟುಗಳು ಮಾರಾಟಕ್ಕಿವೆ
ಇಲವಾಲ, ಮೈಸೂರು ಸ್ಕೈಟಾಪ್ ಲೇಔಟ್
30x40 ಪೂರ್ವ/ದಿಕ್ಕು (22 ಲಕ್ಷ)
2) ನಿತ್ಯಾನಂದ ಸಾಗರ –01
30x42 ಪೂರ್ವ & ಉತ್ತರ (32 ಲಕ್ಷ)
3) ಕುಬೇರಾನಂದ ಸಾಗರ
30x40 ದಕ್ಷಿಣ ದಿಕ್ಕು – (26 ಲಕ್ಷ)
ಸಂಪರ್ಕಿಸಿ: ಪ್ರದೀಪ್‌ಗೌಡ
8553540950

ಹೊಸ ಮನೆ ಮಾರಾಟಕ್ಕಿದೆ
ವಸಂತನಗರ
City ಯಿಂದ- 6 K.M, 20x30-G/F, 2BHK, First/ Floor 1 Room, Kicthen & Bathroom, 65 Lakhs
7676821060

ನಿವೇಶನ ಮಾರಾಟಕ್ಕಿದೆ
30x50 ಅಳತೆ, ಪೂರ್ವ ದಿಕ್ಕು ಶಿವರಾತ್ರಿ ರಾಜೇಂದ್ರ ನಗರ, ಟಿನರಸೀಪುರ ರಸ್ತೆ, (NH-766) ಮೈಸೂರು.
ಕೆ.ಆರ್.ಸರ್ಕಲ್‌ನಿಂದ 10 ಕಿಮೀ
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
ಸಂಪರ್ಕಿಸಬೇಕಾದ ನಂಬರ್
9620657853

ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ (12,000+ESI, PF+ WEEK OFF)
ಸೆಕ್ಯೂರಿಟಿ ಗಾರ್ಡ್ (10,000+ESI, PF + WEEK OFF)
ನೈಟ್ ಸೆಕ್ಯೂರಿಟಿ ಗಾರ್ಡ್ (8,000+ESI, PF)
ಸ್ಥಳ: ಲಲಿತಾದ್ರಿಪುರ, ರಾಧಾಕೃಷ್ಣನಗರ
9886219793

ಮನೆ ಭೋಗ್ಯಕ್ಕೆ ಇದೆ
1) 2 ರೂಮ್ ಇರುವ ಮನೆ 4 ಲಕ್ಷಕ್ಕೆ ಭೋಗ್ಯಕ್ಕೆ ಖಾಲಿ ಇದೆ ಮತ್ತು ಬಾಡಿಗೆಗೆ ದೊರೆಯುತ್ತದೆ. ಕೆಸರೆ 3ನೇ ಹಂತ, ನಾಯ್ಡು ನಗರ
2) ಕಛೇರಿಗೆ ಆನ್‌ಲೈನ್ ಕೆಲಸ ಮಾಡಲು ಬೇಕಾಗಿದ್ದಾರೆ.
ಸಂಪರ್ಕಿಸಿ: ಆನರಿದ್
9482136128

2 BHK MUDA APPROVED 30x40
NEW HOUSE FOR SALE
NEAR ST. JOSEPH SCHOOL, ILWALA, MYSORE.
8217851695

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೂರನೇ ಪುಟದಿಂದ

'ಶಕ್ತಿ' ಯೋಜನೆಗೆ ಚಾಲನೆ

ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಇತರ ಗಣ್ಯರು ಸಾರಿಗೆ ಬಸ್‌ನಲ್ಲೇ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ತೆರಳಿ, ಅಲ್ಲಿ ಮಹಿಳೆಯರಿಗೆ ಉಚಿತ ಟಿಕೆಟ್ ನೀಡಿದರು. ಈ ವೇಳೆ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಇಂಧನ ಸಚಿವ ಕೆ.ಜೆ.ಜಾರ್ಜ್, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಕಂದಾಯ ಸಚಿವ ಕೃಷ್ಣಭೈರೇಗೌಡ, ಶಾಸಕ ರಿಜ್ವಾನ್ ಹರ್ಷದ್, ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಸಾರಿಗೆ ಇಲಾಖೆ ಕಾರ್ಯದರ್ಶಿ ಎನ್.ವಿ.ಪ್ರಸಾದ್, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅನ್ಬುಕುಮಾರ್, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸತ್ಯವತಿ ಉಪಸ್ಥಿತರಿದ್ದರು.

ಗ್ಯಾರಂಟಿ ಈಡೇರಿಸುತ್ತೇವೆ

ಯಾರಿಗೆ ನೀಡುತ್ತಿದ್ದೇವೆ ಎಂಬುದು ಮುಖ್ಯ. ಬಡವರ ಜೇಬಲ್ಲಿ ಹಣವಿದ್ದರೆ ಸತ್ಕಾರ್ಯಕ್ಕೆ ಉಪಯೋಗವಾಗುತ್ತದೆ. ಶ್ರೀಮಂತರಲ್ಲಿ ಇರುವ ಹಣ ಬೇರೆ ಯಾರಿಗೂ ಉಪಯೋಗಕ್ಕೆ ಬರುವುದಿಲ್ಲ. ನಮ್ಮ ಸರ್ಕಾರ ಬಡವರ ಜೇಬಿಗೆ ಹಣ ಹಾಕುವ ಕೆಲಸವನ್ನು ಮಾಡುತ್ತಿದೆ ಎಂದರು. ಮಹಿಳಾ ಸಬಲೀಕರಣಕ್ಕಾಗಿ ಶಕ್ತಿ ಯೋಜನೆ ಜಾರಿ ಮಾಡಿದ್ದೇವೆ. ಸಾರ್ವಜನಿಕ ವಲಯದಲ್ಲಿ ಮಹಿಳೆಯರು ಹೆಚ್ಚು ಭಾಗಿಯಾಗಬೇಕು. 5 ಗ್ಯಾರಂಟಿಗಳ ಪೈಕಿ 4 ಗ್ಯಾರಂಟಿಗಳಿಂದ ಮಹಿಳೆಯರಿಗೆ ಅನುಕೂಲವಾಗಲಿದೆ. ಗ್ಯಾರಂಟಿಗಳ ಟೀಕೆಗೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ. ಜುಲೈ 1ರಿಂದ ಗೃಹಜ್ಯೋತಿ ಯೋಜನೆಯನ್ನು ಜಾರಿ ಮಾಡುತ್ತಿದ್ದೇವೆ ಎಂದರು. ಇದೇ ವೇಳೆ ಅನ್ನಭಾಗ್ಯ ಯೋಜನೆ ಕುರಿತು ಸ್ಪಷ್ಟನೆ ನೀಡಿದ ಸಿದ್ದರಾಮಯ್ಯ ಅವರು, ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್, ಅಂತ್ಯೋದಯ ಕಾರ್ಡ್‌ನವರಿಗೆ 10 ಕೆಜಿ ಅಕ್ಕಿ ನೀಡುತ್ತೇವೆ. ಅನ್ನಭಾಗ್ಯ ಯೋಜನೆಗೆ 10 ಸಾವಿರದ ನೂರು ಕೋಟಿ ಖರ್ಚಾಗುತ್ತದೆ ಎಂದು ಹೇಳಿದರು.

ತಮ್ಮ ಭಾಷಣದ ವೇಳೆ 'ಶಕ್ತಿ' ಎಂದು ಹೆಸರು ಇಟ್ಟಿದ್ದು ಯಾಕೆ ಎಂಬುದನ್ನು ಸಿಎಂ ಸಿದ್ದರಾಮಯ್ಯ ಬಹಿರಂಗಪಡಿಸಿದರು. ಹೆಣ್ಣುಮಕ್ಕಳಿಗೆ ಶಕ್ತಿ ತುಂಬಲು ಈ ಯೋಜನೆಗೆ 'ಶಕ್ತಿ' ಎಂದು ಹೆಸರು ಇಟ್ಟೆವು. 5 ಗ್ಯಾರಂಟಿ ಪೈಕಿ 4 ಗ್ಯಾರಂಟಿ ಮಹಿಳೆಯರಿಗೆ ಸಂಬಂಧಿಸಿದೆ. ಕೆಲವರು ಇದಕ್ಕೆ ಗೇಲಿ ಮಾಡಿ, ಕುಹಕದ ಮಾತಾಡುತ್ತಾರೆ. ಇದಕ್ಕೆ ನಾವು ತಲೆ ಕೆಡಿಸಿಕೊಳ್ಳಲ್ಲ. ಗೇಲಿ ಮಾಡುವವರಿಗೆ, ಕುಹಕ ಮಾತನಾಡುವವರಿಗೆ ಸೊಪ್ಪು ಹಾಕಲ್ಲ ಎಂದು ಹೇಳಿದರು. ಸಮಾಜ ಅಭಿವೃದ್ಧಿ ಪಥದಲ್ಲಿ ಸಾಗಬೇಕಾದ್ರೆ ಪುರುಷರಷ್ಟೆ ಮಹಿಳೆಯರಿಗೆ ಅವಕಾಶ ಸಿಗಬೇಕು. ಆಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ. ಇಲ್ಲದೆ ಹೋದರೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಯಾವುದೇ ಅಭಿವೃದ್ಧಿ ಹೊಂದಿದ ದೇಶದಲ್ಲಿ ಮಹಿಳೆಯರೇ ಹೆಚ್ಚು ಅವಕಾಶ ಪಡೆಯುತ್ತಿದ್ದಾರೆ. ಅಮೆರಿಕಾ, ಚೀನ, ಆಸ್ಟ್ರೇಲಿಯ, ಇಂಡೋನೇಷ್ಯಾ, ಬಾಂಗ್ಲಾದೇಶದಲ್ಲಿ ಹೆಚ್ಚು ಮಹಿಳೆಯರು ಸಾರ್ವಜನಿಕ ಕ್ಷೇತ್ರದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಭಾರತದಲ್ಲಿ ಶೇ.24ರಷ್ಟು ಮಹಿಳೆಯರು ಮಾತ್ರ ಸಾರ್ವಜನಿಕ ಕ್ಷೇತ್ರದಲ್ಲಿ ಇದ್ದಾರೆ. 2014ರಲ್ಲಿ ಶೇ.30ರಿಂದ ಶೇ.24ಕ್ಕೆ ಇಳಿದಿದೆ. ಇದನ್ನು ಮಹಿಳೆಯರು ಅರ್ಥ ಮಾಡಿಕೊಳ್ಳಬೇಕು. ಮಹಿಳೆಯ ಬಗ್ಗೆ ಮೊಸಳೆ ಕಣ್ಣೀರು ಸುರಿಸುವವರ ಕಾಲದಲ್ಲಿ ಶೇ.30ರಿಂದ ಶೆ.24ಕ್ಕೆ ಮಹಿಳೆ ಪಾಲ್ಗೊಳ್ಳುವಿಕೆ ಇಳಿದಿದೆ. ಮನುವಾದಿಗಳು ಬಯಸುವುದೇ ಅದನ್ನು. ಹೆಣ್ಣು ಮಕ್ಕಳು ಹೊರಗೆ ಬರಬಾರದು ಎಂಬುದು ಮನುವಾದಿಗಳ ಆಸೆ. ಯಾವ ದೇಶದಲ್ಲಿ ಹೆಚ್ಚು ಮಹಿಳೆಯರು ಸಾರ್ವಜನಿಕ ಕ್ಷೇತ್ರದಲ್ಲಿ ಇರುತ್ತಾರೋ ಆ ದೇಶ ಅಭಿವೃದ್ಧಿ ಆಗುತ್ತದೆ ಎಂದರು.

ಕೆಲಸಗಳು ಉಳಿಯುತ್ತವೆ

ಅಧಿಕೃತವಾಗಿ ಚಾಲನೆ ನೀಡಲಾಯಿತು. ಬಳಿಕ ಮಾತನಾಡಿದ ಡಿಕೆ ಶಿವಕುಮಾರ್ ಅವರು, ಚುನಾವಣೆ ಸಂದರ್ಭದಲ್ಲಿ ರಾಜ್ಯದ ಜನರಿಗೆ 5 ಗ್ಯಾರಂಟಿ ಕೊಟ್ಟಿದ್ದೇವು. ಇಂದು ಶಕ್ತಿ ಯೋಜನೆಗೆ ಚಾಲನೆ ನೀಡಿದ್ದೇವೆ. ಟೀಕೆಗಳು ಸಾಯುತ್ತವೆ, ಕೆಲಸಗಳು ಮಾತ್ರ ಉಳಿಯುತ್ತದೆ ಎಂದು ಹೇಳಿದರು. ಬಿಜೆಪಿ, ಜೆಡಿಎಸ್ ಸ್ನೇಹಿತರು ಟೀಕೆಗಳ ಸುರಿಮಳೆ ಸುರಿಸ್ತಿದ್ದಾರೆ. ವಿಪಕ್ಷಗಳಿಗೆ ಉತ್ತರ ನೀಡುವ ಸಾಮರ್ಥ್ಯ ನಮ್ಮ ಬಳಿ ಇಲ್ಲ. ಮಂಗಳೂರಿನಲ್ಲಿ ಶಕ್ತಿ ಯೋಜನೆಯನ್ನು ಘೋಷಣೆ ಮಾಡಿದ್ದೆವು. ಬಹಳ ಚರ್ಚೆ ಮಾಡಿಯೇ ಶಕ್ತಿ ಯೋಜನೆ ಜಾರಿ ಮಾಡಿದ್ದೇವೆ. ನಮ್ಮ ರಾಜ್ಯ ದಿವಾಳಿ ಆಗುತ್ತೆ ಅಂತಾ ಬಿಜೆಪಿಯವರು ಹೇಳುತ್ತಿದ್ದಾರೆ.. ಆದರೆ ಅದಕ್ಕೆ ಆಸ್ಪದ ನೀಡುವುದಿಲ್ಲ.. ಪ್ರತಿಯೊಂದಕ್ಕೂ ಲೆಕ್ಕ ಇಡುತ್ತೇವೆ.. ಕೆಎಸ್ ಆರ್ ಟಿಸಿ ಮತ್ತು ಬಿಎಂಟಿಸಿ ಸಂಸ್ಥೆಗಳು ನಮ್ಮ ಹೆಮ್ಮೆಯ ಸಂಸ್ಥೆಗಳು.. ಅವುಗಳಿಗೆ ನಷ್ಟವಾಗಲು ಬಿಡುವುದಿಲ್ಲ. ಪ್ರತೀಯೊಂದಕ್ಕೆ ಲೆಕ್ಕ ಇಟ್ಟು ಸರ್ಕಾರದ ವತಿಯಿಂದ ಆ ಹಣವನ್ನು ನೀಡುತ್ತೇವೆ ಎಂದರು.

ಬಸ್ ಏರಿದ ಅಜ್ಜಿ

ಪ್ರವೇಶ ಮಾಡಿದ್ದರು. ಬಸ್ ಹೊರಡುವಾಗಲೂ 'ಉಧೋ ಉಧೋ' ಎಂದು ಜಯಘೋಷ ಕೂಗಿ ನಿಂಗವ್ವ ಸಂಭ್ರಮಿಸಿದ್ದಾರೆ.

ಸಿದ್ದರಾಮಯ್ಯ ಟ್ವೀಟ್: ನಾವು ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯ ಘೋಷಿಸಿದಾಗ ಶ್ರಮಪಡದೆ ಸಮಾಜದ ಎಲ್ಲಾ ವಿಧದ ಸೌಲಭ್ಯಗಳನ್ನು ಕೂತಲ್ಲಿಯೇ ಅನುಭವಿಸುತ್ತಿರುವ ಜನರಿಂದ ತರತರನಾದ ಟೀಕೆಗಳು, ಕುಹಕ, ವ್ಯಂಗ್ಯಗಳು ವ್ಯಕ್ತವಾದವು. ಅದ್ಯಾವುದಕ್ಕೂ ತಲೆಕೆಡಿಸಿಕೊಳ್ಳದೆ ಇಂದು ಶಕ್ತಿ ಯೋಜನೆಯನ್ನು ಜಾರಿಗೆ ಕೊಟ್ಟೆವು. ನಮ್ಮ ಯೋಜನೆ ಜಾರಿಗೊಂಡ ನಂತರ ತಾಯಿಯೊಬ್ಬರು ಧಾರವಾಡ ಬಸ್ ನಿಲ್ದಾಣದಲ್ಲಿ ಬಸ್ಸಿಗೆ ನಮಸ್ಕರಿಸಿ ಅತ್ಯಂತ ಸಂತೋಷದಿಂದ ಉಚಿತ ಪ್ರಯಾಣ ಬೆಳೆಸಿದರು.

ನಾವು ಎಷ್ಟು ಅನುದಾನ ಖರ್ಚು ಮಾಡುತ್ತೇವೆ ಎನ್ನುವುದಕ್ಕಿಂತ ಯಾರಿಗಾಗಿ ಆ ಹಣ ವಿನಿಯೋಗಿಸುತ್ತಿದ್ದೇವೆ ಎಂಬುದು ಮುಖ್ಯ. ಈ ಕ್ಷಣ ಇನ್ನೂ ನೂರು ವಿಧದಲ್ಲಿ ಟೀಕೆಗಳು ಎದುರಾದರೂ ಅದ್ಯಾವುದಕ್ಕೂ ಕುಗ್ಗದಂತೆ ನನ್ನನ್ನು ಗುರಿಯೆಡೆಗೆ ಮತ್ತಷ್ಟು ದೃಢವಾಗಿಸಿದೆ. ಯೋಜನೆ ಜಾರಿಗೆ ಕೊಟ್ಟ ನನಗೆ ಸಂತೃಪ್ತಿ ನೀಡಿದ ಜೊತೆಗೆ ಬಹುಕಾಲ ನೆನಪಿನಲ್ಲಿ ಉಳಿಯುವ ಚಿತ್ರವಿದು ಎಂದು ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ.

ಮೈಸೂರಲ್ಲೂ ಶಕ್ತಿಗೆ ಚಾಲನೆ

ಮಹಿಳಾ ಸಿಬ್ಬಂದಿಗಳ ಸಂಭ್ರಮ: ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಕಾರ್ಯಕ್ರಮದ ಚಾಲನೆ ವೇಳೆ ಸಾರಿಗೆ ಸಂಸ್ಥೆಯ ಮಹಿಳಾ ಸಿಬ್ಬಂದಿಗಳ ಸಂಭ್ರಮ ಎದ್ದು ಕಾಣುತ್ತಿತ್ತು. ಸೀರೆ ಉಟ್ಟು ಸಂಭ್ರಮದಿಂದಲೇ ಕಾರ್ಯಕ್ರಮಕ್ಕೆ ಆಗಮಿಸಿದ್ದ ಮಹಿಳಾ ಸಿಬ್ಬಂದಿ ಬಸ್‌ಗೆ ಪೂಜೆ ಮಾಡುವ ಮೂಲಕ ಅಭಿಮಾನ ಪ್ರದರ್ಶಿಸಿದರು. ಅಲ್ಲದೆ, ಸಚಿವರು ಹಾಗೂ ಮುಖಂಡರು ಮಹಿಳಾ ಪ್ರಯಾಣಿಕರಿಗೆ ಉಚಿತ ಟಿಕೆಟ್ ನೀಡುವ ಸಂದರ್ಭದಲ್ಲೂ ಸಕ್ರಿಯವಾಗಿ ಪಾಲ್ಗೊಂಡು ಸಂಭ್ರಮಿಸಿದರು.

ಧನ್ಯತಾ ಭಾವ: ರಾಜ್ಯದಾದ್ಯಂತ ಮಧ್ಯಾಹ್ನ 1 ಗಂಟೆ ನಂತರ ಮಹಿಳಾ ಪ್ರಯಾಣಿಕರಿಗೆ ಉಚಿತ ಬಸ್ ಪ್ರಯಾಣದ ವ್ಯವಸ್ಥೆ ಜಾರಿಗೊಳ್ಳುವ ವಿಚಾರ ತಿಳಿದಿದ್ದರೂ ಸಹ, ಉಚಿತ ಪ್ರಯಾಣಕ್ಕಾಗಿ ಯಾರೂ ಕೂಡ ಕಾಯದೆ, ಬೆಳಗ್ಗಿನಿಂದ ಮಧ್ಯಾಹ್ನದವರೆಗೂ ವಿವಿಧ ನಗರಗಳಿಗೆ ಪ್ರಯಾಣಿಸುವ ಮಹಿಳಾ ಪ್ರಯಾಣಿಕರು ಟಿಕೆಟ್ ಖರಿದಿಸಿಯೇ ಪ್ರಯಾಣಿಸಿದರು. ಪ್ರಯಾಣಕ್ಕೂ ಮುನ್ನ ಶಕ್ತಿ ಯೋಜನೆಗಾಗಿ ಸಿದ್ದತೆಗೊಳ್ಳುತ್ತಿದ್ದ ಬಸ್ ಮುಂದೆ ಫೋಟೋ ತೆಗೆಸಿಕೊಂಡು ಸಂಭ್ರಮಿಸುತ್ತಿದ್ದ ದೃಶ್ಯ ಕಂಡು ಬಂದಿತು.

ಮಧ್ಯಾಹ್ನದ 1 ಗಂಟೆಯ ನಂತರ ಉಚಿತ ಪ್ರಯಾಣದ ಟಿಕೆಟ್ ಪಡೆದ ಮಹಿಳಾ ಪ್ರಯಾಣಿಕರು ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಮೇಲೆ ಧನ್ಯತಾ ಭಾವ ವ್ಯಕ್ತಪಡಿಸಿದರು. ಸರ್ಕಾರ ಒಳ್ಳೆ ಕೆಲಸ ಮಾಡಿದೆ. ಕೂಲಿ ಕಾರ್ಮಿಕರು, ಮನೆಗೆಲಸಕ್ಕೆ ಬರುವವರಿಗೆ ಉಚಿತ ಪ್ರಯಾಣ ನೆರವಾಗುತ್ತದೆ. ಇದರಿಂದ ಬಡವರ ಪರ ನಿಲುವು ತಾಳಿರುವ ರಾಜ್ಯ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿ, ಹಸನ್ಮುಖಿಯಾಗಿ ಪ್ರಯಾಣಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಕೆ.ಹರೀಶ್ ಗೌಡ ವಹಿಸಿದ್ದರು. ಈ ಸಂದರ್ಭದಲ್ಲಿ ಶಾಸಕರಾದ ತನ್ವೀರ್‌ಸೇಠ್, ವಿಧಾನ ಪರಿಷತ್ ಸದಸ್ಯರಾದ ಅಡಗೂರು ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಮರಿತಿಬ್ಬೇಗೌಡ, ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ, ಜಿ.ಪಂ. ಸಿಇಓ ಕೆ.ಎಂ.ಗಾಯತ್ರಿ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೂತ್, ಜಿಲ್ಲಾ ಎಸ್ಪಿ ಸೀಮಾ ಲಾಟ್ಕರ್, ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಮರೀಗೌಡ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು. ಅವರು ಬಸ್‌ನಲ್ಲಿ ಕುಳಿತು ಸಚಿವ ಡಾ.ಎಚ್.ಸಿ.ಮಹದೇವಪ್ಪರಿಗೆ ಸಾಥ್ ನೀಡಿದರು.

ಸಾರಿಗೆ ಸಿಬ್ಬಂದಿಗೆ ತರಬೇತಿ

ಅವುಗಳಲ್ಲಿ 248 ಬಸ್ ನಗರ ಪ್ರದೇಶದಲ್ಲೂ, 246 ಬಸ್‌ಗಳು ಜಿಲ್ಲಾ ಭಾಗಕ್ಕೆ ಸಂಚರಿಸಲಿವೆ. 372 ಬಸ್‌ಗಳು ಎಕ್ಸ್‌ಪ್ರೆಸ್ ಬಸ್‌ಗಳಾಗಿದ್ದರೆ, 72 ಬಸ್‌ಗಳು ಅಂತರ ರಾಜ್ಯ ಬಸ್‌ಗಳಾಗಿವೆ. ಮೈಸೂರು ಬಸ್ ನಿಲ್ದಾಣದಿಂದ ಕೇರಳ, ತಮಿಳುನಾಡಿಗೆ ಸಂಚರಿಸುವ ಅಂತರಾಜ್ಯ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರವೇಶಾವಕಾಶ ಇರುವುದಿಲ್ಲ. ಊಟಿ, ಕೊಯಮತ್ತೂರು, ಈರೋಡ್, ಸೇಲಂ, ಕ್ಯಾಲಿಕಟ್, ಮಣಪುರಂ, ವೈಯ್ನಾಡ್ ಸೇರಿದಂತೆ ಇನ್ನಿತರ ನಗರಗಳಿಗೆ ತೆರಳುವ ಬಸ್‌ನಲ್ಲಿ ಉಚಿತ ಪ್ರಯಾಣ ಇರುವುದಿಲ್ಲ. ಆದರೆ, ಮಾನಂದವಾಡಿ ಬಸ್‌ನಲ್ಲಿ ಕೇರಳ ಗಡಿ ಬಾವಲಿವರೆಗೆ ಮಹಿಳೆಯರು ಉಚಿತವಾಗಿ ಬಸ್‌ನಲ್ಲಿ ಪ್ರಯಾಣಿಸಲು ಅವಕಾಶ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ಸಿದ್ದರಾಮಯ್ಯ ಹೆಗಲಿಗೆ?

ಸಾಮಾನ್ಯವಾಗಿ, ಸಮಿತಿಯ ಅತ್ಯಂತ ಹಿರಿಯ ಸದಸ್ಯರನ್ನು ಸಂಚಾಲಕ ಆಗಿ ನೇಮಿಸುವ ಪರಿಪಾಠ ಇದೆ. ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಣಕಾಸು ಖಾತೆಯನ್ನು ತಮ್ಮಲ್ಲಿಯೇ ಇರಿಸಿಕೊಂಡಿರುವ ಕಾರಣ, ಅವರನ್ನೇ ಸಂಚಾಲಕರಾಗಿ ನೇಮಿಸುವ ಸಾಧ್ಯತೆಯೂ ಇದೆ ಎಂದು ಮೂಲಗಳು ತಿಳಿಸಿವೆ. ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಇರುವ ತೆರಿಗೆ ಹಂತಗಳನ್ನು ಸರಳಗೊಳಿಸುವುದು, ವಿನಾಯಿತಿ ಪಟ್ಟಿಯಲ್ಲಿರುವ ಉತ್ಪನ್ನಗಳು ಹಾಗೂ ಸೇವೆಗಳನ್ನು ಪರಿಶೀಲನೆಗೆ ಒಳಪಡಿಸುವುದು ಹಾಗೂ ಜಿಎಸ್‌ಟಿ ವರಮಾನವನ್ನು ಹೆಚ್ಚಿಸುವುದು ಈ ಸಮಿತಿಯ ಹೊಣೆ.

ಬಿಜೆಪಿ ಆಡಳಿತದಲ್ಲಿ ಜಾರಿಯಾದ ಮೂರು ಕಾಯ್ದೆ ಹಿಂಪಡೆಯಲು ಒತ್ತಾಯ

ಜೂ.15ರಂದು ರೈತಾಗ್ರಹ ಧರಣಿ

ರಾಜ್ಯಾದ್ಯಂತ ಜಿಲ್ಲಾಧಿಕಾರಿಗಳ ಕಚೇರಿ ಎದುರು ಹೋರಾಟ



ಮೈಸೂರು, ಜೂ.11(ಪಿಎಂ)– ಹಿಂದಿನ ರಾಜ್ಯ ಬಿಜೆಪಿ ಸರ್ಕಾರ ಜಾರಿಗೆ ತಂದಿರುವ ರೈತ ವಿರೋಧಿ ಕಾಯ್ದೆಗಳನ್ನು ವಾಪಸ್ಸು ಪಡೆಯುವಂತೆ ಆಗ್ರಹಿಸಿ ರಾಜ್ಯ ರೈತ ಸಂಘದ ವತಿಯಿಂದ ಜೂ.15ರಂದು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಕಚೇರಿ ಎದುರು ರೈತಾಗ್ರಹ ಧರಣಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತ ವಿರೋಧಿ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ ಮತ್ತು ಜಾನುವಾರು ಹತ್ಯೆ ಪ್ರತಿಬಂಧಕ, ಸಂರಕ್ಷಣಾ ಕಾಯ್ದೆಯನ್ನು ವಾಪಸ್ಸು ಪಡೆಯುವಂತೆ ಆಗ್ರಹಿಸಿ ಅಂದು ಬೆಳಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಧರಣಿ ನಡೆಸಲಾಗುವುದು ಎಂದರು.

> ಇದು ಪ್ರತಿಭಟನೆಯಲ್ಲ. ಸರ್ಕಾರದ ವಿರುದ್ಧ ಘೋಷಣೆ ಕೂಗುವುದಿಲ್ಲ. ಸರ್ಕಾರ ಈ ಕಾಯ್ದೆಗಳನ್ನು ಹಿಂಪಡೆಯುವ ವಿಶ್ವಾಸವಿದೆ. ಆದರೆ ಆದಷ್ಟು ಶೀಘ್ರದಲ್ಲಿ ಹಿಂಪಡೆಯಬೇಕೆಂಬುದು ನಮ್ಮ ಆಗ್ರಹ. ಜೊತೆಗೆ 2013ರಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ದೇಶದಲ್ಲೇ ಮೊದಲ ಬಾರಿಗೆ ಕೃಷಿ ಬೆಲೆ ಆಯೋಗ ರಚನೆ ಮಾಡಲಾಯಿತು. ಈ ಆಯೋಗಕ್ಕೆ ಶಾಸನಾತ್ಮಕವಾದ ಅಧಿಕಾರ ಹಾಗೂ ಸ್ವಾಯತ್ತತೆ ನೀಡಬೇಕು. ಇದರೊಂದಿಗೆ ಆಯೋಗಕ್ಕೆ ಸಮರ್ಪಕ ಸೌಲಭ್ಯಗಳನ್ನು ಕಲ್ಪಿಸಬೇಕೆಂಬ ಆಗ್ರಹವೂ ಇದೆ.
> -ಬಡಗಲಪುರ ನಾಗೇಂದ್ರ

ಈ ಮೂರು ಕಾಯ್ದೆಗಳು ಕೋವಿಡ್ ಸಂದರ್ಭದಲ್ಲಿ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಜಾರಿಗೊಂಡವು. ಆಗಲೇ ರೈತರು ಬೀದಿಗಿಳಿದು ಹೋರಾಟ ನಡೆಸಿದೆವು. ಭೂ ಸುಧಾರಣೆ ತಿದ್ದುಪಡಿ ಕಾಯ್ದೆಯ ಮಸೂದೆ ಕರಡಿಗೆ ಮೈಸೂರಿನಲ್ಲಿ ಬೆಂಕಿ ಹಾಕಿ ಆಕ್ರೋಶ ವ್ಯಕ್ತಪಡಿಸಿದ್ದೆವು ಎಂದು ತಿಳಿಸಿದರು.

ಈ ಮೂರು ಕಾಯ್ದೆಗಳ ವಿರುದ್ಧ ರೈತರು, ದಲಿತರು, ಕಾರ್ಮಿಕರು ಹಾಗೂ ಪ್ರಗತಿಪರ ಸಂಘಟನೆಗಳು ನಿರಂತರ ಹೋರಾಟ ನಡೆಸುತ್ತಾ ಬಂದಿದ್ದೇವೆ ಹೋರಾಟದ ಸಂದರ್ಭದಲ್ಲಿ ಅಂದು ವಿಪಕ್ಷ ನಾಯಕರಾಗಿದ್ದ ಸಿದ್ದರಾಮಯ್ಯನವರು ಫ್ರೀಡಂ ಪಾರ್ಕ್‌ಗೆ ಆಗಮಿಸಿ ನಮ್ಮ ಹೋರಾಟದಲ್ಲಿ ಭಾಗವಹಿಸಿದ್ದರಲ್ಲದೆ, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಈ ಮೂರು ಕಾಯ್ದೆಗಳನ್ನು ಹಿಂಪಡೆಯುತ್ತೇವೆ ಎಂದು ಘೋಷಿಸಿದ್ದರು. ಕಾಂಗ್ರೆಸ್ ಪಕ್ಷ ಚುನಾವಣಾ ಪ್ರಣಾಳಿಕೆಯಲ್ಲಿಯೂ ಇದನ್ನು ಹೇಳಲಾಗಿದೆ. ಅದರಂತೆ ಮುಂದಿನ ಅಧಿವೇಶನದಲ್ಲೇ ಈ ಕಾಯ್ದೆಗಳನ್ನು ವಾಪಸ್ಸು ಪಡೆದು ರೈತ ಪರ ನೀತಿಗಳನ್ನು ರೂಪಿಸಬೇಕೆಂಬುದು ನಮ್ಮ ಆಗ್ರಹ ಎಂದು ಹೇಳಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೂ ಹೋರಾಟದಲ್ಲಿ ಭಾಗವಹಿಸಿ ಈ ಕಾಯ್ದೆಗಳ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದರು. ಅಲ್ಲದೆ, ಚುನಾವಣೆ ಪೂರ್ವದಲ್ಲಿ ರೈತ ಸಂಘಟನೆಗಳು ಬೆಂಗಳೂರಿನ ಗಾಂಧಿ ಭವನದಲ್ಲಿ ಆಯೋಜಿಸಿದ್ದ ಸಭೆಯಲ್ಲಿಯೂ ಭಾಗವಹಿಸಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಈ ಕಾಯ್ದೆಗಳನ್ನು ಹಿಂಪಡೆಯುವುದಾಗಿ ಘೋಷಣೆ ಮಾಡಿದ್ದರು. ಜೊತೆಗೆ ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆ ಮುಖ್ಯಸ್ಥ ಪ್ರೊ.ರಾಧಾಕೃಷ್ಣ ಕೂಡ ಸಭೆಯಲ್ಲಿ ಹಾಜರಿದ್ದು ಪ್ರಮಾಣ ಪತ್ರಕ್ಕೆ ಸಹಿ ಕೂಡ ಮಾಡಿದ್ದಾರೆ. ಅಂತೆಯೇ ಹಿಂಪಡೆಯುವ ವಿಶ್ವಾಸವಿದೆ. ಆದರೆ ಅದು ಶೀಘ್ರದಲ್ಲಿ ಆಗಬೇಕು. ಅಂದು ಮೈಸೂರು ಜಿಲ್ಲಾಧಿಕಾರಿಗಳ ಸಿದ್ಧಾರ್ಥನಗರದ ನೂತನ ಕಚೇರಿ ಎದುರು ಧರಣಿ ನಡೆಸಲು ಉದ್ದೇಶಿಸಿದ್ದೇವೆ ಎಂದು ತಿಳಿಸಿದರು.

ಸಂಘದ ರಾಜ್ಯ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ನೇತ್ರಾವತಿ, ಮುಖಂಡರಾದ ನಾಗನಹಳ್ಳಿ ವಿಜಯೇಂದ್ರ, ಮಂಡಕಳ್ಳಿ ಮಹೇಶ್, ವಿರೂಪಾಕ್ಷ, ಮೈಸೂರು–ಕುಶಾಲನಗರ ಹೆದ್ದಾರಿ ಯೋಜನೆಗೆ ಭೂಮಿ ನೀಡಲಿರುವ ರೈತರಾದ ಅವಿನಾಶ್, ಸಂದೀಪ್, ಗುಜ್ಜೇಗೌಡ ಗೋಷ್ಠಿಯಲ್ಲಿದ್ದರು.

ಮೈಸೂರು–ಕುಶಾಲನಗರ ಹೆದ್ದಾರಿ ನಿರ್ಮಾಣ

ರೈತರ ಭೂಮಿಗೆ ತಾರತಮ್ಯವಿಲ್ಲದೇ ಸೂಕ್ತ ಪರಿಹಾರ ನೀಡಬೇಕು

ಮೈಸೂರು, ಜೂ.11(ಪಿಎಂ)– ಮೈಸೂರು–ಕುಶಾಲನಗರ ಚತುಷ್ಪಥ ಹೆದ್ದಾರಿ ನಿರ್ಮಾಣ ಕಾಮಗಾರಿ ಸಂಬಂಧ ಸ್ವಾಧೀನಪಡಿಸಿಕೊಳ್ಳುವ ರೈತರ ಭೂಮಿಗೆ ನೀಡುವ ಪರಿಹಾರದ ಮೊತ್ತವನ್ನು ಪುನರ್ ಪರಿಷ್ಕರಿಸಿ, ಯಾವುದೇ ತಾರತಮ್ಯ ಇಲ್ಲದೇ ಸೂಕ್ತ ಪರಿಹಾರ ನೀಡಬೇಕು ಎಂದು ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಹಾರ ನೀಡುವುದರಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಒಂದು ಜಮೀನಿಗೆ 28 ಲಕ್ಷ ರೂ. ಬೆಲೆ ನಿಗದಿ ಮಾಡಿದ್ದರೆ ಪಕ್ಕದಲ್ಲೇ ಇರುವ ಮತ್ತೊಂದು ಜಮೀನಿಗೆ ಕೇವಲ 9 ಲಕ್ಷ ರೂ. ಬೆಲೆ ನಿಗದಿ ಮಾಡಲಾಗಿದೆ. ಈ ರೀತಿ ಹಲವು ಜಮೀನುಗಳ ವಿಚಾರದಲ್ಲಿ ತಾರತಮ್ಯ ಮಾಡಲಾಗಿದೆ. ಒಂದೇ ಉದ್ದೇಶಕ್ಕೆ ಸ್ವಾಧೀನಪಡಿಸಿಕೊಳ್ಳುವ ಜಮೀನುಗಳು ಅಕ್ಕಪಕ್ಕದ ಗ್ರಾಮಗಳಲ್ಲಿದ್ದರೂ ಒಂದೇ ರೀತಿಯ ಪರಿಹಾರ ನೀಡಬೇಕೆಂದು ಸುಪ್ರೀಂಕೋರ್ಟ್ ಮಾರ್ಗಸೂಚಿ ಇದೆ ಎಂದು ತಿಳಿಸಿದರು.

ಎಕರೆಗೆ 4 ಕೋಟಿ ನೀಡಬೇಕು ಎಂಬುದು ನಮ್ಮ ಬೇಡಿಕೆಯಾಗಿದೆ. ಹಾಗಾಗಿ ಪರಿಹಾರ ಸಂಬಂಧ ಪುನರ್ ಪರಿಷ್ಕರಣೆ ಮಾಡಬೇಕು. ಇಲ್ಲವಾದರೆ ರೈತರು ಕಾಮಗಾರಿ ಆರಂಭಿಸಲು ಅವಕಾಶ ನೀಡದಿರಲು ತೀರ್ಮಾನಿಸಿದ್ದಾರೆ ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಸಾರ್ವಜನಿಕರ ಅಹವಾಲು ಸ್ವೀಕಾರ



ಮೈಸೂರು,ಜೂ.11(ಪಿಎಂ)– ಮುಖ್ಯಮಂತ್ರಿ ಆದ ಬಳಿಕ ತವರು ಜಿಲ್ಲೆ ಮೈಸೂರಿಗೆ ಮೊದಲ ಬಾರಿಗೆ ಆಗಮಿಸಿದ್ದ ಸಿದ್ದರಾಮಯ್ಯನವರು, ಭಾನುವಾರ ಬೆಳಗ್ಗೆ ಮೈಸೂರಿನ ತಮ್ಮ ನಿವಾಸದ ಬಳಿ ನೂರಾರು ಸಂಖ್ಯೆಯಲ್ಲಿ ನೆರೆದಿದ್ದ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ, ಬೆಂಗಳೂರಿಗೆ ಮರಳಿದರು.

ಇದೇ ವೇಳೆ ಮೈಸೂರು ಜಿಲ್ಲಾಧಿಕಾರಿ ಕಚೇರಿಯನ್ನು ಸಿದ್ಧಾರ್ಥನಗರದ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಿರುವ ಹಿನ್ನೆಲೆಯಲ್ಲಿ ಹಳೇ ಪಾರಂಪರಿಕ ಕಟ್ಟಡವನ್ನು ಮೈಸೂರು ವಿವಿಗೆ ನೀಡಬೇಕೆಂದು ಮುಖ್ಯಮಂತ್ರಿಗಳಿಗೆ ಹಿರಿಯ ಸಾಹಿತಿ ಪ್ರೊ.ಕೆ.ಎಸ್.ಭಗವಾನ್ ಮನವಿ ಸಲ್ಲಿಸಿದರು.

ಬಳಿಕ ರಸ್ತೆ ಮೂಲಕ ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣ ತಲುಪಿದ ಮುಖ್ಯಮಂತ್ರಿಗಳು, ಹೆಲಿಕಾಪ್ಟರ್‌ನಲ್ಲಿ ಬೆಂಗಳೂರಿಗೆ ತೆರಳಿದರು. ಅಪಾರ ಸಂಖ್ಯೆಯ ಅಭಿಮಾನಿಗಳು ಹಾಗೂ ಬೆಂಬಲಿಗರೂ ಮುಖ್ಯಮಂತ್ರಿಗಳ ಮೈಸೂರಿನ ನಿವಾಸದ ಬಳಿ ನೆರೆದಿದ್ದರು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಹಾಜರಿದ್ದರು.

ಎರಡನೇ ಬಾರಿಗೆ ಮುಖ್ಯಮಂತ್ರಿ ಆದ ಬಳಿಕ ಪ್ರಥಮ ಬಾರಿಗೆ ಮೈಸೂರು ಜಿಲ್ಲೆ ವರುಣ ಕ್ಷೇತ್ರದ ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲಾ ಮೈದಾನದ ಹೆಲಿಪ್ಯಾಡ್‌ಗೆ ಶನಿವಾರ ಮಧ್ಯಾಹ್ನ ಹೆಲಿಕಾಪ್ಟರ್‌ನಲ್ಲಿ ಆಗಮಿಸಿದ ಸಿದ್ದರಾಮಯ್ಯನವರಿಗೆ ಅದ್ದೂರಿ ಸ್ವಾಗತ ಕೋರಲಾಗಿತ್ತು.

ಬಳಿಕ ಜಿಲ್ಲೆಯ ವರುಣ ಕ್ಷೇತ್ರದ ವ್ಯಾಪ್ತಿಯ ಬಿಳಿಗೆರೆ ಗ್ರಾಮದಲ್ಲಿ ಆಯೋಜಿಸಿದ್ದ ವರುಣ ಕ್ಷೇತ್ರದ ಮತದಾರರು ಹಾಗೂ ಕಾಂಗ್ರೆಸ್ ಕಾರ್ಯಕರ್ತರ ಕೃತಜ್ಞತಾ ಸಮಾವೇಶದಲ್ಲಿ ಮುಖ್ಯಮಂತ್ರಿಗಳು ಪಾಲ್ಗೊಂಡಿದ್ದರು. ಅಲ್ಲದೆ, ಸುತ್ತೂರು ಮಠಕ್ಕೆ ತೆರಳಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದಿದ್ದರು.

ನಂತರ ಸಂಜೆ ಮೈಸೂರು ಜಿಪಂ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ನಡೆಸಿದ್ದ ಮುಖ್ಯಮಂತ್ರಿಗಳು ಬಳಿಕ ಮೈಸೂರಿನ ಟಿಕೆ ಬಡಾವಣೆಯ ತಮ್ಮ ನಿವಾಸದಲ್ಲಿ ವಾಸ್ತವ್ಯ ಹೂಡಿದ್ದರು. ಭಾನುವಾರ ಬೆಳಗ್ಗೆ ತಮ್ಮ ನಿವಾಸದ ಆವರಣದಲ್ಲಿ ನೂರಾರು ಸಂಖ್ಯೆಯಲ್ಲಿ ನೆರೆದಿದ್ದ ಸಾರ್ವಜನಿಕರಿಂದ ಮುಖ್ಯಮಂತ್ರಿಗಳು ಅಹವಾಲು ಸ್ವೀಕರಿಸಿದರು.



ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಆಲನಹಳ್ಳಿ ಬಡಾವಣೆಯ ಶ್ರೀ ಬಸವೇಶ್ವರ ಉದ್ಯಾನವನದಲ್ಲಿ ಭಾನುವಾರ ಬಸವೇಶ್ವರ ಯೋಗ ಪಾರ್ಕ್‌ನ ಸದಸ್ಯರು ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಉಪ ಮೇಯರ್ ಡಾ.ಜಿರೂಪ, ಯೋಗ ಶಿಕ್ಷಕ ಎಸ್.ನಾಗೇಶ್ ಬಾಬು, ರಾಜು, ನಾಗಣ್ಣ, ಭಾಗ್ಯ ಶಂಕರ್, ಕೋಮಲ, ಕಸ್ತೂರಿ, ಕಲಾ, ಗೀತಾ, ಲೀಲಾ ಶಿವಕುಮಾರ್, ಅಂಜನಾ, ಸುಮಲತಾ, ಜಯಲಕ್ಷ್ಮಿ, ಪಿಗೌಡ, ಬಸವರಾಜು, ಯಶೋಧ ಗೌಡ, ಬಸವರಾಜಪ್ಪ ಗಾಯತ್ರಿ ಕಾರ್ತಿಕ್ ಮತ್ತಿತರಿದ್ದರು. ಪರಿಸರ ಬಳಗದ ಸಂಸ್ಥಾಪಕ ಪರಶುರಾಮೇಗೌಡರು ಸಸಿಗಳನ್ನು ನೀಡಿದ್ದರು.

ಪೇ ಅಂಡ್ ಪಾರ್ಕ್ ಜಾರಿ ವಿರುದ್ಧ ಪ್ರತಿಭಟನೆ



ಮೈಸೂರು, ಜೂ. 11(ಸಿಎನ್)–ಪೇ ಅಂಡ್ ಪಾರ್ಕ್ ವ್ಯವಸ್ಥೆ ಅವೈಜ್ಞಾನಿಕ ಎಂದು ಆರೋಪಿಸಿ ದೇವರಾಜ ಮೊಹಲ್ಲಾ ನಿವಾಸಿಗಳು ದೇವರಾಜ ಅರಸು ರಸ್ತೆಯಲ್ಲಿ ಮೈಸೂರು ನಗರ ಪಾಲಿಕೆ ವಿರುದ್ಧ ಧಿಕ್ಕಾರ ಕೂಗಿ ಪ್ರತಿಭಟಿಸಿದರು.

ಈ ವೇಳೆ ನಗರ ಪಾಲಿಕೆ ಮಾಜಿ ಸದಸ್ಯ ನಾಗಭೂಷಣ್ ಮಾತನಾಡಿ, ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಅವೈಜ್ಞಾನಿಕವಾಗಿ ಅರಸು ರಸ್ತೆ, ಸಯ್ಯಾಜಿರಾವ್ ರಸ್ತೆ ಹಾಗೂ ಅಶೋಕ ರಸ್ತೆಗಳಲ್ಲಿ ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆ ಜಾರಿಗೊಳಿಸಲು ಕೈಗೊಂಡ ಆತುರದ ನಿರ್ಧಾರದಿಂದ ಮೈಸೂರು ಜನತೆಗೆ ಹೊರೆಯಾಗಲಿದೆ. ಈ ಕೂಡಲೇ ಪಾರ್ಕಿಂಗ್‌ಗೆ ಶುಲ್ಕ ವಿಧಿಸುವ ನಿರ್ಧಾರ ಕೈ ಬಿಡಬೇಕು ಎಂದು ಒತ್ತಾಯಿಸಿದರು.

ಶಾಸಕರ ಗಮನಕ್ಕೆ ಬಾರದೇ ಅವರ ಸಹಮತವಿಲ್ಲದೇ ತರಾತುರಿಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಇದರಿಂದಾಗಿ ದೇವರಾಜ ಮೊಹಲ್ಲಾ, ಲಷ್ಕರ್ ಮೊಹಲ್ಲಾದ ನಿವಾಸಿಗಳಿಗೆ ತೊಂದರೆಯಾಗಿದೆ. ಪಾಲಿಕೆಯ ಏಕಾಏಕಿ ನಿರ್ಧಾರ ಸಾಮಾಜಿಕ ಕಳಕಳಿಯನ್ನು ಹೊಂದಿಲ್ಲ ಎಂಬುದು ತಿಳಿಯುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಒಂದು ವರ್ಗದವರನ್ನು(ಅಂಗಡಿ ಮಾಲೀಕರು) ಓಲೈಸಿ ಅವರಿಗೆ ಅನುಕೂಲ ಮಾಡಿಕೊಡುವ ಪಾಲಿಕೆ ನಿರ್ಣಯವು, ಜನ ವಿರೋಧಿ, ಸರ್ವಾಧಿಕಾರ ಧೋರಣೆಯಾಗಿದೆ. ಅರಸು ರಸ್ತೆಯಲ್ಲಿ ಪೇ ಅಂಡ್ ಪಾರ್ಕ್ ವ್ಯವಸ್ಥೆ ಜಾರಿ ಮಾಡಿದರೆ ಈ ರಸ್ತೆಗೆ ಹೊಂದಿಕೊಂಡಂತೆ ಇರುವ ಇತರ ರಸ್ತೆಗಳಲ್ಲಿ ವಾಹನ ಸವಾರರು ಪುಕ್ಕಟೆಯಾಗಿ ವಾಹನ ಪಾರ್ಕಿಂಗ್ ಮಾಡಲು ಮುಂದಾಗುತ್ತಾರೆ. ಇದರಿಂದ ನಿವಾಸಿಗಳಿಗೆ ಬಹಳ ತೊಂದರೆ ಎದುರಾಗಲಿದೆ ಎಂದರು.

ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರು, ಸ್ಥಳೀಯ ನಿವಾಸಿಗಳಿಗೆ, ಪಾಲಿಕೆ ನಿರ್ಣಯದಿಂದಾಗುವ ಸಮಸ್ಯೆಗಳನ್ನು ತಪ್ಪಿಸಬೇಕು ಹಾಗೂ ಮುಂದೆ ಈ ರೀತಿ ಜನ ವಿರೋಧಿ ನಿರ್ಣಯಗಳನ್ನು ತೆಗೆದುಕೊಳ್ಳದಂತೆ ಪಾಲಿಕೆಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಮನವಿ ಮಾಡಿದರು. ಪ್ರತಿಭಟನೆಯಲ್ಲಿ ಮಾತೃಭೂಮಿ ಹಿತರಕ್ಷಣಾ ಸಮಿತಿ ಅಧ್ಯಕ್ಷ ವಿನಯ್ ಕುಮಾರ್, ಗುರುರಾಜ್ ಶೆಟ್ಟಿ, ಎಸ್.ಎನ್.ರಾಜೇಶ್, ರವಿಚಂದ್ರ, ನಿತಿನ್, ಹೃತಿಕ್ ಗೌಡ, ಕುಮಾರ್, ಮಂಜು, ರಾಜು ಹಾಗೂ ಇನ್ನಿತರರು ಭಾಗಿಯಾಗಿದ್ದರು.

ಅರ್ಜಿ ಆಹ್ವಾನ

ಮೈಸೂರು, ಜೂ. 11– 2023–24 ನೇ ಸಾಲಿನಲ್ಲಿ ದ್ವಿತೀಯ ವರ್ಷದ ಡಿಪ್ಲೊಮಾಗೆ ಲ್ಯಾಟರ್ ಎಂಟ್ರಿ ಮುಖಾಂತರ ಐ.ಟಿ.ಐ/ ದ್ವಿತೀಯ ಪಿ.ಯು.ಸಿ (ವಿಜ್ಞಾನ)/ ತಾಂತ್ರಿಕ ವಿಷಯಗಳಲ್ಲಿ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳಿಗೆ ದ್ವಿತೀಯ ವರ್ಷದ ಡಿಪ್ಲೊಮಾ ಪ್ರವೇಶ ಬಯಸುವ ಅಭ್ಯರ್ಥಿಗಳಿಗೆ ಜೂನ್ 20ರ ಸಂಜೆ 5.30 ರವರೆಗೆ ಮೈಸೂರಿನ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ https://dtek.karnataka.gov.in/ ವೆಬ್‌ಸೈಟ್ ಅನ್ನು ವೀಕ್ಷಿಸಬಹುದು ಎಂದು ಸರ್ಕಾರಿ ಸಿ.ಪಿ.ಸಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಧಕರಿಗೆ 'ಧ್ವನಿ ಕೊಟ್ಟ ಧಣಿ' ಪ್ರಶಸ್ತಿ ಪ್ರದಾನ



ಮೈಸೂರು, ಜೂ. 11(ಸಿಎನ್)– ಸಮಾಜದ ಏಳಿಗೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿರಿಸಿ, ಶ್ರಮಿಸಿದ ಮಹಾನ್ ಚೇತನರಾದ ಡಿ.ದೇವರಾಜ ಅರಸು, 'ರಾಜಕೀಯ ವೈದ್ಯ'ರು ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟರು.

ನಗರದ ಜೆಎಲ್‌ಬಿ ರಸ್ತೆಯ ದಿ ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ, ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ವತಿಯಿಂದ, ಮಾಜಿ ಮುಖ್ಯಮಂತ್ರಿ ದಿ.ಡಿ.ದೇವರಾಜ ಅರಸು 41ನೇ ಪುಣ್ಯಸ್ಮರಣೆ ಪ್ರಯುಕ್ತ ವಿವಿಧ ಕ್ಷೇತ್ರದ ಸಾಧಕರುಗಳಿಗೆ 'ಧ್ವನಿ ಕೊಟ್ಟ ಧಣಿ' ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮನುಷ್ಯ ಆರೋಗ್ಯವಂತನಾಗಿರುವುದೆಂದರೆ ಕೇವಲ ದೈಹಿಕ ಮತ್ತು ಮಾನಸಿಕ ಆರೋಗ್ಯ ಕ್ಷಮತೆ ಹೊಂದಿದವನಲ್ಲ. ಆತ ಸಾಮಾಜಿಕ, ದೈಹಿಕ, ಆರ್ಥಿಕವಾಗಿ ಸದೃಢನಾಗಿರುವುದು ಮುಖ್ಯ. ಆಗ ಮಾತ್ರ ಸಮಾಜ ಸುಭಿಕ್ಷವಾಗಿರಲಿದೆ. ದೇವರಾಜ ಅರಸು ಅವರು ಧ್ವನಿಯಿಲ್ಲದವರಿಗೆ ಧ್ವನಿ ನೀಡಿದವರು. ಉಳುವವನೆ ಭೂಮಿ ಒಡೆಯ ಕಾಯ್ದೆ ತಂದು ಒಂದು ರೀತಿಯ ಆರ್ಥಿಕ ಜೀತದಲ್ಲಿದ್ದ ರೈತರನ್ನು ವಿಮೋಚನೆಗೊಳಿಸಿದವರು. ಅಲ್ಲದೇ ತಲೆ ಮೇಲೆ ಮಲ ಹೊರುವ ಹೀನ ಪದ್ಧತಿಯನ್ನು ನಿರ್ಮೂಲನೆ ಮಾಡಿದರು ಎಂದರು.

ಬಳಿಕ ಅರಸು ಜಾಗೃತಿ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಎಚ್.ಎ.ವೆಂಕಟೇಶ್ ಮಾತನಾಡಿ, ದೇವರಾಜ ಅರಸು ಮೂಲತಃ ಕೃಷಿಕರು. ಅಂತವರು ಮುಖ್ಯಮಂತ್ರಿಯಾಗಿ 51 ವರ್ಷಗಳೇ ಕಳೆದಿವೆ. ಆದರೆ ಇಂದಿಗೂ ಜನರು ಅವರನ್ನು ಸ್ಮರಿಸುತ್ತಾರೆ. ಕಾರಣ, ಅವರು ಮಾಡಿದಂತ ಅಭಿವೃದ್ಧಿ ಕ್ರಾಂತಿಕಾರಿ ಕೆಲಸಗಳು. ಜನಮನ ಗೆದ್ದ ಕಾರ್ಯಕ್ರಮಗಳನ್ನು ನೀಡಿದ ನಾಯಕ, ಅವರ ಯೋಜನೆಗಳನ್ನು ನೆರೆ ರಾಜ್ಯದ ರಾಜಕಾರಣಿಗಳು ಅನುಸರಿಸುತ್ತಿದ್ದರು ಎಂದರು.

ಆರ್ಥಿಕವಾಗಿ ಸಬಲವಾಗಿರುವವರಿಗೆ ಮೀಸಲಾತಿ ನೀಡುವುದು ಮೀಸಲಾತಿ ವ್ಯವಸ್ಥೆಗೆ ಮಾಡಿದ ಅಪಮಾನ. ರಾಜ್ಯದಲ್ಲಿ ಹಿಂದುಳಿದವರಿಗೆ ನೀಡಲಾದ ಮೀಸಲಾತಿ ವ್ಯವಸ್ಥೆ ಸಮರ್ಪಕವಾಗಿಲ್ಲ. ಈ ವಿಚಾರದಲ್ಲಿ ಅರಸು ಅವರು ಸ್ಪಷ್ಟ ನಿಲುವು ಹೊಂದಿದ್ದರು. ಆನಂತರ ಬಂದ ಯಾವ ರಾಜಕಾರಣಿಗಳಿಗೂ ಮೀಸಲಾತಿ ವಿಷಯದಲ್ಲಿ ಸ್ಪಷ್ಟ ನಿಲುವು ಹೊಂದಿರಲಿಲ್ಲ. ಈಗ ಸಿದ್ದರಾಮಯ್ಯ ಅವರು ಜಾತಿ ಆಧಾರಿತ ಮೀಸಲಾತಿ ಮಾಡುತ್ತೇವೆ ಎಂದಿರುವುದು ಒಳ್ಳೆಯ ಬೆಳವಣಿಗೆ ಎಂದು ತಿಳಿಸಿದರು.

ಈ ವೇಳೆ ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ರಾಧಾಕೃಷ್ಣ ರಾಮರಾವ್, ಲೆಕ್ಕ ಪರಿಶೋಧಕ ಪಿ.ಸುಂದರ್, ಅಖಿಲ ಭಾರತ ಅಂಚೆ ಇಲಾಖೆ ಉಪಾಧ್ಯಕ್ಷ ಸಿ.ಆರ್.ರಂಗಸ್ವಾಮಿ, ಸಂಸ್ಕೃತ ವಿದ್ವಾಂಸ ಎಂ.ಎಂ.ನಾಗರಾಜಪ್ಪ, ಸುಗಮ ಸಂಗೀತ ಗಾಯಕ ಎಸ್.ಸಾಂಬಮೂರ್ತಿ, ಯೋಗಗುರು ನಂಜುಂಡರಾಜೇ ಅರಸ್ ಅವರಿಗೆ 'ಧ್ವನಿ ಕೊಟ್ಟ ಧಣಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

> ಜನರ ಒತ್ತಾಯದ ಮೇರೆಗೆ ಮುಂದಿನ ಒಂದು ವರ್ಷದ ಅವಧಿಯಲ್ಲಿ ನಗರದ ಪ್ರಮುಖ ವೃತ್ತದಲ್ಲಿ ಅರಸು ಅವರ ಪ್ರತಿಮೆ ನಿರ್ಮಾಣಕ್ಕಾಗಿ ಮುಂದಾಗಲಿದ್ದೇವೆ. ಸದ್ಯಕ್ಕೆ ವೃತ್ತವೊಂದನ್ನು ಗುರುತಿಸಿ ಅರಸು ಅವರ ಹೆಸರಿಡುವ ಬಗ್ಗೆ ಮುಂದಿನ ನಗರ ಪಾಲಿಕೆ ಸಭೆಯಲ್ಲಿ ಮಂಡಿಸಲಿದ್ದೇನೆ. ಜೊತೆಗೆ ಅರಸು ಭವನ ನಿರ್ಮಾಣಕ್ಕೂ ಸರ್ವ ಪ್ರಯತ್ನ ಮಾಡಲಾಗುವುದು.
> -ಡಾ.ಡಿ.ತಿಮ್ಮಯ್ಯ, ವಿಧಾನಪರಿಷತ್ ಸದಸ್ಯ

ಕಾರ್ಯಕ್ರಮದಲ್ಲಿ ತವರು ಅರಸು ಮಹಿಳಾ ಸಮಾಜದ ಅಧ್ಯಕ್ಷೆ ವಿಜಯಲಕ್ಷ್ಮಿ ಅರಸ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅನ್ವೇಷಣಾ ಸೇವಾ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಜಿ.ಆರ್.ಅರಸ್, ಶತಮಾನೋತ್ಸವ ಸಂಭ್ರಮದ ಅರಸು ಸಂಘದ ಅಧ್ಯಕ್ಷ ಎಚ್.ಎಂ.ಟಿ.ಲಿಂಗರಾಜೇ ಅರಸ್, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕೋದ್ಯಮಿಗಳ ಸಂಘದ ಅಧ್ಯಕ್ಷ ಲಿಂಗರಾಜು ಇದ್ದರು.



ಹೆಚ್.ಡಿ.ಕೋಟೆಯಲ್ಲೂ ಶಕ್ತಿ ಯೋಜನೆಗೆ ಶಾಸಕರ ಚಾಲನೆ

'ಗ್ಯಾರಂಟಿಗಳು' ಮಹಿಳೆಯರಿಗೆ ಅನುಕೂಲ ಕಲ್ಪಿಸಲಿದೆ

ಹೆಚ್.ಡಿ.ಕೋಟೆ, ಜೂ.11– ಸಾರ್ವಜನಿಕ ವಲಯದಲ್ಲಿ ಮಹಿಳೆಯರು ಹೆಚ್ಚು ಭಾಗಿಯಾಗಬೇಕು. ಮಹಿಳೆಯರು ಹೆಚ್ಚು ಭಾಗಿಯಾದರೆ ದೇಶ ಪ್ರಗತಿಯತ್ತ ಸಾಗುತ್ತದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಸಾರಿಗೆ ಬಸ್ ನಿಲ್ದಾಣದ ಆವರಣದಲ್ಲಿ ಸಾರಿಗೆ ಇಲಾಖೆ ಹಮ್ಮಿಕೊಂಡಿದ್ದ ಕಾಂಗ್ರೆಸ್ ಸರ್ಕಾರದ ಮಹತ್ವಪೂರ್ಣ ಗ್ಯಾರಂಟಿಯಾದ ಶಕ್ತಿ ಯೋಜನೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ಪಕ್ಷ ನಾಡಿನ ಜನರಿಗೆ ನೀಡಿದ ಐದು ಗ್ಯಾರಂಟಿ ಯೋಜನೆಗಳಲ್ಲಿ ಮೊದಲನೇ ಹಂತವಾಗಿ ಶಕ್ತಿ ಯೋಜನೆ ಜಾರಿ ಮಾಡಿದೆ. ಉಳಿದಂತೆ ಇನ್ನೂ ನಾಲ್ಕು ಯೋಜನೆಗಳನ್ನು ಹಂತಹಂತವಾಗಿ ಜಾರಿಗೆ ತರಲಾಗುತ್ತದೆ ಎಂದರು.

ಮಹಿಳೆಯರು ಶತಮಾನಗಳಿಂದ ಅವಕಾಶಗಳಿಂದ ವಂಚಿತರಾಗಿದ್ದಾರೆ. ಮಹಿಳೆಯರು ಸಮಾಜದಲ್ಲಿ ಸದೃಢವಾಗಿ ನಿಲ್ಲಲು ಮಾಡಿದ ಯೋಜನೆ ಇದಾಗಿದೆ ಎಂದ ಅವರು, ಸಾಮಾಜಿಕ, ಆರ್ಥಿಕ ಅಸಮಾನತೆಗೆ ಮಹಿಳೆಯರು ಒಳಗಾಗಿದ್ದಾರೆ. ಮಹಿಳಾ ಸಬಲೀಕರಣಕ್ಕಾಗಿ ಶಕ್ತಿ ಯೋಜನೆಯನ್ನು ಸರ್ಕಾರ ಜಾರಿ ಮಾಡಿದೆ. 5 ಗ್ಯಾರಂಟಿಗಳ ಪೈಕಿ 4 ಗ್ಯಾರಂಟಿಗಳು ಮಹಿಳೆಯರಿಗೆ ಅನುಕೂಲವಾಗಿವೆ ಎಂದರು.

ವಿರೋಧ ಪಕ್ಷದವರಿಗೆ ನಮ್ಮ ಯೋಜನೆಗಳು ಜಾರಿ ಆಗುತ್ತದೋ ಎಂಬ ಅನುಮಾನ ಇತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಜಾರಿಗೆ ತರುವ ಮೂಲಕ ಇದಕ್ಕೆ ಸರಿಯಾದ ಉತ್ತರ ನೀಡಿದೆ ಎಂದರು.

ತಾಲೂಕಿನಲ್ಲಿ ಶಕ್ತಿ ಯೋಜನೆಗೆ ಉತ್ತಮ ಸೇವೆ ನೀಡಬೇಕು, ಎಚ್.ಡಿ. ಕೋಟೆ ಬಸ್ ಘಟಕದಲ್ಲಿ 110 ಬಸ್‌ಗಳು ಇದ್ದು 90 ಬಸ್‌ಗಳು ಚಾಲನೆ ಆಗುತ್ತಿವೆ, ಯಾವುದೇ ತಾರತಮ್ಯ ಇಲ್ಲದೆ ಎಲ್ಲಾ ಮಹಿಳೆಯರು ಉಚಿತವಾಗಿ ಸಂಚರಿಸಬಹುದು ಎಂದರು.

ಘಟಕ ವ್ಯವಸ್ಥಾಪಕ ತ್ಯಾಗರಾಜು ಅವರು ಮಾತನಾಡಿ, ಐದು ಗ್ಯಾರಂಟಿ ಯೋಜನೆಯಲ್ಲಿ ಶಕ್ತಿ ಯೋಜನೆ ಪ್ರಮುಖವಾದ ಕಾರ್ಯಕ್ರಮ ಆಗಿದೆ. 11 ಲಕ್ಷ ಮಹಿಳೆಯರು ಇದರ ಸದುಪಯೋಗ ಪಡೆದುಕೊಳ್ಳಲಿದ್ದಾರೆ, ತಾಲೂಕಿಗೆ ವರ್ಷಕ್ಕೆ ಒಂದು ಕೋಟಿ ವೆಚ್ಚವಾಗಲಿದೆ. ಶಾಸಕರು ಇದನ್ನು ಭರಿಸುವ ಭರವಸೆ ಇದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಹಿಳೆಯರು ಮಾತನಾಡಿ ಈ ಯೋಜನೆ ಜಾರಿ ಮಾಡಿರುವುದರಿಂದ ತುಂಬಾ ಖುಷಿ ಆಗಿದೆ ನುಡಿದಂತೆ ನಡೆದ ಸರ್ಕಾರ, ಮಹಿಳೆಯರಿಗೆ ಹೆಚ್ಚು ಒತ್ತು ನೀಡಿದ್ದಾರೆ. ಕರ್ನಾಟಕದಾದ್ಯಂತ ಸಂಚರಿಸಲು ತುಂಬಾ ಅನುಕೂಲ ಆಗಿದೆ ಹಾಗಾಗಿ ಸರ್ಕಾರಕ್ಕೆ ಧನ್ಯವಾದಗಳು ತಿಳಿಸಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಪಿ.ಎಸ್. ಮಹೇಶ್, ಇನ್ಸ್‌ಪೆಕ್ಟರ್ ಶಬ್ಬೀರ್, ಘಟಕ ವ್ಯವಸ್ಥಾಪಕ ತ್ಯಾಗರಾಜ್, ಇಓ ಜೆರಾಲ್ಡ್ ರಾಜೇಶ್, ಹುಸೇನ್, ಪುರಸಭಾ ಸದಸ್ಯರಾದ ಎಚ್.ಸಿ.ನರಸಿಂಹಮೂರ್ತಿ, ರಾಜು ವಿಶ್ವಕರ್ಮ, ಸೋಮಶೇಖರ್, ಆಸೀಫ್, ಶಾಹೀರಾ ಬಾನು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಏಜಾಜ್ ಪಾಷ, ಮಲಗನಹಳ್ಳಿ ಮಾದಪ್ಪ ಜಿಪಂ ಮಾಜಿ ಸದಸ್ಯರುಗಳಾದ ಚಿಕ್ಕವೀರನಾಯ್ಕ ಎಚ್.ಸಿ.ಮಂಜುನಾಥ್, ಭಾಗ್ಯಲಕ್ಷ್ಮಿ, ಕುರುಬ ಸಮಾಜದ ಜಿಲ್ಲಾ ಅಧ್ಯಕ್ಷ ಶಿವಪ್ಪ ಕೋಟೆ, ತಾಲೂಕು ಅಧ್ಯಕ್ಷ ಆನಂದ್, ಮುಖಂಡ ರಾದ ಚಲುವಕೃಷ್ಣ, ನವೀನ್ ದಾಸ್, ಪ್ರದೀಪ್, ಪರಶಿವಮೂರ್ತಿ, ಪುರದ ಕಟ್ಟೆ ಬಸವರಾಜ್, ಶೈಲಾ ಸುಧಾಮಣಿ, ಅನುಷಾ, ಕೆಎಸ್‌ಆರ್‌ಟಿಸಿ ಸಿಬ್ಬಂದಿಗಳಾದ ಸಮಿ, ಜಗದೀಶ್, ಕಾರ್ಯಕರ್ತರ, ಮುಖಂಡರುಗಳು ಹಾಜರಿದ್ದರು.



'ಶಕ್ತಿ' ಸರ್ಕಾರದ ಉತ್ತಮ ಯೋಜನೆ

ಹುಣಸೂರಿನಲ್ಲಿ ಮಹಿಳೆಯರ ಉಚಿತ ಬಸ್ ಪ್ರಯಾಣಕ್ಕೆ ಶಾಸಕ ಹರೀಶ್‌ಗೌಡ ಚಾಲನೆ

ಹುಣಸೂರು, ಜೂ.11– ರಾಜ್ಯ ಸರಕಾರ ಶಕ್ತಿ ಯೋಜನೆ ಮೂಲಕ ರಾಜ್ಯದ ಹೆಣ್ಣು ಮಕ್ಕಳು ಮತ್ತು ಮಹಿಳೆಯರಿಗೆ ಎಲ್ಲೆಡೆ ಉಚಿತ ಪ್ರಯಾಣ ಮಾಡಲು ಸಾರಿಗೆ ವ್ಯವಸ್ಥೆ ಕಲ್ಪಿಸಿರುವುದು ಉತ್ತಮ ಯೋಜನೆಯಾಗಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಸಾರಿಗೆ ಬಸ್ ನಿಲ್ದಾಣದಲ್ಲಿ ಮಧ್ಯಾಹ್ನ ಮಹಿಳೆಯರಿಗಾಗಿ ಕಲ್ಪಿಸಿರುವ ರಾಜ್ಯ ಸರ್ಕಾರದ ಉಚಿತ ಶಕ್ತಿ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು, ಇತ್ತೀಚೆಗೆ ರಾಜ್ಯದ ಚುಕ್ಕಾಣಿ ಹಿಡಿದಿರುವ ಸರಕಾರ ಮಾತು ಕೊಟ್ಟಂತೆ ಜನತೆಗೆ ಭರವಸೆ ನೀಡಿರುವ ಐದು ಗ್ಯಾರಂಟಿ ಯೋಜನೆಗಳನ್ನು ಯಾವುದೇ ಷರತ್ತು ನೀಡದಂತೆ ಜಾರಿಗೊಳಿಸಬೇಕು ಎಂದರು.

ಸರಕಾರದ ಮಹತ್ವಾಕಾಂಕ್ಷೆ ಯೋಜನೆಗೆ ಸಿದ್ಧವಾಗಿದ್ದು, ಆ ಯೋಜನೆಗಳ ಪ್ರಯೋಜನವನ್ನು ಸದ್ಬಳಕೆ ಮಾಡಿಕೊಳ್ಳಬೇಕಿದೆ. ಹಾಗೆ ಸರಕಾರದ ಯೋಜನೆಯಾದ ಉಚಿತ ಸೌಲಭ್ಯವನ್ನು ಜನತಗೆ ತಲುಪಿಸುವಾಗ ಯಾವುದೇ ಕರ್ತವ್ಯ ಲೋಪ ಮಾಡದೆ ಸಾರಿಗೆ ಅಧಿಕಾರಿಗಳು ಶಕ್ತಿ ಯೋಜನೆ ವಿಫಲಗೊಳ್ಳದಂತೆ ಯಶಸ್ವಿಗೊಳಿಸಬೇಕೆಂದರು.

ಮೈಸೂರಿಗೆ ತೆರಳಿ ಬರುವ ಸಂದರ್ಭದಲ್ಲಿ ಮಾರ್ಗ ಮಧ್ಯೆ ಬರುವ ಮೂಕನಹಳ್ಳಿ, ಬನ್ನಿಕುಪ್ಪೆ, ಕೊಳಘಟ್ಟ, ಕುಪ್ಪೆಗ್ರಾಮ ಸೇರಿದಂತೆ ಇನ್ನೂ ಹಲವು ಗ್ರಾಮದ ಜನತೆಗೆ ಬಸ್ ನಿಲುಗಡೆ ಮಾಡುವಂತೆ ಡಿಪೋ ಅಧಿಕಾರಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಡಿಪೋ ಮ್ಯಾನೇಜರ್ ಬಿ.ಟಿ.ಸುಬ್ರಹ್ಮಣ್ಯ, ತಾ.ಪಂ ಕಾರ್ಯನಿರ್ವಹಣಾಧಿಕಾರಿ ಮನು, ತಹಶಿಲ್ದಾರ್ ಡಾ.ಅಶೋಕ್, ಸೂಪರ್‌ವೈಜರ್ ರಾಜೇಶ್ವರಿ, ಲೆಕ್ಕಾಧಿಕಾರಿ ಮಂಜುನಾಥ್, ಸೂಪರ್‌ವೈಜರ್ ಬಾಲಸುಬ್ರಮಣಂ ಹಾಗೂ ಇನ್ನೂ ಹಲವು ಅಧಿಕಾರಿಗಳು ಇದ್ದರು.



ಶಕ್ತಿ ಯೋಜನೆ ಜನರಿಗೆ ತಲುಪಿಸುವ ಕೆಲಸ ಮಾಡಿ

ತಿ.ನರಸೀಪುರ.ಜೂ.11– ಶಕ್ತಿ ಯೋಜನೆಯು ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾಗಿದ್ದು ಇದನ್ನು ಫಲಾನುಭವಿಗಳಿಗೆ ತಲುಪಿಸುವಂತಹ ಹೊಣೆಗಾರಿಕೆ ಅಧಿಕಾರಿಗಳ ಮೇಲಿದೆ ಎಂದು ತಹಶೀಲ್ದಾರ್ ಸಿ.ಜಿ.ಗೀತಾ ಹೇಳಿದರು.

ಪಟ್ಟಣದ ಸರ್ಕಾರಿ ಸಾರಿಗೆ ಬಸ್ ನಿಲ್ದಾಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಶಕ್ತಿ ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರ ಶಕ್ತಿ ಯೋಜನೆಯ ಮೂಲಕ ಮಹಿಳೆಯರಿಗೆ ರಾಜ್ಯಾದ್ಯಂತ ಬಿಎಂಟಿಸಿ, ಸಾಮಾನ್ಯ ಹಾಗೂ ವೇಗದೂತ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಮಾಡಿಕೊಟ್ಟಿದೆ. ಈ ಯೋಜನೆಯ ಫಲಾನುಭವಿಗಳಾದ ಮಹಿಳೆಯರು ಉಚಿತ ಪ್ರಯಾಣದ ಸೌಲಭ್ಯವನ್ನು ಪಡೆದುಕೊಂಡು ಸದುಪಯೋಗ ಮಾಡಿಕೊಳ್ಳುವಂತೆ ಅವರು ಸಲಹೆ ನೀಡಿದರು.

ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಸಿ.ಕೃಷ್ಣ ಮಾತನಾಡಿ, ರಾಜ್ಯ ಸರ್ಕಾರ ಮಹಿಳೆಯರ ಸಬಲೀಕರಣಕ್ಕಾಗಿ ಶಕ್ತಿ ಯೋಜನೆಯನ್ನು ಜಾರಿಗೆ ತಂದಿದೆ. ಇದೊಂದು ಉತ್ತಮ ಯೋಜನೆಯಾಗಿದ್ದು ಮಹಿಳೆಯರು ದೈನಂದಿನ ಪ್ರಯಾಣಗಳಿಗೆ ಯಾವುದೇ ಷರತ್ತುಗಳಿಲ್ಲದೆ ಪ್ರಯಾಣಿಸಲು ಅವಕಾಶ ಮಾಡಿಕೊಟ್ಟಿದೆ. ಈ ಯೋಜನೆ ಯಶಸ್ಸು ಪಡೆಯಲಿ ಎಂದು ಅವರು ಶುಭ ಕೋರಿದರು.

ಪುರಸಭಾ ಮಾಜಿ ಅಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ ಮಾತನಾಡಿ, ಕುಟುಂಬದ ಜವಾಬ್ದಾರಿಯನ್ನು ತನ್ನ ಹೆಗಲ ಮೇಲೆ ಹೊತ್ತು ಹಗಲಿರುಳು ಶ್ರಮಿಸುತ್ತಿರುವ ನನ್ನ ಸಹೋದರಿಯರಿಗೆ, ಉಜ್ವಲ ಭವಿಷ್ಯದ ಕನಸು ಕಟ್ಟಿಕೊಂಡು ಶಾಲಾ ಕಾಲೇಜುಗಳಿಗೆ ಪ್ರಯಾಣ ಬೆಳೆಸುವ ವಿದ್ಯಾರ್ಥಿನಿಯರಿಗೆ, ಅನಾರೋಗ್ಯ, ಅಗತ್ಯ ವಸ್ತುಗಳ ಖರೀದಿ ಇನ್ನಿತರ ಕೆಲಸ ಕಾರ್ಯಗಳ ನಿಮಿತ್ತ ಪ್ರಯಾಣ ಮಾಡುವ ನಾಡಿನ ತಾಯಂದಿರಿಗೆ ನಮ್ಮ ಈ ಶಕ್ತಿ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಿ ಎಂದರು. ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್, ಪುರಸಭಾ ಸದಸ್ಯರಾದ ಶೋಭರಾಣಿ, ತುಂಬಲ ಪ್ರಕಾಶ್, ಬಿಆರ್‌ಸಿ ನಾಗೇಶ್. ಪುರಸಭಾ ಮಾಜಿ ಅಧ್ಯಕ್ಷ ಸೋಮು, ಸದ್ಯಸರಾದ ರೂಪಶ್ರೀ ಪರಮೇಶ್, ವೃತ್ತ ನಿರೀಕ್ಷಕ ಮಹೇಶ್, ಮಾದೇಶ್, ರಾಜ್ಯ ಸಾರಿಗೆ ಸಂಸ್ಥೆ ಕಾರ್ಮಿಕ ಕಲ್ಯಾಣ ಅಧಿಕಾರಿ ಎಂ. ರಶ್ಮಿ, ಉಗ್ರಾಣ ಅಧಿಕಾರಿ ಚಂದ್ರಮೌಳಿ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಲಿಂಗಪ್ಪಾಜಿ ಹಾಜರಿದ್ದರು.

ಆಧಾರ್ ಕಾರ್ಡ್, ವೋಟರ್ ಐಡಿ ಕಡ್ಡಾಯ

ಮಹಿಳೆಯರು ಬಸ್‌ಗಳಲ್ಲಿ ಪ್ರಯಾಣಿಸುವಾಗ ಕಡ್ಡಾಯವಾಗಿ ಗುರುತಿನ ಚೀಟಿಯ ಮೂಲ ಪ್ರತಿಗಳನ್ನು ಜೊತೆಯಲ್ಲಿ ಇಟ್ಟುಕೊಂಡಿರಬೇಕು. ಶಕ್ತಿ ಯೋಜನೆಯ ಸ್ಮಾರ್ಟ್ ಕಾರ್ಡ್ ಬರುವವರೆಗೂ ಈ ಕಾರ್ಡ್ ಗಳನ್ನು ಬಳಸಬೇಕು ಯಾವುದೇ ಕಾರಣಕ್ಕೂ ಜೆರಾಕ್ಸ್ ಆಗಲಿ ಅಥವಾ ಫೋಟೋ ಮೊಬೈಲ್ ಪ್ರತಿ ಆಗಲಿ ಬಳಸುವಂತಿಲ್ಲ, ಯೋಜನೆಯ ದುರುಪಯೋಗ ತಡೆಗಟ್ಟುವ ಸಲುವಾಗಿ ಮೂಲ ಪ್ರತಿಗಳನ್ನು ಪ್ರಯಾಣಿಕರು ತಮ್ಮ ಬಳಿ ಇಟ್ಟುಕೊಂಡಿರಬೇಕು.ಮೂರು ತಿಂಗಳ ನಂತರ ಸ್ಮಾರ್ಟ್ ಕಾರ್ಡ್ ಮಾಡಿಸಿಕೊಂಡು ರಾಜ್ಯಾದ್ಯಂತ ಪ್ರಯಾಣಿಸಬಹುದಾಗಿದೆ ಎಂದು ಅಮರು ಸೂಚಿಸಿದರು.

– ಎಂ.ರಶ್ಮಿ, ಕೆಎಸ್‌ಆರ್‌ಟಿಸಿ ಕಾರ್ಮಿಕ ಕಲ್ಯಾಣ ಅಧಿಕಾರಿ.



ಹುಣಸೂರು ಬಳಿ ಸಾರಿಗೆ ಬಸ್ಸು–ಕಾರಿನ ನಡುವೆ ಡಿಕ್ಕಿ; ಗ್ರಾಪಂ ಸದಸ್ಯ ಸಾವು, ತಾಯಿ, ಪತ್ನಿಗೆ ಗಾಯ

ಅದೃಷ್ಟವಶಾತ್ ಮಕ್ಕಳಿಬ್ಬರೂ ಅಪಾಯದಿಂದ ಪಾರು





ಹುಣಸೂರು, ಜೂ.11– ಕೆಎಸ್‌ಆರ್‌ಟಿಸಿ ಬಸ್ಸು ಮತ್ತು ಕಾರಿನ ನಡುವೆ ಸಂಭವಿಸಿದ ಮುಖ–ಮುಖಿ ಡಿಕ್ಕಿಯಿಂದ ಕಾರು ಚಾಲನೆ ಮಾಡುತ್ತಿದ್ದ ಗ್ರಾಪಂ ಸದಸ್ಯ ಸ್ಥಳದಲ್ಲೇ ಸಾವನ್ನಪ್ಪಿ, ಪತ್ನಿ ಮತ್ತು ತಾಯಿ ತೀವ್ರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಬನ್ನಿಕುಪ್ಪೆ ಸಮೀಪದ ಮಧುಗಿರಿ ಕೊಪ್ಪಲು ಬಳಿ ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಇಂದು ಸಂಜೆ ನಡೆದಿದೆ.



ತಾಲೂಕಿನ ನಿಲವಾಗಿಲು ಗ್ರಾಮದ ಚಿಕ್ಕಣ್ಣೆಗೌಡರ ಮಗ ಹಾಗೂ ತಟ್ಟೆಕೆರೆ ಗ್ರಾಮ ಪಂಚಾಯಿತಿ ಸದಸ್ಯ ಬಾಸ್ಕರ್(42) ಅಪಘಾತದಲ್ಲಿ ಮೃತಪಟ್ಟ ದುರ್ದೈವಿ. ಪತ್ನಿ ರಮ್ಯ ಅವರಿಗೆ ತಲೆ ಮತ್ತು ಕುತ್ತಿಗೆಗೆ ಹಾಗೂ ತಾಯಿ ಸಾವಿತ್ರಮ್ಮನವರಿಗೆ ಗಂಭೀರ ಸ್ವರೂಪದ ಗಾಯವಾಗಿದ್ದು, ಅವರನ್ನು ಮೈಸೂರಿನ ಆಸ್ಪತ್ರೆಗೆ ಸೇರಿಸಲಾಗಿದೆ. ಅದೃಷ್ಟವಶಾತ್ ಕಾರಿನಲ್ಲಿದ್ದ ಭಾಸ್ಕರ್ ಅವರ ಇಬ್ಬರು ಮಕ್ಕಳು ಯಾವುದೇ ತೊಂದರೆಗಳಾಗದೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಭಾಸ್ಕರ್ ತಮ್ಮ ಕಾರಿ (ಕೆ.ಎ–12 ಜೆಡ್ –3089)ನಲ್ಲಿ ಬಿಳಿಕೆರೆ ಹೊಸೂರು ಮಾರಮ್ಮ ದೇವಸ್ಥಾನದಲ್ಲಿ ನಡೆಯುತ್ತಿದ್ದ ಸಂಬಂಧಿಕರ ಬೀಗರ ಔತಣಕೂಟಕ್ಕೆ ಹೋಗಿ ವಾಪಸ್ ಗ್ರಾಮಕ್ಕೆ ಹಿಂತಿರುಗುತ್ತಿದ್ದಾಗ ಬನ್ನಿಕುಪ್ಪೆ ಸಮೀಪದ ಮಧುಗಿರಿಕೊಪ್ಪಲು ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಹುಣಸೂರಿನಿಂದ ಮೈಸೂರಿಗೆ ಹೋಗುತ್ತಿದ್ದ ಸಾರಿಗೆ ಬಸ್ (ಕೆ.ಎ–09 ಎಫ್–4886) ಡಿಕ್ಕಿ ಹೊಡೆದಾಗ ಈ ಘಟನೆ ಸಂಭವಿಸಿದೆ. ಈ ಸಂಬಂಧ ಬಿಳಿಕೆರೆ ಪಿ.ಎಸ್.ಐ ಚಿನ್ನಸ್ವಾಮಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ನಿಷೇಧಾಜ್ಞೆ ಜಾರಿ

ಮೈಸೂರು,ಜೂ.11– ಮೈಸೂರಿನ 6 ಪರೀಕ್ಷಾ ಕೇಂದ್ರಗಳಲ್ಲಿ ಜೂ.12ರಿಂದ 19 ರವರೆಗೆ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗಳು ನಡೆಯಲಿದ್ದು, ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಪರೀಕ್ಷಾ ದಿನಗಳಂದು ಬೆಳಗ್ಗೆ 6 ರಿಂದ ಸಂಜೆ 6 ಗಂಟೆವರೆಗೆ ದಂಡ ಪ್ರಕ್ರಿಯ ಸಂಹಿತೆ 1973 ಕಲಂ 144 ರೀತ್ಯ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ.

ನಂ.ಗೂಡಲ್ಲಿ ಮಹಿಳೆಯರ ಉಚಿತ ಬಸ್ ಪ್ರಯಾಣ ಶಕ್ತಿ ಉದ್ಘಾಟನೆ

ನಂಜನಗೂಡು, ಜೂ.11 – ಮಹಿಳಾ ಸಬಲೀಕರಣದ ಹಿತದೃಷ್ಟಿಯಿಂದ ಸ್ತ್ರೀಯರಿಗೆ ಆರ್ಥಿಕವಾಗಿ ಉತ್ತೇಜನ ನೀಡುವ ಸಲುವಾಗಿ ಸರ್ಕಾರ ಶಕ್ತಿ ಯೋಜನೆಯಡಿ ಉಚಿತ ಬಸ್ ಪ್ರಯಾಣಕ್ಕೆ ಅನುವು ಮಾಡಿಕೊಟ್ಟಿದೆ. ಮಹಿಳೆಯರು ಇದರ ಸದುಪಯೋಗ ಪಡೆದುಕೊಂಡು ಆರ್ಥಿಕವಾಗಿ ಮುಂದೆ ಬರಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಕರೆ ನೀಡಿದರು.

ನಗರದ ಸರ್ಕಾರಿ ಬಸ್ ನಿಲ್ದಾಣದಲ್ಲಿ ಸರ್ಕಾರದ 5 ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ ಯೋಜನೆಯ ಉಚಿತ ಬಸ್ ಪ್ರಯಾಣಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರತಿನಿತ್ಯ ಸಾವಿರಾರು ಮಹಿಳೆಯರು ಉದ್ಯೋಗವನ್ನು ಅರಸಿ ಪಟ್ಟಣಗಳತ್ತ ಬರುತ್ತಾರೆ. ಹಾಗೆಯೇ ಬೇರೆ, ಬೇರೆ ಸ್ಥಳಗಳಿಗೆ ಉದ್ಯೋಗ, ವಿದ್ಯಾಭ್ಯಾಸದ ದೃಷ್ಟಿಯಿಂದ ಬಸ್‌ನಲ್ಲಿ ಪ್ರಯಾಣ ಮಾಡುತ್ತಾರೆ. ಅಂತಹ ಉದ್ಯೋಗಸ್ಥ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಮತ್ತು ಸಾಮಾನ್ಯ ಮಹಿಳೆಯರಿಗೂ ಕೂಡ ಆರ್ಥಿಕ ಸಮಾನತೆ ಸಿಗುವಂತಾಗಬೇಕು ಎಂಬ ಮಹತ್ವಕಾಂಕ್ಷೆಯೊಂದಿಗೆ ಕಾಂಗ್ರೆಸ್ ಪಕ್ಷ ಶಕ್ತಿ ಯೋಜನೆಯಡಿ ಉಚಿತ ಬಸ್ ಪ್ರಯಾಣದ ಘೋಷಣೆಯನ್ನು ಮಾಡಿತ್ತು. ಅದರಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ 5 ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ ಯೋಜನೆಯನ್ನು ಇಂದಿನಿಂದ ಚಾಲನೆ ನೀಡಿ ಅನುಷ್ಠಾನಗೊಳಿಸಲಾಗುತ್ತಿದ್ದು ಮಹಿಳೆಯರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.



ಈ ಯೋಜನೆಯಡಿ ಸಾಮಾನ್ಯ, ವೇಗದೂತ, ನಗರಸಾರಿಗೆ, ತಡೆರಹಿತ ವೇಗದೂತ ಬಸ್‌ಗಳಲ್ಲೂ ಸಹ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಿದ್ದಾರೆ. ಈ ಯೋಜನೆಯಡಿ ರಾಜ್ಯದ ಎಲ್ಲಾ ಕಡೆ ದೂರದ ಮಿತಿಯಿಲ್ಲದೆ ಸಂಚಾರ ನಡೆಸಬಹುದಾಗಿದ್ದು, ಮಹಿಳೆಯರು ಆಧಾರ್ ಕಾರ್ಡ್, ರೇಷನ್‌ಕಾರ್ಡ್, ಡ್ರೈವಿಂಗ್ ಲೈಸೆನ್ಸ್, ಮತದಾರರ ಗುರುತಿನ ಚೀಟಿ, ಸರ್ಕಾರ ಅನುಮೋದಿಸಲ್ಪಟ್ಟಿರುವ ಯಾವುದಾದರೊಂದು ಗುರುತಿನ ಚೀಟಿಯನ್ನಿಟ್ಟುಕೊಂಡು ಪ್ರಯಾಣ ಬೆಳೆಸಬಹುದಾಗಿದೆ. 3 ತಿಂಗಳ ನಂತರ ಶಕ್ತಿ ಸ್ಮಾರ್ಟ್ ಕಾರ್ಡ್ ವಿತರಣೆ ಮಾಡಲಾಗುತ್ತಿದ್ದು. ಸೇವಾಸಿಂಧು ಕೇಂದ್ರಗಳಲ್ಲಿ ಈಗಿನಿಂದಲೇ ಅರ್ಜಿ ಸಲ್ಲಿಸಿ ಕಾರ್ಡ್ ಪಡೆದು ಪ್ರಯಾಣ ಬೆಳೆಸಬಹುದು ಎಂದು ಮಾಹಿತಿ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯರವರು 5 ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸುವ ಮೂಲಕ ಜನರ ನಂಬಿಕೆ ವಿಶ್ವಾಸ ಉಳಿಸಿಕೊಂಡು ಮತ್ತೊಮ್ಮೆ ನುಡಿದಂತೆ ನಡೆದ ಮುಖ್ಯಮಂತ್ರಿ ಎನಿಸಿದ್ದಾರೆ. ಈ ಯೋಜನೆ ಜಾರಿಗೊಳಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಾರಿಗೆ ಮಂತ್ರಿ ರಾಮಲಿಂಗರೆಡ್ಡಿ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ತಹಶೀಲ್ದಾರ್ ಶಿವಕುಮಾರ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯೆ ಲತಾ ಸಿದ್ದಶೆಟ್ಟಿ, ಎಸ್ಸಿ ವಿಭಾಗದ ರಾಜ್ಯ ಕಾರ್ಯದರ್ಶಿ ದೊರೆಸ್ವಾಮಿ ನಾಯಕ, ನಗರಸಭಾ ಸದಸ್ಯರಾದ ಪ್ರದೀಪ್, ಗಂಗಾಧರ್, ಗಾಯತ್ರಿ, ಮಂಗಳಮ್ಮ, ಮುಖಂಡರಾದ ರಾಜು, ಅಕ್ಬರ್‌ಅಲಿಂ, ಪರಶಿವಮೂರ್ತಿ, ಬ್ಲಾಕ್ ಕಾಂಗ್ರೆಸ್ ಕಾರ್ಯದರ್ಶಿ ಬಸವರಾಜು, ಡಿವೈಎಸ್ಪಿ ಗೋವಿಂದರಾಜು, ಬಸ್ ಡಿಪೋ ವ್ಯವಸ್ಥಾಪಕ ಶಂಕರ್, ಬಾಬು ಸೇರಿದಂತೆ ಹಲವಾರು ಪ್ರಮುಖರಿದ್ದರು.

ಮೀನಿನ ಬಲೆಗೆ ಸಿಲುಕಿ ಒದ್ದಾಡುತ್ತಿರುವ ಜಿಂಕೆ

• ಡಿ.ಬಿ. ಕುಪ್ಪೆ ಬಳಿ ನೀರು ಕುಡಿಯಲು ಬಂದಾಗ ಘಟನೆ • ಬಲೆ ತೆಗೆಯಲು ತಂಡಗಳ ರಚನೆ

ಹೆಚ್.ಡಿ.ಕೋಟೆ, ಜೂ.11– ರಾಷ್ಟ್ರೀಯ ಉದ್ಯಾನವನ ನಾಗರಹೊಳೆ ಅಭಯಾರಣ್ಯ ಡಿ.ಬಿ.ಕುಪ್ಪೆ ಅರಣ್ಯ ವ್ಯಾಪ್ತಿಯಲ್ಲಿ ಜಿಂಕೆಯೊಂದು ಮೀನಿನ ಬಲೆಗೆ ಸಿಲುಕಿ ಸಂಕಷ್ಟದಲ್ಲಿ ಒದ್ದಾಡುತ್ತಿರುವ ಘಟನೆ ಸಂಭವಿಸಿದೆ.

ತಾಲೂಕಿನ ನಾಗರ ಹೊಳೆ ರಾಷ್ಟ್ರೀಯ ಉದ್ಯಾನವನದ ಅಂತರ ಸಂತೆ ವಲಯದ ಡಿ.ಬಿ.ಕುಪ್ಪೆ ವ್ಯಾಪ್ತಿಯಲ್ಲಿ ಕಬಿನಿ ಹಿನ್ನೀರು ಸಂಪೂರ್ಣ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ, ಜಿಂಕೆಗಳು ನೀರು ಕುಡಿಯಲು ನದಿ ಭಾಗಕ್ಕೆ ತೆರಳಿದ ಸಂದರ್ಭದಲ್ಲಿ ಜಿಂಕೆ ಒಂದರ ಕೊಂಬಿಗೆ ಮೀನಿನ ಬಲೆ ಸುತ್ತಿಕೊಂಡು ಒದ್ದಾಡುತ್ತಿರುವುದು ಅರಣ್ಯ ಇಲಾಖೆ ಸಿಬ್ಬಂದಿಗಳಿಗೆ ಕಾಣಿಸಿಕೊಂಡಿದೆ.



ಕಬಿನಿ ಹಿನ್ನೀರು ಬಂಡೀಪುರ ಮತ್ತು ನಾಗರಹೊಳೆ ಅರಣ್ಯ ವ್ಯಾಪ್ತಿಯಲ್ಲಿ ಗ್ರಾಮಸ್ಥರು ಕೆಲವೆಡೆ ಮೀನುಗಾರಿಕೆ ನಡೆಸುತ್ತಾರೆ, ಮೀನು ಹಿಡಿದ ನಂತರ ಕೆಲವು ಬಲೆಗಳನ್ನು ನೀರಿನ ದಡದ ಬಳಿ ಬಿಸಾಡಿ ಹೋಗಿರುತ್ತಾರೆ, ಕೆಲವೊಮ್ಮೆ ಮೀನು ಹಿಡಿಯುವಾಗ ಅರಣ್ಯ ಸಿಬ್ಬಂದಿಯ ಕಾರ್ಯಾಚರಣೆ ಮಾಡುವ ಸಂದರ್ಭದಲ್ಲಿ ಮೀನು ಹಿಡಿಯಲು ಬಂದಿದ್ದಂತಹ ವ್ಯಕ್ತಿಗಳು ಅಧಿಕಾರಿಗಳಿಗೆ ಹೆದರಿ ಬಲೆಗಳನ್ನು ಬಿಟ್ಟು ಕಾಲ್ಕಿತ್ತಿರುತ್ತಾರೆ.

ಹಿನ್ನೀರಿಗೆ ನೀರು ಕುಡಿಯಲು ಬರುವ ಹಲವಾರು ವನ್ಯ ಜೀವಿಗಳು ನೆಲದ ಮೇಲೆ ಬಲೆ ಬಿದ್ದಿರುವುದನ್ನು ಗಮನಿಸದೆ ಬಲೆಯನ್ನು ತುಳಿದು ಸಿಕ್ಕಿಸಿ ಕೊಂಬಿನಿಂದ ಬಿಡಿಸಿಕೊಳ್ಳಲು ಹೋಗಿ ಸಿಕ್ಕಿಸಿ ಕೊಳ್ಳುತ್ತದೆ. ಜಿಂಕೆಗಳು ಕೊಂಬಿನಿಂದ ಬಲೆಯನ್ನು ಬಿಡಿಸಿಕೊಳ್ಳಲು ಆಗದೆ ಸಂಕಷ್ಟದಲ್ಲಿ ಸಿಲುಕುತ್ತವೆ.

ಕಬಿನಿ ಹಿನ್ನೀರಿನಲ್ಲಿ ಬಲೆಗೆ ಸಿಲುಕಿರುವ ಪ್ರಾಣಿಗಳ ವಿವರ 2009ರ ಫೆಬ್ರವರಿಯಲ್ಲಿ ಮೀನುಗಾರರ ಬಲೆಗೆ ಕಾಡಾನೆ ಕಾಲು ಸಿಕ್ಕಿಕೊಂಡು ಪ್ರಯಾಸ ಪಟ್ಟಿತ್ತು.

ಅದೇ ವರ್ಷ ಸೆಪ್ಟೆಂಬರ್‌ನಲ್ಲಿ ಹೆಬ್ಬಾವೊಂದು ಸಿಕ್ಕಿ ಮೃತಪಟ್ಟಿತ್ತು 2014ರಲ್ಲಿ ಜಿಂಕೆಯೊಂದು ಇದೇ ರೀತಿ ತಲೆಯಲ್ಲಿ ಬಲೆಯನ್ನು ಹೊತ್ತು ತಿರುಗುತ್ತಿತ್ತು, ನಂತರ ಅರಣ್ಯಾಧಿಕಾರಿಗಳು ಕ್ರಮ ಕೈಗೊಂಡಿದ್ದರು.

ಹರ ಸಾಹಸಪಟ್ಟಿದ್ದ ಆನೆ: 2021ರ ಜನವರಿಯಲ್ಲಿ ಕಾಡಾನೆಯೊಂದು ನೀರಿನಲ್ಲಿ ಮೀನಿನ ಬಲೆಗೆ ಸಿಲುಕಿ ಪರದಾಡಿ, ಕೊನೆಗೆ ಹರಸಾಹಸ ಪಟ್ಟು ದಡ ಸೇರಿದ ಘಟನೆ ಕೋಟೆ ತಾಲೂಕಿನಲ್ಲಿರುವ ನುಗು ಜಲಾಶಯದ ಹಿನ್ನೀರಿನಲ್ಲಿ ನಡೆದಿತ್ತು, ಕಾಡಿನ ಒಂದು ನದಿ ದಡದಿಂದ ಇನ್ನೊಂದು ದಡಕ್ಕೆ ನೀರಿನ ಮೂಲಕ ದಾಟುತ್ತಿದ್ದ ಕಾಡಾನೆಗಳ ಪೈಕಿ ಸುಮಾರು 15 ವರ್ಷದ ಗಂಡಾನೆಯೊಂದು ನೀರಿನಲ್ಲಿ ಮೀನು ಹಿಡಿಯಲು ಹಾಕಿದ್ದ ಬಲೆಗೆ ಸಿಲುಕಿತ್ತು ಅರಣ್ಯ ಇಲಾಖೆಯ ಸಿಬ್ಬಂದಿ, ಅಗ್ನಿ ಶಾಮಕ ಇಲಾಖೆ ಸಿಬ್ಬಂದಿ ಸಹಾಯದೊಂದಿಗೆ ಬೋಟ್ ಮೂಲಕ ಆನೆ ಸಮೀಪ ಹೋಗಿ ಆನೆಯ ಕಾಲಿಗೆ ಸಿಲುಕಿದ್ದ ಬಲೆಯನ್ನು ಬಿಡಿಸಿದರು. 8 ಗಂಟೆಗಳ ಸತತ ಕಾರ್ಯಾಚರಣೆ ಬಳಿಕ ಆನೆ ದಡ ಸೇರಿ ಕಾಡಿನತ್ತ ಮುಖ ಮಾಡಿತ್ತು.

ಜಿಂಕೆ ಕೊಂಬಿಗೆ ಬಲೆ ಸುತ್ತಿಕೊಂಡಿದ್ದು, ಜಿಂಕೆ ಯಾವುದೇ ತೊಂದರೆ ಇಲ್ಲದೆ ಆರೋಗ್ಯದಿಂದ ಕಾಡಿನಲ್ಲಿ ಮೇವು ತಿನ್ನುತ್ತಿದೆ. ಜಿಂಕೆ ಕೊಂಬಿನಿಂದ ಬಲೆಯನ್ನು ತೆಗೆಯಲು ಅರಣ್ಯ ಇಲಾಖೆಯಿಂದ 4 ತಂಡಗಳನ್ನು ರಚಿಸಿ ಜಿಂಕೆಯ ಚಲನವಲನಗಳನ್ನು ಗುರುತಿಸಿಕೊಂಡು ಜಿಂಕೆಯನ್ನು ಹಿಡಿದು ಬಲೆ ತೆಗೆಯುವ ಪ್ರಯತ್ನಗಳನ್ನ ಮಾಡುತ್ತದೆ.

– ಸಿದ್ದರಾಜು, ಅಂತರಸಂತೆ ಅರಣ್ಯ ವಲಯ ಅಧಿಕಾರಿ.

ಕಬಿನಿ ಹಿನ್ನೀರಿನಲ್ಲಿ ಇಂಥ ಒಂದು ಘಟನೆಗಳು ಸಾಕಷ್ಟು ನಡೆಯುತ್ತಿದೆ. ಪ್ರಾಣಿಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಮೀನು ಹಿಡಿಯುವ ಮೀನುಗಾರರಿಗೆ ಈ ಸಂಬಂಧ ಅರಿವು ಮೂಡಿಸಲು ಮುಂದಾಗಬೇಕು. ಮುಂದಿನ ದಿನಗಳಲ್ಲಿ ಯಾವುದೇ ರೀತಿ ಇಂಥ ಒಂದು ಪ್ರಾಣಿಗಳಿಗೆ ಅಹಿತಕರ ಘಟನೆಗಳು ಸಂಭವಿಸದಂತೆ ಜವಾಬ್ದಾರಿಯಿಂದ ಕೆಲಸ ಮಾಡಿ. –ವನ್ಯಜೀವಿ ಛಾಯಾಗ್ರಾಹಕ ಸತೀಶ್ ವಿಗುಡಿ.

ರೂಪ ನಿಧನ



ನಂಜನಗೂಡು, ಜೂ.11– ತಾಲೂಕಿನ ಬದನವಾಳು ಗ್ರಾಮದ ನಿವಾಸಿ ರೂಪ(26) ಅನಾರೋಗ್ಯದಿಂದ ಭಾನುವಾರ ನಿಧನರಾದರು. ಮೃತರು ತಾಯಿ, ಸಹೋದರ ಸೇರಿದಂತೆ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಶ್ರೀನಿವಾಸ್‌ಶೆಟ್ಟರು



ಹೆಚ್.ಡಿ.ಕೋಟೆ, ಜೂ.11– ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಕನ್ನಡ ಪ್ರಮೋದ್ ಅವರ ತಂದೆ ಶ್ರೀನಿವಾಸ್ ಶೆಟ್ಟರು(83) ಭಾನುವಾರ ಮುಂಜಾನೆ ನಿಧನರಾಗಿದ್ದಾರೆ.

ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಪಟ್ಟಣದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಪ್ರಜ್ಞಾವಂತರ ಮಾರ್ಗದರ್ಶನದಲ್ಲಿ ಚಾಮರಾಜ ಕ್ಷೇತ್ರ ಅಭಿವೃದ್ಧಿ

ಶಾಸಕ ಕೆ.ಹರೀಶ್‌ಗೌಡ ಹೇಳಿಕೆ



ಮೈಸೂರು, ಜೂ.11(ಎಸ್‌ಬಿಡಿ)– ಪ್ರಜ್ಞಾವಂತರ ಸಲಹೆ, ಮಾರ್ಗದರ್ಶನ ಪಡೆದು ಚಾಮರಾಜ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಶಾಸಕ ಕೆ.ಹರೀಶ್ ಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಶ್ರೀ ಡಾ.ಬಾಲಗಂಗಾಧರನಾಥ ಸ್ವಾಮೀಜಿಯವರ ಒಕ್ಕಲಿಗರ ಸಂಘದ ಸಹಯೋಗದಲ್ಲಿ ವಿಜಯನಗರದ ಸಾಹಿತ್ಯ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಚಾಮರಾಜ ಕ್ಷೇತ್ರದ ಜನ, ನನಗೆ ಮತ ನೀಡಿ ಆಯ್ಕೆ ಮಾಡಿದ್ದಾರೆ. ಜನರ ಆಶೋತ್ತರಗಳಿಗೆ ತಕ್ಕಂತೆ ಕೆಲಸ ಮಾಡುವುದು ನನ್ನ ಜವಾಬ್ದಾರಿ. ಹಾಗಾಗಿ ಕ್ಷೇತ್ರದ ಅಭಿವೃದ್ಧಿಗೆ ಪ್ರಜ್ಞಾವಂತ ನಾಗರಿಕರ ಸಲಹೆ, ಮಾರ್ಗದರ್ಶನ ಪಡೆಯುತ್ತೇನೆ. ಈ ನಿಟ್ಟಿನಲ್ಲಿ ವಿವಿಧ ಕ್ಷೇತ್ರದ ಪ್ರತಿನಿಧಿಗಳು, ಸ್ಥಳೀಯ ಮುಖಂಡರನ್ನೊಳಗೊಂಡ ಸಮಿತಿ ಮಾದರಿ ರೂಪಿಸುವ ಚಿಂತನೆ ಇದೆ ಎಂದರು.

ವ್ಯವಸ್ಥಿತವಾಗಿ ಕ್ಷೇತ್ರದ ಅಭಿವೃದ್ಧಿಯಾಗಬೇಕು. ಈ ನಿಟ್ಟಿನಲ್ಲಿ ಸಾಕಷ್ಟು ಯೋಜನೆಗಳನ್ನು ರೂಪಿಸುವ ಚಿಂತನೆಯಿದೆ. ಪ್ರಶಾಂತ ವಾತಾವರಣದಲ್ಲಿ ವಾಯುವಿಹಾರ ನಡೆಸಲು, ವಿಶ್ರಾಂತಿ ಪಡೆಯಲು ಹಿರಿಯ ನಾಗರಿಕರಿಗೆ ಪ್ರತ್ಯೇಕವಾದ ಉದ್ಯಾನ ನಿರ್ಮಿಸಬೇಕು. ಯುವಕರಿಗೆ ಜಿಮ್ ವ್ಯವಸ್ಥೆಯುಳ್ಳ ಉದ್ಯಾನ ಮಾಡಬೇಕು. ವಿಜಯನಗರದಲ್ಲಿ ಒಂದು ಈಜುಕೊಳ ನಿರ್ಮಿಸಬೇಕು. ಇಂತಹ ಹಲವು ಯೋಜನೆಗಳನ್ನು ಹಂತಹಂತವಾಗಿ ಸಾಕಾರಗೊಳಿಸಲು ಬದ್ಧನಾಗಿದ್ದೇನೆ ಎಂದು ತಿಳಿಸಿದರು.

ಚುನಾವಣೆ ವೇಳೆ ವಿಜಯನಗರ ಭಾಗದಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಕೇವಲ 400 ಮತಗಳೂ ದಕ್ಕುವುದಿಲ್ಲ ಎಂದು ಕೆಲವರು ಹೇಳುತ್ತಿದ್ದರು. ಆದರೆ ವಿಜಯನಗರದ 2 ಸಾವಿರಕ್ಕೂ ಹೆಚ್ಚು ಜನ ನನಗೆ ಮತ ನೀಡಿ ಆಶೀರ್ವದಿಸಿದ್ದಾರೆ. ನಾನು ಮತಯಾಚನೆಗೆ ಮನೆ ಮನೆಗೆ ಭೇಟಿ ನೀಡಿದ್ದಾಗ ನಿಮಗೊಂದು ಬಾರಿ ಅವಕಾಶ ಮಾಡಿಕೊಡುತ್ತೇವೆ ಎಂದು ಹೇಳಿದ್ದರು. ಮತದಾನದ ಮೂಲಕ ಅವರ ವಾಗ್ದಾನ ನಡೆಸಿಕೊಟ್ಟರು. ಯುವಕರು, ಹಿರಿಯ ನಾಗರಿಕರು, ವಿವಿಧ ಸಂಘಟನೆ, ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸ್ವಯಂ ಪ್ರೇರಣೆಯಿಂದ ಬೆಂಬಲ ನೀಡಿದ್ದನ್ನು ಎಂದಿಗೂ ಮರೆಯಲಾರೆ. ಆಶೀರ್ವದಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಹರೀಶ್‌ಗೌಡರು ಯಾವುದೇ ಅಧಿಕಾರ ಇಲ್ಲದೆಯೂ 25 ವರ್ಷಗಳಿಂದ ಸಮಾಜಮುಖಿ ಸೇವೆಗಳಲ್ಲಿ ಸಕ್ರಿಯರಾಗಿದ್ದಾರೆ. ಜನರ ಕಷ್ಟ-ಸುಖದಲ್ಲಿ ಭಾಗಿಯಾಗಿದ್ದಾರೆ. ಸೋತಾಗಲೂ ಹತಾಶರಾಗದೆ ಫೀನಿಕ್ಸ್ ಪಕ್ಷಿಯಂತೆ ಎದ್ದು ಬಂದಿದ್ದಾರೆ. ಜನರ ನಡುವೆಯೇ ಇದ್ದು ಛಲದಂಕ ಮಲ್ಲನ ರೀತಿ ಗೆದ್ದು ಸಾಧಿಸಿದ್ದಾರೆ. ಸಮಾಜ ಸೇವಕರಾಗಿದ್ದ ಹರೀಶ್‌ಗೌಡರು ಈಗ ಶಾಸಕರಾಗಿದ್ದಾರೆ. ಈಗ ಜನಸೇವೆಗೆ ವಿಫುಲ ಅವಕಾಶಗಳಿವೆ. ಜನರ ನಿರೀಕ್ಷೆಗೆ ತಕ್ಕಂತೆ ಕಾರ್ಯ ನಿರ್ವಹಿಸಿ ಇನ್ನೂ ಉನ್ನತ ಸ್ಥಾನಕ್ಕೇರಲಿ ಎಂದು ಆಶಿಸಿದರು.

ಡಾ.ಬಾಲಗಂಗಾಧರನಾಥ ಸ್ವಾಮೀಜಿಯವರ ಒಕ್ಕಲಿಗರ ಸಂಘದ ಅಧ್ಯಕ್ಷ ಮೊಗಣ್ಣೇಗೌಡ ಮಾತನಾಡಿ, ಎರಡೂವರೆ ದಶಕದಿಂದ ಸಮಾಜ ಸೇವೆಯಲ್ಲಿರುವ ಹರೀಶ್‌ಗೌಡರು, ಮುಂದಿನ ಬಾರಿಯೂ ಶಾಸಕರಾಗಿ ಮಂತ್ರಿಯಾಗಬೇಕೆಂಬುದು ನಮ್ಮೆಲ್ಲರ ಆಶಯ ಎಂದರು.

ಕಾರ್ಯಕ್ರಮದಲ್ಲಿ ಸಂಘದ ಖಜಾಂಚಿ ಶಿವೇಗೌಡ, ವಿಜಯನಗರ ಹಿರಿಯ ನಾಗರಿಕರ ಸಂಘದ ಉಪಾಧ್ಯಕ್ಷ ಎಸ್.ಕೆ.ಶ್ರೇಯಾಂಸ್ ಕುಮಾರ್, ನಿವೃತ್ತ ಕಾರ್ಯಪಾಲಕ ಇಂಜಿನಿಯರ್ ಎಸ್.ಎನ್.ನಾಗರಾಜು, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ವೈ.ಡಿ.ರಾಜಣ್ಣ, ಜಿ.ಪ್ರಕಾಶ್, ಎಚ್.ಎನ್.ಚಂದ್ರಶೇಖರ್, ಕುಸುಮ, ಮನಲತಾ ಮೋಹನ್, ಚಂದ್ರಶೇಖರ್, ಕೆಂಪಣ್ಣ ಮತ್ತಿತರರು ಉಪಸ್ಥಿತರಿದ್ದರು.

ಚಿರತೆ ಪ್ರತ್ಯಕ್ಷ ಹಿನ್ನೆಲೆ: ವಡ್ಗಲ್ ರಂಗನಾಥಸ್ವಾಮಿ ಬೆಟ್ಟಕ್ಕೆ ಸಂಜೆ 5.30ರಿಂದ ಬೆಳಗ್ಗೆ 9ರವರೆಗೆ ಪ್ರವೇಶ ನಿಷೇಧ

ಅರಣ್ಯ ಇಲಾಖೆಯಿಂದ ಮುನ್ನೆಚ್ಚರಿಕಾ ಕ್ರಮ



ಮೈಸೂರು, ಜೂ.11(ಎಸ್‌ಬಿಡಿ)– ತಿ.ನರಸೀಪುರ ತಾಲೂಕು ಬಿ.ಬೆಟ್ಟಹಳ್ಳಿ ವ್ಯಾಪ್ತಿಯ ವಡ್ಗಲ್ ರಂಗನಾಥಸ್ವಾಮಿ ಬೆಟ್ಟದ ದೇವಸ್ಥಾನದಲ್ಲಿ ಚಿರತೆ ಕಾಣಿಸಿಕೊಂಡಿದ್ದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ವತಿಯಿಂದ ಕೆಲ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ದೇವಸ್ಥಾನದ ಮುಖ್ಯ ರಸ್ತೆಯನ್ನು ಸಂಜೆ 5.30ರಿಂದ ಬೆಳಗ್ಗೆ 9ರವರೆಗೆ ಮುಚ್ಚಲಾಗುತ್ತಿದ್ದು, ಅರ್ಚಕರು ಮತ್ತು ಪೂಜೆ ಸಾಮಗ್ರಿ ವ್ಯಾಪಾರಿಗಳು ಬೆಳಗ್ಗೆ 9ರಿಂದ ಸಂಜೆ 5.30ರವರೆಗೆ ಮಾತ್ರ ಕಾರ್ಯ ನಿರ್ವಹಿಸುವಂತೆ ಸೂಚಿಸಲಾಗಿದೆ. ಅಕ್ಕಪಕ್ಕದ ಗ್ರಾಮಗಳಲ್ಲಿ ಸಂಜೆ 6 ಗಂಟೆ ನಂತರ ಮತ್ತು ಬೆಳಗಿನ ಜಾವ ಜನ ಓಡಾಡಬಾರದು ಎಂದು ಧ್ವನಿವರ್ಧಕದ ಮೂಲಕ ಪ್ರಚಾರ ಮಾಡಲಾಗಿದೆ. ದೇವರ ದರ್ಶನಕ್ಕೆ ಬರುವ ಭಕ್ತಾದಿಗಳು ಮತ್ತು ಅಕ್ಕಪಕ್ಕದ ಗ್ರಾಮಸ್ಥರು ಅರಣ್ಯ ಪ್ರದೇಶದೊಳಗೆ ಪ್ರವೇಶಿಸಬಾರದು. ದೇವರ ದರ್ಶನಕ್ಕೆ ಮೆಟ್ಟಿಲು ಮಾರ್ಗದಲ್ಲಿ ತೆರಳಬಾರದು. ಚಿರತೆ ಕಂಡರೆ ಅಲ್ಲಿಯೇ ನಿಂತು ಫೋಟೋ, ವಿಡಿಯೋ ಮಾಡದೆ ಅರಣ್ಯ ಇಲಾಖೆಗೆ ಮಾಹಿತಿ ನೀಡುವಂತೆ ಸೂಚಿಸಲಾಗಿದೆ.

ಅರಣ್ಯ ಪ್ರದೇಶದಿಂದ ಸುತ್ತುವರಿದಿರುವ ಮುಜರಾಯಿ ಇಲಾಖೆಗೆ ಒಳಪಟ್ಟ ವಡ್ಗಲ್ ರಂಗನಾಥಸ್ವಾಮಿ ಬೆಟ್ಟದ ದೇವಸ್ಥಾನದಲ್ಲಿ ಮೇ 17ರ ಮಧ್ಯರಾತ್ರಿ ಚಿರತೆಯ ಕಾಣಿಸಿಕೊಂಡಿದ್ದು ಅಲ್ಲಿನ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿತ್ತು. ಆ ಬಗ್ಗೆ ದೇವಸ್ಥಾನದ ಆಡಳಿತ ಮಂಡಳಿ ಯವರು ಮೇ 30ರಂದು ನಮಗೆ ಮಾಹಿತಿ ನೀಡಿದರು. ಕೂಡಲೇ ಸ್ಥಳ ಪರಿಶೀಲನೆ ನಡೆಸಿ, ಚಿರತೆ ಸೆರೆಗೆ ಬೋನ್ ಅಳವಡಿಸ ಲಾಗಿದೆ. ಈ ಭಾಗದಲ್ಲಿ ಚಿರತೆ ಚಲನವಲನ ಹೆಚ್ಚಾಗಿರುವುದರಿಂದ ಈ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಸಾರ್ವಜನಿಕರು ಸಹಕರಿಸಬೇಕೆಂದು ತಿ.ನರಸೀಪುರ ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಚಿರತೆ ಕಂಡರೆ ಕರೆ ಮಾಡಿ

ಜನವಸತಿ ಪ್ರದೇಶಗಳಲ್ಲಿ ಚಿರತೆ ಚಲನವಲನ ಕಂಡು ಬಂದಲ್ಲಿ ಸಾರ್ವಜನಿಕರು ಆತಂಕಕ್ಕೆ ಒಳಗಾಗದೆ ಕೂಡಲೇ ಚಿರತೆ ಕಾರ್ಯಪಡೆ ಸಹಾಯವಾಣಿ(9481996026)ಗೆ ಕರೆ ಮಾಡಿದರೆ ತಕ್ಷಣ ಅರಣ್ಯ ಸಿಬ್ಬಂದಿ ಅಗತ್ಯ ಕ್ರಮ ವಹಿಸಲಿದ್ದಾರೆ. ಚಿರತೆ ಸೆರೆಗೆ ಕಾರ್ಯಪಡೆ ಸನ್ನದ್ಧವಾಗಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.



ಮೈಸೂರು ತಾಲೂಕು ಚಿಕ್ಕೇಗೌಡನಕೊಪ್ಪಲು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಶಿವೇಗೌಡ ಮತ್ತು ಉಪಾಧ್ಯಕ್ಷರಾಗಿ ಶ್ರೀಮತಿ ನಿಂಗಮ್ಮ ಅವಿರೋಧವಾಗಿ ಆಯ್ಕೆಯಾದರು. ಈ ವೇಳೆ ಕೃಷ್ಣೇಗೌಡ, ಮರಿಗೌಡ, ಜವರಮ್ಮ, ಬೋರಲಿಂಗಯ್ಯ ಜವರೇಗೌಡ, ಜಯಮ್ಮ, ಪಾರ್ವತಿ, ರಾಜುಗೌಡ ಉಪಸ್ಥಿತರಿದ್ದರು.



ಸಾರ್ವಜನಿಕ ಪ್ರಕಟಣೆ

ಭಾರತೀಯ ವೈದ್ಯಕೀಯ ಮಂಡಳಿಯ ಪ್ರಕಾರ (ಭಾರತೀಯ ಸಂಹಿತೆ ಪ್ರಕಾರ ಭಾಗ 111. ಸೆಕ್ಷನ್ 4ರಲ್ಲಿ ದಿನಾಂಕ 6ನೇ ಏಪ್ರಿಲ್ 2002ರಲ್ಲಿ ಪ್ರಕಟಿಸಲಾಗಿದೆ) ವೈದ್ಯಕೀಯ ದಾಖಲೆಗಳ ನೀತಿಗೆ ಸಂಬಂಧಿಸಿದಂತೆ 2016–2017ರಲ್ಲಿ ನಮ್ಮ ಆಸ್ಪತ್ರೆಯಲ್ಲಿ ನೋಂದಾಯಿಸಿದ ಹಾಗೂ ದಾಖಲಾಗಿದ್ದ ರೋಗಿಗಳ ನಿಷ್ಕ್ರಿಯ ವೈದ್ಯಕೀಯ ದಾಖಲೆಗಳನ್ನು ನಾಶ ಮಾಡಲಾಗುವುದು, ಆದ್ದರಿಂದ ಈ ಅವಧಿಯ ದಾಖಲೆಗಳನ್ನು ಸಂಗ್ರಹಿಸಲು ಆಸಕ್ತಿ ಹೊಂದಿರುವ ರೋಗಿಗಳು ದಿನಾಂಕ 30.06.2023ರ ಒಳಗೆ ಈ ಕೆಳಕಂಡ ವಿಭಾಗವನ್ನು ಸಂಪರ್ಕಿಸ ಬಹುದು.

ವೈದ್ಯಕೀಯ ದಾಖಲಾತಿ ವಿಭಾಗ, ಗೋಪಾಲಗೌಡ ಶಾಂತವೇರಿ ಸ್ಮಾರಕ ಸಮೂಹ ಆಸ್ಪತ್ರೆ, ನಜರ್‌ಬಾದ್, ಮೈಸೂರು–570010. ಫೋನ್: 0821–4001600.

ದಿನಾಂಕ: 10.06.2023 ಸಹಿ/– ಆಡಳಿತಾಧಿಕಾರಿಗಳು

ಮೈಸೂರಲ್ಲಿ ಪೇ ಅಂಡ್ ಪಾರ್ಕಿಂಗ್‌ಗೆ ಭಾರಿ ವಿರೋಧ

ಯೋಜನೆ ಅನುಷ್ಠಾನಗೊಳಿಸದಂತೆ ಮೈಸೂರು ರಕ್ಷಣಾ ವೇದಿಕೆ ಮನವಿ



ಮೈಸೂರು, ಜೂ.11(ಎಂಕೆ)– ನಗರಪಾಲಿಕೆ ಉದ್ದೇಶಿತ ಪೇ ಅಂಡ್ ಪಾರ್ಕ್ ಯೋಜನೆಗೆ ಮೈಸೂರು ರಕ್ಷಣಾ ವೇದಿಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದು, ಯೋಜನೆ ಅನುಷ್ಠಾನಗೊಳಿಸದಂತೆ ಮನವಿ ಮಾಡಿದೆ.

ನಗರದ ಡಿ.ದೇವರಾಜ ಅರಸು ರಸ್ತೆಯ ಬಿಸಿಲು ಮಾರಮ್ಮ ದೇವಸ್ಥಾನದಲ್ಲಿ ವೇದಿಕೆ ವತಿಯಿಂದ ನಡೆದ ಸಭೆಯಲ್ಲಿ ಮೈಸೂರು ಸ್ವಚ್ಛ ನಗರ ಎಂಬ ಬಿರುದನ್ನು ಉಳಿಸಿಕೊಳ್ಳಲು ಪೇ ಅಂಡ್ ಯೂಸ್ ಶೌಚಾಲಯ ಬೇಕೇ ಹೊರತು ಪೇ ಅಂಡ್ ಪಾರ್ಕ್ ಯೋಜನೆ ಅಲ್ಲ. ಕೂಡಲೇ ಈ ಯೋಜನೆ ಕೈಬಿಡಬೇಕು ಎಂದು ಒತ್ತಾಯಿಸಲಾಯಿತು.

ಮೈಸೂರಿನಲ್ಲಿ ಪೇ ಅಂಡ್ ಪಾರ್ಕ್ ಯೋಜನೆ ಅಗತ್ಯವಿಲ್ಲ. ಇದರ ನಡುವೆಯೂ ಪಾಲಿಕೆ ಜಾರಿಗೆ ಮುಂದಾದರೆ ಹೋರಾಟ ಸಮಿತಿ ರಚಿಸಿ ಸ್ಥಳೀಯರನ್ನು ಸಂಘಟಿಸಿ ಹೋರಾಟ ಮಾಡಲಾಗುವುದು. ಅಗತ್ಯವಿದ್ದರೆ ಕಾನೂನು ಹೋರಾಟ ನಡೆಸಲು ನಿರ್ಧರಿಸಲಾಯಿತು.

ಪುರಭವನದಲ್ಲಿ ಬಹು ಮಹಡಿ ವಾಹನ ನಿಲುಗಡೆ ಕಟ್ಟಡ ಇದೆ. ದೇವರಾಜ ಅರಸು ರಸ್ತೆ ಬಳಿ ಅಂಬೇಡ್ಕರ್ ಭವನದ ಸೆಲ್ಲಾರ್, ಗಾಡಿ ಚೌಕದ ಜಾಗವನ್ನು ಮಳಿಗೆ ಮಾಲೀಕರಿಗೆ ನೀಡಿ ಅವರ ಮೂಲಕವೇ ನಿರ್ವಹಿಸಬಹುದು. ಈಗಾಗಲೇ ಇ-ಶೌಚಾಲಯ ಯೋಜನೆ ನಿರ್ವಹಣೆ ಇಲ್ಲದೇ ಹಾಳಾಗಿದೆ. ಪಾಲಿಕೆಯು ಮೊದಲು ಜನರಿಗೆ ಶೌಚಾಲಯ ವ್ಯವಸ್ಥೆ ಮಾಡಿ ಸ್ವಚ್ಛ ನಗರ ಎಂಬ ಬಿರುದನ್ನು ಕಾಪಾಡಲಿ ಎಂದು ಆಗ್ರಹಿಸಲಾಯಿತು.

ಭಜರಂಗದಳದ ಮುಖಂಡ ಮೈ.ಕಾ.ಪ್ರೇಮ್‌ಕುಮಾರ್, ವೇದಿಕೆಯ ಕಾರ್ಯದರ್ಶಿ ರಾಕೇಶ್ ಭಟ್, ಉಪಾಧ್ಯಕ್ಷ ಕುಮಾರ್ ಗೌಡ, ಯುವ ಘಟಕದ ಅಧ್ಯಕ್ಷ ಗುರುರಾಜ್ ಶೆಟ್ಟಿ, ದೀಪಕ್, ರವಿ, ಸ್ಥಳೀಯ ಮುಖಂಡರಾದ ರಾ.ಪರಮೇಶ್ ಗೌಡ, ಸುರೇಂದ್ರ, ದೇವರಾಜ ವಾರುಕಟ್ಟೆ ಯುವ ಬ್ರಿಗೇಡ್ ಅಧ್ಯಕ್ಷ ಬಿ.ಸಂದೀಪ್, ಶ್ರೀನಿವಾಸ್ ಶೆಟ್ಟಿ, ಕುಮಾರ್, ಕೃಷ್ಣಕುಮಾರ್ ಮತ್ತಿತರರಿದ್ದರು.

ಪಟಾಕಿ ಕಿಡಿ ಸಿಡಿದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಕಣ್ಣಿಗೆ ಗಾಯ



ಕುಣಿಗಲ್: ಭಾನುವಾರ ಬೆಳಗ್ಗೆ ಪಟ್ಟಣದ ಹುಚ್ಚಮಾಸ್ತಿಗೌಡ ವೃತ್ತದಲ್ಲಿ ಪಟಾಕಿ ಸಿಡಿಸಿದ ಪರಿಣಾಮ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರ ಕಣ್ಣಿಗೆ ಗಾಯವಾಗಿದೆ. ಸಚಿವ ರಾಜಣ್ಣ ಅವರು ಶಕ್ತಿ ಯೋಜನೆ ಉದ್ಘಾಟನೆಗೆಂದು ತುಮಕೂರಿನಿಂದ ಕುಣಿಗಲ್ ಮೂಲಕ ಹಾಸನಕ್ಕೆ ತೆರಳುತ್ತಿದ್ದ ವೇಳೆ ಈ ಘಟನೆ ನಡೆದಿದೆ.

ಕುಣಿಗಲ್ ಪಟ್ಟಣದ ಹುಚ್ಚಮಾಸ್ತಿಗೌಡ ವೃತ್ತದ ಬಳಿ ಸಚಿವ ರಾಜಣ್ಣ ಅವರ ಕಟ್ಟಾ ಬೆಂಬಲಿಗರು, ಹಿತೈಷಿಗಳು, ಕಾಂಗ್ರೆಸ್ ಕಾರ್ಯಕರ್ತರು ಜಮಾಯಿಸಿದರು. ಹೂಮಾಲೆ ಹಾಕಿ ಅಭಿನಂದನೆ ಸಲ್ಲಿಸಿ ಸಚಿವರನ್ನು ಆತ್ಮೀಯವಾಗಿ ಬರಮಾಡಿಕೊಂಡರು.

ಸಂಭ್ರಮದ ವಾತಾವರಣದ ಅಂಗವಾಗಿ ಸುತ್ತಮುತ್ತಲಿನ ಪ್ರದೇಶದಲ್ಲಿ ಪಟಾಕಿ ಸಿಡಿಸಲಾಯಿತು. ದುರದೃಷ್ಟವಶಾತ್, ಪಟಾಕಿಯ ಕಿಡಿ ಆಕಸ್ಮಿಕವಾಗಿ ಸಚಿವ ರಾಜಣ್ಣ ಅವರ ಬಲಗಣ್ಣಿಗೆ ತಗುಲಿದೆ. ಅವರನ್ನು ಕೂಡಲೇ ಸಮೀಪದ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಪ್ರಾಥಮಿಕ ಚಿಕಿತ್ಸೆಯ ನಂತರ, ಸಹಕಾರ ಸಚಿವರು ತಮ್ಮ ನಿಗದಿತ ಚಟುವಟಿಕೆಗಳನ್ನು ಮುಂದುವರೆಸಲು ಹಾಸನಕ್ಕೆ ತೆರಳಿದರು.



ನೊವಾಕ್ ಜೊಕೊವಿಕ್‌ಗೆ 23ನೇ ಗ್ರ್ಯಾಂಡ್ ಸ್ಲಾಮ್ ಕಿರೀಟ



ಪ್ಯಾರಿಸ್, ಜೂ.11– ಫ್ರೆಂಚ್ ಓಪನ್ ಫೈನಲ್‌ನಲ್ಲಿ ನಾರ್ವೆಯ ಕಾಸ್ಪರ್ ರೂಡ್ ಅವರನ್ನು ಸೋಲಿಸುವ ಮೂಲಕ ಸರ್ಬಿಯಾದ ನೊವಾಕ್ ಜೊಕೊವಿಕ್ ದಾಖಲೆಯ 23ನೇ ಸಿಂಗಲ್ಸ್ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಭಾನುವಾರ ಫಿಲಿಪ್ ಚಾಟ್ರಿಯರ್ ಕೋರ್ಟ್‌ನಲ್ಲಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಜೊಕೊವಿಕ್ ಅವರು ನಾರ್ವೆಯ ಕ್ಯಾಸ್ಪರ್ ರೂಡ್ ವಿರುದ್ಧ 7–6 (7–1), 6–3, 7–5ರ ಅಂತರದಲ್ಲಿ ಗೆಲುವು ದಾಖಲಿಸಿದರು.

ದಾಖಲೆಯ 23ನೇ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿ ಗೆಲ್ಲುವುದರೊಂದಿಗೆ ನೊವಾಕ್ ಜೊಕೊವಿಕ್ ಗ್ರ್ಯಾಂಡ್ ಸ್ಲಾಮ್‌ಗಳ ಸಂಖ್ಯೆಯಲ್ಲಿ ದಂತಕಥೆ ರೋಜರ್ ಫೆಡರರ್, ಸ್ಪ್ಯಾನಿಷ್ ಸ್ಟಾರ್ ರಾಫೆಲ್ ನಡಾಲ್ ಅವರನ್ನು ಹಿಂದಿಕ್ಕಿದ್ದಾರೆ. ಟೆನಿಸ್ ಇತಿಹಾಸದಲ್ಲಿ ನೊವಾಕ್ ಜೊಕೊವಿಕ್ ಈಗ ಪುರುಷರ ಸಿಂಗಲ್ಸ್‌ನಲ್ಲಿ ಅತಿ ಹೆಚ್ಚು ಗ್ರ್ಯಾಂಡ್ ಸ್ಲಾಮ್‌ಗಳನ್ನು ಗೆದ್ದ ದಾಖಲೆ ಬರೆದಿದ್ದಾರೆ.

ಜೊಕೊವಿಕ್ 3ನೇ ಬಾರಿಗೆ ಫ್ರೆಂಚ್ ಓಪನ್ ಪ್ರಶಸ್ತಿ ಗೆದ್ದಿದ್ದು, ಎಲ್ಲಾ ನಾಲ್ಕು ಗ್ರ್ಯಾಂಡ್ ಸ್ಲಾಮ್ (ಆಸ್ಟ್ರೇಲಿಯಾ ಓಪನ್, ವಿಂಬಲ್ಡನ್, ಫ್ರೆಂಚ್ ಓಪನ್, ಯುಎಸ್ ಓಪನ್) ಪ್ರಶಸ್ತಿಗಳನ್ನು ಕನಿಷ್ಠ 3 ಬಾರಿ ಗೆದ್ದ ಮೊದಲ ಪುರುಷ ಟೆನಿಸ್ ಸ್ಟಾರ್ ಎಂಬ ದಾಖಲೆಯನ್ನು ಜೊಕೊವಿಕ್ ಬರೆದಿದ್ದಾರೆ.

9ನೇ ವರ್ಷದ ಸವಿನೆನಪು



ಡಿ.ಮಹಾದೇವಮ್ಮ

ನೀವು ನಮ್ಮನ್ನು ಅಗಲಿ ಇಂದಿಗೆ 9 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು

ಎಂ.ಪದ್ಮಾವತಿ ಜಯಶಂಕರ್, ಮೊಮ್ಮಕ್ಕಳು: ಜೆ.ಕಿರಣ್‌ಕುಮಾರ್ ಹಾಗೂ ಜೆ.ನವೀನ್‌ಕುಮಾರ್

ಗ್ರಾಮಪಂಚಾಯಿತಿ ಕಾರ್ಯಾಲಯ

ಕಂಪಲಾಪುರ, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ
Email: kampalapura.pptn.mys@gmail.com

ಬಹಿರಂಗ ಹರಾಜು ಇಸ್ತಿಹಾರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ದಿನಾಂಕ 14–6–2023 ನೇ ಬುಧವಾರ ಬೆಳಗ್ಗೆ 11 ಕ್ಕೆ ಕಂಪಲಾಪುರ ಗ್ರಾ.ಪಂ.ಸಭಾಂಗಣದಲ್ಲಿ ಈ ಕೆಳಗೆ ನಮೂದಿಸಿರುವ ಹಕ್ಕುಗಳ ಬಹಿರಂಗ ಹರಾಜು ಮಾಡಲಾಗುವುದು. ಷರತ್ತುಗಳು ಅನ್ವಯವಾಗಿದ್ದು, ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ರೂ.10 ಸಾವಿರ ಮುಂಗಡಹಣ ಪಾವತಿಸಬೇಕು.

ಹರಾಜು ಮಾಡುವ ಬಾಬ್ತುಗಳ ವಿವರ

1. ಕಂಪಲಾಪುರ ಗ್ರಾಮದ ಕೆಂಪಿಕೆರೆ, ಬೋರೆಹೊಸಹಳ್ಳಿ ಗ್ರಾಮದ ಸುಂಡೆಕೆರೆ, ಗೌಡನಕೆರೆ (3 ವರ್ಷಕ್ಕೆ)
2. ಸಂತೆ ಸುಂಕ (1 ವರ್ಷಕ್ಕೆ)
3. ಕೈಗಾರಿಕಾ ಕಟ್ಟಡಗಳು (3 ವರ್ಷಕ್ಕೆ)
4. ರಾವಂದೂರು ರಸ್ತೆಯ 3 ಮಳಿಗೆಗಳು (3 ವರ್ಷಕ್ಕೆ)

ಹೆಚ್ಚಿನ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/– ಅಧ್ಯಕ್ಷರು, ಗ್ರಾ.ಪಂ. ಕಂಪಲಾಪುರ.
ಸಹಿ/–ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗ್ರಾ.ಪಂ. ಕಂಪಲಾಪುರ.